ಜನಶಕ್ತಿ

ದುಡಿಯುವ ಜನರ ಪ್ರಾಣ ಮಿತ್ರ


ಕನ್ನಡ ವಾರಪತ್ರಿಕೆ

ಗೋಡ್ಸೆಗೆ ದೇಶಭಕ್ತನ ಪಟ್ಟ




ಸಂಪುಟ 13 | ಸಂಚಿಕೆ 21 | ಮೇ 20-26, 2019 | ಪುಟ 16 | ರೂ. 10/-

web: www.janashakthi.co.in e-mail : js_weekly@yahoo.com



ಸಂವಿಧಾನದ ಕಾಲಾಳು ತೀಸ್ತಾ ಸೆತಲ್ವಾಡ್



ಬೌದ್ಧ ದರ್ಶನ

ಆಲೂಗಡ್ಡೆ ರೈತರು ಮತ್ತು ಪೆಪ್ಸಿ ಕಂಪನಿಯ ಸಂಘರ್ಷ





ಜೀವದ ಉಗಮ ಮತ್ತು ವಿಕಾಸ

ಕೊಲ್ಕತದಲ್ಲಿ ಬಿಜೆಪಿ ಅಧ್ಯಕ್ಷರ ರೋಡ್‌ಷೋ ವೇಳೆಯಲ್ಲಿ ಕೇಸರಿ ಪಡೆಯ ವಿಧ್ವಂಸಕ ಕೃತ್ಯ: ಪಂಡಿತ ಈಶ್ವರಚಂದ್ರ ವಿದ್ಯಾಸಾಗರ ಪುತ್ಥಳಿ ನಾಶ-ಎಡಪಕ್ಷಗಳ ಬೃಹತ್ ಪ್ರತಿಭಟನೆ

ಮೇ 14 ರಂದು ಬಿಜೆಪಿ ಅಧ್ಯಕ್ಷ ಅಮಿತ್ ಷಾ ಚುನಾವಣಾ ರೋಡ್ ಶೋ ಸಂದರ್ಭದಲ್ಲಿ ಉತ್ತರ ಕೊಲ್ಕತಾದ ಐತಿಹಾಸಿಕ ವಿದ್ಯಾಸಾಗರ ಕಾಲೇಜಿನಲ್ಲಿ ದಾಂಧಲೆ ಮತ್ತು ಹಿಂಸಾಚಾರವನ್ನು ಖಂಡಿಸಿ ಮರುದಿನ ಎಡರಂಗದ ನೇತೃತ್ವದಲ್ಲಿ ಒಂದು ಬೃಹತ್ ಪ್ರತಿಭಟನಾ ರ್‍ಯಾಲಿ ನಡೆಯಿತು. ಕೊಲ್ಕತಾ ಮತ್ತು ಸುತ್ತಲಿನ 9 ಲೋಕಸಭಾ ಕ್ಷೇತ್ರಗಳಲ್ಲಿ ಮೇ 19ರಂದು ಈ ಸಾರ್ವತ್ರಿಕ ಚುನಾವಣೆಗಳ ಕೊನೆಯ ಹಂತದಲ್ಲಿ ಮತದಾನ ನಡೆಯಲಿದ್ದು, ಈ ರೋಡ್ ಷೋ ಮತ್ತು ಹಿಂಸಾಚಾರ ಈ ಹಿನ್ನೆಲೆಯಲ್ಲಿ ನಡೆದಿದೆ.

ಟಿಎಂಸಿ ಮತ್ತು ರೋಡ್‌ಷೋದಲ್ಲಿದ್ದ ಬಿಜೆಪಿ-ಆರೆಸ್ಸೆಸ್ ಕಾರ್ಯಕರ್ತರ ನಡುವೆ ತಿಕ್ಕಾಟದ ವೇಳೆ ನಡೆದ ವಿಧ್ವಂಸಕ ಕೃತ್ಯದಲ್ಲಿ ಪಂಡಿತ ಈಶ್ವರಚಂದ್ರ ವಿದ್ಯಾಸಾಗರ ಅವರ ಪ್ರತಿಮೆಯನ್ನು ಧ್ವಂಸ ಮಾಡಲಾಯಿತು. ಇದು ಕೊಲ್ಕತಾ ಮತ್ತು ಇಡೀ ಬಂಗಾಲಕ್ಕೆ ಆಘಾತ ಉಂಟುಮಾಡಿದೆ, ಆಕ್ರೋಶವನ್ನು ಎಬ್ಬಿಸಿದೆ. ಏಕೆಂದರೆ ಪಂಡಿತ ಈಶ್ವರಚಂದ್ರ ವಿದ್ಯಾಸಾಗರ ಬಂಗಾಲದ ಪ್ರಖ್ಯಾತ ಸಮಾಜ ಸುಧಾರಕ, ಶಿಕ್ಷಣವೇತ್ತ ಮತ್ತು ಎಲ್ಲಕ್ಕೂ ಹೆಚ್ಚಾಗಿ 19ನೇ ಶತಮಾನದಲ್ಲಿ ಬಂಗಾಳದ ನವೋದಯ ಆಂದೋಲನದ ಹರಿಕಾರರಲ್ಲಿ ಒಬ್ಬರು ಮತ್ತು ವಿದ್ಯಾಸಾಗರ ಕಾಲೇಜು ಅವರೇ 1872ರಲ್ಲಿ ಸ್ಥಾಪಿಸಿದ್ದ ವಿದ್ಯಾಸಂಸ್ಥೆ, ಈಗ ಅವರ ನೆನಪನ್ನು ಹೊತ್ತಿರುವ ಐತಿಹಾಸಿಕ ಸಂಸ್ಥೆ. ಇದು ಭಾರತೀಯರೇ ಭಾರತೀಯ ವಿದ್ಯಾರ್ಥಿಗಳಿಗಾಗಿ ಸ್ಥಾಪಿಸಿದ ಮೊದಲ ಭಾರತೀಯ ಕಾಲೇಜು ಎನ್ನಲಾಗಿದೆ.

ಈ ಬೃಹತ್ ಪ್ರತಿಭಟನಾ ರ್‍ಯಾಲಿಯಲ್ಲಿ ಸಿಪಿಐ(ಎಂ)ನ ಪ್ರಧಾನ ಕಾರ್ಯದರ್ಶಿ ಸೀತಾರಾಮ್ ಯೆಚುರಿ, ಪೊಲಿಟ್‌ಬ್ಯುರೊ ಸದಸ್ಯರುಗಳಾದ ಪ್ರಕಾಶ ಕಾರಟ್, ಮಹಮ್ಮದ್ ಸಲೀಂ, ತಪನ್‌ಸೇನ್, ನೀಲೋತ್ಪಲ ಬಸು, ಎಡರಂಗದ ಅಧ್ಯಕ್ಷ ಬಿಮನ್ ಬಸು, ಸಿಪಿಐ(ಎಂ) ರಾಜ್ಯ ಕಾರ್ಯದರ್ಶಿ ಸೂರ್ಯಕಾಂತ್ ಮಿಶ್ರ, ಸಿಪಿಐ, ಫಾರ್ವರ್ಡ್ ಬ್ಲಾಕ್ ಮತ್ತು ಆರ್‌ಎಸ್‌ಪಿ ರಾಜ್ಯ ಮುಖಂಡರು ಮತ್ತು ಸಾಮೂಹಿಕ ಸಂಘಟನೆಗಳ ರಾಜ್ಯ ಮುಖಂಡರುಗಳಲ್ಲದೆ, ವಿದ್ಯಾಸಾಗರ ಫೌಂಡೇಶನ್ ಕಾರ್ಯದರ್ಶಿ ಅನೂಪ್ ಸರ್ಕಾರ್ ಕೂಡ ಭಾಗವಹಿಸಿದ್ದರು. ಸುಡುಬಿಸಿಲನ್ನೂ ಲೆಕ್ಕಿಸದೆ



ಎಡ ಕಾರ್ಯಕರ್ತರು ಗಳಲ್ಲದೆ, ವಿದ್ಯಾರ್ಥಿಗಳು, ಪ್ರಾಧ್ಯಾಪಕರು ಮತ್ತು ಹಲವು ಸಾಂಸ್ಕೃತಿಕ ಹಾಗೂ ಸಾಹಿತ್ಯಿಕ ವ್ಯಕ್ತಿಗಳೂ ಇದರಲ್ಲಿ ಭಾಗವಹಿಸಿದರು.

ಈ ಸಂದರ್ಭದಲ್ಲಿ ಮಾತಾಡುತ್ತ ಸೀತಾರಾಮ್ ಯೆಚುರಿಯವರು ಇದು ದೇಶದಲ್ಲಿ ವಿಚಾರವಾದದ ಪ್ರತೀಕವಾಗಿರುವ ವ್ಯಕ್ತಿಗಳಿಗೆ ಅಗೌರವ ತೋರಿಸುವ ಮತ್ತು ಅವರ ಹೆಸರುಗೆಡಿಸುವ ಬಿಜೆಪಿ-ಆರೆಸ್ಸೆಸ್‌ನ ಆಟದ ಯೋಜನೆ ಎಂದು ಹೇಳಿದರು. ವಿದ್ಯಾಸಾಗರರು ಬಂಗಾಲಿ ಸಾಂಸ್ಕೃತಿಕ ನವೋದಯದ ಒಬ್ಬ ಹರಿಕಾರರು ಮಾತ್ರವಲ್ಲ, ದೇಶದ ಮೇರು ವಿಚಾರವಾದಿಗಳಲ್ಲಿ ಒಬ್ಬರು. ಚುನಾವಣಾ ಆಯೋಗ ಮತ್ತು ರಾಜ್ಯ ಆಡಳಿತದ ಬಳಿ ವಿಧ್ವಂಸಕ ಕೃತ್ಯದ ವೀಡಿಯೋ ಚಿತ್ರಣಗಳಿವೆ. ಅದರಿಂದ ವಿದ್ಯಾಸಾಗರರ ಪ್ರತಿಮೆಯನ್ನು ಧ್ವಂಸ ಮಾಡಿದವರು, ಕಾಲೇಜಿನ ಆವರಣದಲ್ಲಿ ಬೇರೆ ಧ್ವಂಸಕಾರ್ಯ ನಡೆಸಿದವ ಕಿಡಿಗೇಡಿಗಳನ್ನು ಗುರುತಿಸಿ ತಕ್ಷಣವೇ ಬಂಧಿಸಬೇಕು ಎಂದು ಯೆಚುರಿ ಆಗ್ರಹಿಸಿದರು.

ಅಮಿತ್ ಷಾ ಮತ್ತು ಪಶ್ಚಿಮ ಬಂಗಾಲ ಮುಖ್ಯಮಂತ್ರಿಗಳ ದಾವೆಗಳು, ಪ್ರತಿದಾವೆಗಳನ್ನು ತಿರಸ್ಕರಿಸುತ್ತ, ಯೆಚುರಿ, ಈ ಎರಡು ಪಕ್ಷಗಳ ಅಪಾಯಕಾರಿ ಕೋಮುವಾದಿ ಸ್ಪರ್ಧೆಯಲ್ಲಿ ವಿದ್ಯಾಸಾಗರರಂತಹ ಮೇರು ವ್ಯಕ್ತಿಗಳ ಪ್ರತಿಮೆಗಳನ್ನೂ ಅಪವಿತ್ರಗೊಳಿಸಲಾಗುತ್ತಿದೆ. ಟಿಎಂಸಿ ತಾನೇ ಬಿಜೆಪಿಗೆ ಪರ್ಯಾಯ ಎಂದು ತೋರಿಸ ಬಯಸಿದರೆ, ಬಿಜೆಪಿ ತಾನೇ ಟಿಎಂಸಿಗೆ ಪರ್ಯಾಯ ಎಂದು ತೋರಿಸ ಬಯಸುತ್ತಿದೆ. ಈ ಸ್ಪರ್ಧೆಯಲ್ಲಿ ಅವು ರಾಜ್ಯದಲ್ಲಿನ ವಾತವರಣವನ್ನು ಕೆಡಿಸುತ್ತಿವೆ. ಬಂಗಾಲದ ಸಾಂಸ್ಕೃತಿಕ ಹಂದರವನ್ನು ಮತ್ತು ರಾಷ್ಟ್ರನಿರ್ಮಾಣದಲ್ಲಿ ಅದರ ಕೊಡುಗೆಯನ್ನು ಉಳಿಸಿಕೊಳ್ಳಲು, ಈ ಶಕ್ತಿಗಳನ್ನು ಮೂಲೆಗೆ ತಳ್ಳುವುದು ಅಗತ್ಯವಾಗಿದೆ ಎಂದು ಅವರು ಹೇಳಿದರು.

ಈ ವಿಧ್ವಂಸಕ ಕೆಲಸ ಮಾಡಿದವರು ಬಂಗಾಲದವರು ಎಂದು ಯೋಚಿಸಲೂ ನಾಚಿಕೆಯಾಗುತ್ತದೆ, ಅವರು ಬಂಗಾಲದವರಿರಲಿಕ್ಕಿಲ್ಲ ಎಂದು ನನ್ನ ಭಾವನೆ, ಎಂದು ರಾಜ್ಯದ ಹಿರಿಯ ಎಡಪಂಥೀಯ ಮುಖಂಡ ಬಿಮನ್ ಬಸು ಹೇಳಿದರು. ಈ ಬಗ್ಗೆ ತನಿಖೆ ನಡೆಸಬೇಕು, ಇದು ಚುನಾವಣೆಯ ಸಂದರ್ಭದಲ್ಲಿ ನಡೆದಿರುವುದರಿಮದ ಚುನಾವಣಾ ಆಯೋಗ ಈ ಬಗ್ಗೆ ತನಿಖೆಯನ್ನು ನಡೆಸಬೇಕು ಮತ್ತು ಸೂಕ್ತ ಶಿಕ್ಷೆಯನ್ನು ವಿಧಿಸಬೇಕು ಎಂದು ಅವರು ಹೇಳಿದರು.

ಹಿಂಸಾಚಾರ ನಡೆಸಿದ ಬಿಜೆಪಿ, ಟಿಎಂಸಿ ಪುಂಡರ ವಿರುದ್ಧ ಕ್ರಮ ಕೈಗೊಳ್ಳುವುದನ್ನು ಬಿಟ್ಟು ಪ್ರಚಾರವನ್ನೇ ನಿಲ್ಲಿಸಿರುವುದು ಅರ್ಥವಾಗದ ಸಂಗತಿ-ಯೆಚುರಿ

ಕೊಲ್ಕತಾದ ಮೇ 14 ರ ವಿಧ್ವಂಸಕ ಕೃತ್ಯದ ಬೆನ್ನಲ್ಲೇ ಚುನಾವಣಾ ಆಯೋಗ ಅಲ್ಲಿ ಇಡೀ ಚುನಾವಣಾ ಪ್ರಚಾರವನ್ನೇ ಮೇ 16 ರ ರಾತ್ರಿ 10 ಗಂಟೆಯಿಂದ 72 ಗಂಟೆಗಳ ಕಾಲ ನಿಷೇಧಿಸಿರುವುದಾಗಿ ಮೇ 15ರಂದು ಪ್ರಕಟಿಸಿದೆ. ಅಲ್ಲಿ ಮೇ 19ರಂದು ಮತದಾನ ನಡೆಯಲಿರುವುದರಿಂದ, ಇದರ ಅರ್ಥ ಅಲ್ಲಿ ಚುನಾವಣಾ ಪ್ರಚಾರ ಗುರುವಾರ ರಾತ್ರಿಯಿಂದಲೇ ಮುಂಗಡವಾಗಿ ಕೊನೆಗೊಂಡಂತಾಗಿದೆ.

ಚುನಾವಣಾ ಆಯೋಗ ಮೊದಲು ಮಾಡಬೇಕಾಗಿದ್ದ ಕೆಲಸವೆಂದರೆ ಹಿಂಸಾಚಾರ ನಡೆಸಿದ ಬಿಜೆಪಿ ಮತ್ತು ಟಿಎಂಸಿ ಪುಂಡರ ವಿರುದ್ಧ ಕ್ರಮ ಕೈಗೊಳ್ಳುವುದು. ಅಂತಹ ಕ್ರಮವನ್ನು ಕೈಗೊಳ್ಳದೆ, ಪ್ರಚಾರವನ್ನೇ ನಿಲ್ಲಿಸಿರುವುದು ಅರ್ಥವಾಗದ ಸಂಗತಿ ಎಂದು ಸಿಪಿಐ(ಎಂ) ಪ್ರಧಾನ ಕಾರ್ಯದರ್ಶಿ ಸೀತಾರಾಮ್ ಯೆಚುರಿ ಹೇಳಿದ್ದಾರೆ.

ಪರಿಸ್ಥಿತಿಯು ಪ್ರಚಾರವನ್ನೇ ನಿಷೇಧಿಸುವಷ್ಟು ಕೆಟ್ಟಿದ್ದರೆ ಮೇ 16ರ ರಾತ್ರಿಯ ವರೆಗೆ ಕಾಯುವ ಅಗತ್ಯವಾದರೂ ಏನು? ಆ ದಿನದ ಪ್ರಧಾನಿಗಳ ಎರಡು ರ್‍ಯಾಲಿಗಳಿಗೆ ಅವಕಾಶ ಕಲ್ಪಿಸಲಿಕ್ಕಾಗಿಯೇನು ಎಂದು ಯೆಚುರಿ ಪ್ರಶ್ನಿಸಿದ್ದಾರೆ.

"ನಾವು ಬಂಗಾಲದಲ್ಲಿ ಕಾನೂನು ವ್ಯವಸ್ಥೆ ಕುಸಿದಿರುವ ಬಗ್ಗೆ, ಆಚಾರ ಸಂಹಿತೆಯ ಉಲ್ಲಂಘನೆಗಳ ಬಗ್ಗೆ ಆಯೋಗಕ್ಕೆ ಬಹಳಷ್ಟು ದೂರುಗಳನ್ನು ಸಲ್ಲಿಸಿದ್ದೇವೆ, ಪತ್ರಗಳನ್ನು ಬರೆದಿದ್ದೇವೆ. ಅವು ಯಾವುದಕ್ಕೂ ಆಯೋಗ ಸ್ಪಂದಿಸಿಲ್ಲ. ನಿಷೇಧವನ್ನು ಪ್ರಕಟಿಸುವ ಚುನಾವಣಾ ಆಯೋಗದ ಪತ್ರದಲ್ಲಿ ಉಲ್ಲಂಘನೆಯ ಭಯ ವ್ಯಕ್ತಪಡಿಸಲಾಗಿದೆ. ಶಸ್ತ್ರಾಸ್ತ್ರಗಳ ಸಂಗ್ರಹ ಅಥವ ಬೇರೆ ಯಾವುದೇ ಉಲ್ಲಂಘನೆಯಿದ್ದರೆ, ಅದನ್ನು ನಿಭಾಯಿಸುವ ವ್ಯವಸ್ಥೆ ಎಲ್ಲಿದೆ? ಇದುವರೆಗೆ ಚುನಾವಣಾ ಆಯೋಗ ಬೇರೇನೂ ಕ್ರಮ ಕೈಗೊಂಡಿಲ್ಲ. ಈ ಕುರಿತ ಅದರ ಮೌನ ಆಳುವ ಪಕ್ಷಗಳ ಪ್ರಯೋಜನಕ್ಕಾಗಿ ಎಂಬ ಭಾವನೆ ಈಗ ವ್ಯಾಪಿಸಿ ಬಿಟ್ಟಿದೆ "ಎಂದು ಯೆಚುರಿ ಹೇಳಿದ್ದಾರೆ.

ಬಿಜೆಪಿ ಮತ್ತು ಟಿಎಂಸಿ ಎರಡೂ ಮೇ 14ರ ವಿಧ್ವಂಸಕ ಕೃತ್ತಕ್ಕೆ ಪರಸ್ಪರರನ್ನು ದೂಷಿಸುತ್ತಿವೆ. ಹಾಗಿದ್ದರೆ, ಚುನಾವಣಾ ಆಯೋಗ ತನ್ನ ಅಧಿಕೃತ ವಿಡಿಯೋಗ್ರಾಫರ್ ಚಿತ್ರಿಸಿಕೊಂಡಿರುವ ವಿಡಿಯೋವನ್ನು ಬಿಡುಗಡೆ ಮಾಡುತ್ತಿಲ್ಲವೇಕೆ ಎಂದೂ ಯೆಚುರಿ ಪ್ರಶ್ನಿಸಿದ್ದಾರೆ.

ಸಿಪಿಐ(ಎಂ)ನ ಪಶ್ಚಿಮ ಬಂಗಾಲ ರಾಜ್ಯ **ಕಾರ್ಯದರ್ಶಿ ಸೂರ್ಯಕಾಂತ್ ಮಿಶ್ರ ಈ ಮೊದಲೇ ಚುನಾವಣಾ ಆಯೋಗಕ್ಕೆ ಪತ್ರ ಬರೆದು, ಚುನಾವಣಾ ಪ್ರಚಾರದ ವೇಳೆಯಲ್ಲಿ ಪೊಲಿಸ್ ಕೂಡ ಆಯೋಗದ ಅಧಿಕಾರ ವ್ಯಾಪ್ತಿಯಲ್ಲಿರುವುದರಿಂದಾಗಿ ಸತ್ಯವನ್ನು ಅನ್ವೇಷಿಸಿ ಘಾಸಿಗೊಂಡಿರುವ ಜನಗಳ ಭಾವನೆಯನ್ನು ಶಮನಗೊಳಿಸುವುದು ಆಯೋಗದ ಕರ್ತವ್ಯವಾಗಿದೆ ಎಂದು ನೆನಪಿಸಿದ್ದರು. ಟಿವಿ ಮಾಧ್ಯಮಗಳು ತೋರಿಸುತ್ತಿರುವ ವೀಡಿಯೋಗಳಲ್ಲಿ ಕೇಸರಿ ಪಟ್ಟಿ ಕಟ್ಟಿಕೊಂಡವರು ದಾಂಧಲೆ ನಡೆಸುತ್ತಿರುವುದು ಕಾಣಿಸುತ್ತಿದೆ. ಈ ಘಟನೆ ಹೇಗೆ ನಡೆಯಿತು, ಅದನ್ನು ಎಸಗಿದವರು ಯಾರು ಎಂದು ಕರಾರುವಾಕ್ಕಾಗಿ ತಿಳಿಯಬೇಕಾಗಿದೆ. ಇದಕ್ಕೆ ಆಯೋಗ ತನ್ನ ಬಳಿಯಿರುವ ವಿಡಿಯೋವನ್ನು ಸಾರ್ವಜನಿಕಗೊಳಿಸಿ, ದುಷ್ಕೃತ್ಯ ಎಸಗಿದವರನ್ನು ಗುರುತಿಸಿ ಕಠಿಣ ಕ್ರಮ ಕೈಗೊಳ್ಳಬೇಕು ಎಂದು ಸೂರ್ಯಕಾಂತ್ ಮಿಶ್ರ ಆಗ್ರಹಿಸಿದ್ದರು.**

ಮೋದಿಯವರ ವಿರುದ್ಧ ಕ್ಷಿಪ್ರ ಕ್ರಮ ಕೈಗೊಳ್ಳಿ, ಚುನಾವಣಾ ಆಯೋಗದ ಪ್ರತಿಷ್ಠೆ, ಗೌರವ, ವಿಶ್ವಾಸಾರ್ಹತೆಯನ್ನು ಎತ್ತಿ ಹಿಡಿಯಿರಿ

- ಮುಖ್ಯ ಚುನಾವಣಾ ಆಯುಕ್ತರಿಗೆ ಯೆಚುರಿಯವರ ಮತ್ತೊಂದು ಪತ್ರ

ಆರನೇ ಘಟ್ಟದ ಮತದಾನದ ಮುನ್ನಾದಿನ ನ್ಯೂಸ್ ನೇಶನ್ ಚಾನಲ್ ಪ್ರಸಾರ ಮಾಡಿರುವ ಒಂದು ಸಂದರ್ಶನದಲ್ಲಿ ಮೋದಿಯವರು ಒಂದು ಅತಿರೇಕದ ದಾವೆ ಇಟ್ಟಿದ್ದಾರೆ. ಭಾರತೀಯ ವಾಯುಪಡೆಯ ಗಡಿಯಾಚೆಗಿನ ಮಿಶನ್ ಗೆ ತಾನು ಹವಾಮಾನ ಕೆಟ್ಟದಾಗಿದ್ದರೂ ಮತ್ತು ವೃತ್ತಿಪರ ಪರಿಣಿತರ ಸಲಹೆಯ ವಿರುದ್ಧ ಮಂಜೂರಾತಿಯನ್ನು, ಮೋಡಗಳು ಭಾರತೀಯ ಫೈಟರ್ ಜೆಟ್‌ಗಳನ್ನು ಪಾಕಿಸ್ತಾನಿ ರಾಡಾರ್ ಗಳಿಂದ ಮರೆಮಾಚುತ್ತವೆ ಎಂಬ ಕಾರಣಕ್ಕೆ ನೀಡಿರುವುದಾಗಿ ಹೇಳಿಕೊಂಡಿದ್ದಾರೆ. ಈ ಮಿಶನ್‌ನ ಯೋಜನೆ ರಚಿಸಿದ್ದ ರಕ್ಷಣಾ ಪರಿಣಿತರ ಸಂದೇಹಗಳನ್ನು ನಿವಾರಿಸಲು ತನ್ನ "ಕಚ್ಚಾ ಜಾಣ್ಮೆ" ಯನ್ನು ಉಪಯೋಗಿಸಿದೆ ಎಂದು ಈ ಸಂದರ್ಶನದಲ್ಲಿ ಅವರು ತನ್ನ ಬೆನ್ನು ತಟ್ಟಿಕೊಳ್ಳುತ್ತ "ನನ್ನನ್ನು ದೂಷಿಸುವ ದೇಶದ ಪಂಡಿತರಿಗೆ ಇದು ಹೊಳೆಯಲೇ ಇಲ್ಲ ಎಂದು ನನಗೆ ಆಶ್ಚರ್ಯವಾಗುತ್ತಿದೆ" ಎಂದೂ ಅವರು ಹೇಳಿದರು. ಇದು ದೇಶಾದ್ಯಂತ ಟೀಕೆಗಳಿಗೆ, ನಗೆಚಾಟಿಕೆಗಳಿಗೆ ಗುರಿಯಾಗಿದೆ.

ಈ ಬಗ್ಗೆ ಟ್ವಿಟರ್ ನಲ್ಲಿ ಟಿಪ್ಪಣಿ ಮಾಡುತ್ತ, ಸಿಪಿಐ(ಎಂ) ಪ್ರಧಾನ ಕಾರ್ಯದರ್ಶಿ ಸೀತಾರಾಮ್ ಯೆಚುರಿಯವರು **"ಮೋದಿಯವರ ಪದಗಳು ನಿಜಕ್ಕೂ ನಾಚಿಕೆಗೇಡಿ. ಇನ್ನೂ ಮುಖ್ಯವೆಂದರೆ, ಅವು ನಮ್ಮ ವಾಯು ಪಡೆ ಅಜ್ಞಾನಿ ಮತ್ತು ವೃತ್ತಿಪರ ಪಡೆಯಲ್ಲ ಎಂದು ಅವಮಾನ ಮಾಡಿವೆ"** ಎಂದು ಖೇದ ವ್ಯಕ್ತಪಡಿಸಿದ್ದಾರೆ. **ಅವರು ಹೀಗೆಲ್ಲ ಮಾತಾಡುತ್ತಿರುವುದೇ ರಾಷ್ಟ್ರ-ವಿರೋಧಿ ನಡವಳಿಕೆ. ಯಾವ ದೇಶಪ್ರೇಮಿಯೂ ಹೀಗೆ ಹೇಳಲಾರ. ರಾಷ್ಟ್ರೀಯ ಭದ್ರತೆಯೆಂಬುದು ಹಗುರವಾಗಿ ಮಾತಾಡುವ ವಿಷಯವಲ್ಲ. ಮೋದಿಯಿಂದ ಇಂತಹ ಹೇಳಿಕೆ ಅನಾಹುತಕಾರಿ, ಇಂತಹವರು ಭಾರತದ ಪ್ರಧಾನ ಮಂತ್ರಿಯಾಗಿ ಉಳಿಯಬಾರದು ಎಂದು ಮುಂದುವರೆದು ಯೆಚುರಿ ಟಿಪ್ಪಣಿ ಮಾಡಿದ್ದಾರೆ.**

ಈ ಕುರಿತು ಸಿಪಿಐ(ಎಂ) ಪ್ರಧಾನ ಕಾರ್ಯದರ್ಶಿಗಳು ಮುಖ್ಯ ಚುನಾವಣಾ ಆಯುಕ್ತರಿಗೆ ಮೇ 12 ರಂದು ಮತ್ತೊಂದು ಪತ್ರ ಬರೆದಿದ್ದಾರೆ. ಯೆಚುರಿಯವರು ಮುಖ್ಯ ಚುನಾವಣಾ ಆಯುಕ್ತರಿಗೆ ಬರೆದಿರುವ ಪತ್ರದ ಪೂರ್ಣ ಪಾಟವನ್ನು ಈ ಮುಂದೆ ಕೊಡಲಾಗಿದೆ:

ಪ್ರಿಯ ಶ್ರೀ ಅರೋರಾ ಜೀ,

ನಾನು ಮತ್ತೊಮ್ಮೆ ನಿಮಗೆ ಪತ್ರ ಬರೆಯಲೇಬೇಕಾಗಿ ಬಂದಿದೆ. ಇದು ನಮ್ಮ ಪ್ರಜಾಪ್ರಭುತ್ವಕ್ಕೆ ಒಂದು ಗಂಭೀರ ಮಹತ್ವದ ವಿಷಯ. ಮುಕ್ತ ಮತ್ತು ನ್ಯಾಯಪೂರ್ಣ ಚುನಾವಣೆಗಳೇ ಪ್ರಜಾಪ್ರಭುತ್ವದ ಆಧಾರ. ಮಾದರಿ ಆಚಾರ ಸಂಹಿತೆಯನ್ನು ಅನುಷ್ಠಾನಗೊಳಿಸಿ, ಮತ್ತು ತಾನು ಆಗಾಗ ಪ್ರಕಟಿಸಿರುವ ಮಾರ್ಗಸೂತ್ರಗಳನ್ನು ಕಟ್ಟುನಿಟ್ಟಾಗಿ ಜಾರಿಗೆ ತಂದು ಮುಕ್ತ ಮತ್ತು ನ್ಯಾಯಪೂರ್ಣ ಚುನಾವಣೆಗಳನ್ನು ನಡೆಸುವ ಕೆಲಸವನ್ನು ಚುನಾವಣಾ ಆಯೋಗಕ್ಕೆ ವಹಿಸಲಾಗಿದೆ. ಮಾನ್ಯ ಸುಪ್ರಿಂ ಕೋರ್ಟ್, ಇದನ್ನು ಕಣ್ಣುಕುಕ್ಕುವಂತೆ ಉಲ್ಲಂಘಿಸುವವರ ವಿರುದ್ಧ ಕೂಡಲೇ ಮತ್ತು ಕಟ್ಟುನಿಟ್ಟಾದ ಕ್ರಮವನ್ನು ಕೈಗೊಳ್ಳಬೇಕು ಎಂದು ಚುನಾವಣಾ ಆಯೋಗಕ್ಕೆ ಹೇಳುವಾಗ ಇದನ್ನು ಪುನರುಚ್ಚರಿಸಿದೆ.

ಆದರೆ ಬಿಜೆಪಿ ಮುಖಂಡರು ಮತ್ತು ಹೊರಹೋಗುತ್ತಿರುವ ಪ್ರಧಾನ ಮಂತ್ರಿಗಳ ಮೇಲಿನ ಇತ್ತೀಚಿನ ನಿರ್ಧಾರಗಳನ್ನು ನೋಡಿದರೆ ಅವರು ಮಾದರಿ ಆಚಾರ ಸಂಹಿತೆ ಮತ್ತು ಮಾರ್ಗಸೂತ್ರಗಳ ವ್ಯಾಪ್ತಿಯ ಹೊರಗೆ ಇದ್ದಾರೇನೋ ಎಂಬ ಭಾವನೆ ವ್ಯಾಪಕವಾಗಿ ಉಂಟಾಗಿದೆ. ಆದ್ದರಿಂದ ಇನ್ನಷ್ಟು ಭಂಡ

ಪುಟ 7 ನೋಡಿ

ಸಂಪಾದಕೀಯ

“ಕೋಮುವಾದಿ ಶಕ್ತಿಗಳನ್ನು ದೂರವಿಡಲು ಒಂದಾಗಿದ್ದೇವೆ”

‘ಕೋಮುವಾದಿ ರಾಜಕೀಯ ಶಕ್ತಿಗಳನ್ನು ದೂರವಿಡಲು ನಾವು ಒಂದಾಗಿದ್ದೇವೆ’ ಎಂದು ರಾಜ್ಯದ ಕಾಂಗ್ರೆಸ್ ಮತ್ತು ಜೆಡಿಎಸ್ ಶಾಸಕರು ಹೇಳುವಂತಾಗಿರುವುದು ಈ ಚುನಾವಣೆಯ ಒಂದು ಗಮನಾರ್ಹವಾದ ಹಾಗೂ ಸ್ವಾಗತಾರ್ಹವಾದ ಬೆಳವಣಿಗೆಯಾಗಿದೆ. ಹಿಂದೆಂದೂ ಈ ಎರಡು ಜಾತ್ಯಾತೀತ ಪಕ್ಷಗಳ ನಾಯಕರಾಗಲಿ, ಕಾರ್ಯಕರ್ತರೇ ಆಗಿರಲಿ, ಇಂತಹ ಘೋಷಣೆಯನ್ನು ಮಾಡಿರಲಿಲ್ಲ. ಈ ಪಕ್ಷಗಳ ಕೆಲವು ಪ್ರಮುಖರು ‘ನಮಗೆ ಯಾವುದೇ ಸಿದ್ಧಾಂತದಲ್ಲಿ ನಂಬಿಕೆಯಿಲ್ಲ. ಜಾತ್ಯಾತೀತ (ಸೆಕ್ಯೂಲರ್) ಎಂಬ ಪದದ ಅರ್ಥವೇ ನಮಗೆ ಗೊತ್ತಿಲ್ಲ’ ಎಂದು ಬಹಿರಂಗವಾಗಿಯೇ ಹೇಳುತ್ತಿದ್ದರು. ಆದರೆ ಅವರು ಈಗ ಪಾಠ ಕಲಿಯುತ್ತಿದ್ದಾರೆ. ವಸ್ತು ನಿಷ್ಠ ಪರಿಸ್ಥಿತಿ ಅವರಿಗೆ ಪಾಠ ಕಲಿಸಿದೆ. ಪರ ಹಾಗೂ ವಿರುದ್ಧ ಸಿದ್ಧಾಂತಗಳ ಮರ್ಮವನ್ನು ಅವರು ಅನುಭವದಿಂದ ಅರ್ಥಮಾಡಿಕೊಳ್ಳುವಂತಾಗಿದೆ. ಇದುವೇ ಈ ಸಲದ ವಿಧಾನ ಸಭಾ ಹಾಗೂ ಲೋಕಸಭಾ ಚುನಾವಣೆಗಳಲ್ಲಿ ಮೂಡಿಬಂದ ಅತ್ಯಂತ ಸಕಾರಾತ್ಮಕ ಬೆಳವಣಿಗೆ.

ಹಾಗೆಂದ ಮಾತ್ರಕ್ಕೆ ಈ ಎರಡು ಪಕ್ಷಗಳ ಮುಖಂಡರಿಗೆ ಮತ್ತು ಕಾರ್ಯಕರ್ತರೆಲ್ಲರಿಗೂ ಈ ಬೆಳವಣಿಗೆಯ ಮಹತ್ವವನ್ನು ಪೂರ್ಣ ಪ್ರಮಾಣದಲ್ಲಿ ಗ್ರಹಿಸಲು ಸಾಧ್ಯವಾಗಿದೆ ಎಂದು ಹೇಳಲಾಗದು. ಕಾಂಗ್ರೆಸ್ ಮತ್ತು ಜೆಡಿಎಸ್ ಕಾರ್ಯಕರ್ತರಿಗೆ ಯಾವ ಸೈದ್ಧಾಂತಿಕ ಬದ್ಧತೆಯೂ ಇಲ್ಲ. ಆದ್ದರಿಂದ ಅವರಿಗೆ ಪಕ್ಷಾಂತರ ಮಾಡುವುದು, ಆಪರೇಷನ್ ಎಂಬ ವ್ಯಾಪಾರದಲ್ಲಿ ಕುದುರೆಗಳಾಗಿ ಮಾರಾಟವಾಗುವುದು ಅಸಹ್ಯಕರ ಎಂದೆನಿಸುವುದಿಲ್ಲ. ಹೇಗಾದರೂ ಮಾಡಿ ಅಧಿಕಾರಕ್ಕೆ ಬರುವುದೊಂದೇ ಅವರಲ್ಲಿರುವ ಸಾಮಾನ್ಯ ಸಿದ್ಧಾಂತ.

ಇಂತಹ ಹಿನ್ನೆಲೆಯಿಂದ ಬಂದು ವಿಧಾನಸಭೆಯಲ್ಲಿ ಬಹುದೊಡ್ಡ ಪಕ್ಷವಾಗಿ ಹೊರಹೊಮ್ಮಿದ ಕಾಂಗ್ರೆಸ್ ಪಕ್ಷ ಪರಿಸ್ಥಿತಿಯನ್ನು ಅರ್ಥಮಾಡಿಕೊಂಡು, ಕೊಂಚವೂ ವಿಳಂಬ ಮಾಡದೆ ಜೆಡಿಎಸ್ ಗೆ ಮುಖ್ಯಮಂತ್ರಿ ಸ್ಥಾನ ಕೊಟ್ಟದ್ದು ಮತ್ತು ಒಂದು ಜಾತ್ಯಾತೀತ ಮೈತ್ರಿ ಸರ್ಕಾರವನ್ನು ರಚಿಸಲು ಮುಂದಾದದ್ದು ಐತಿಹಾಸಿಕ ಬೆಳವಣಿಗೆ. ಎರಡನೇ ಬಹು ದೊಡ್ಡ ಪಕ್ಷವಾದ ಬಿಜೆಪಿ ಬಕ ಪಕ್ಷಿಯಂತೆ ಕಾಯುತ್ತಾ ಕುಳಿತಿತ್ತು. ಆದರೆ ಕೋಮುವಾದಿ ಶಕ್ತಿಗಳನ್ನು ದೂರ ಇಡುವ ಅಗತ್ಯತೆಯನ್ನು ಹಾಗೂ ಅನಿವಾರ್ಯತೆಯನ್ನು ಮನಗೊಂಡ ಕಾಂಗ್ರೆಸ್ ಬಿಜೆಪಿಯ ದುರಾಸೆಯನ್ನು ನಿರಾಶೆಗೊಳಿಸಿದ್ದು ಒಂದು ಶ್ಲಾಘನೀಯ ಕ್ರಮವಾಗಿದೆ.

ಎಲ್ಲರೂ ಅಭಿವೃದ್ದಿಯ ಕುರಿತು ನಿರರ್ಗಳವಾಗಿ ಮಾತನಾಡುತ್ತಾರೆ. ಆದರೆ ಒಂದು ಸಮಾಜ ಅಭಿವೃದ್ಧಿಯಾಗಬೇಕಾದರೆ ಉತ್ಪಾದನೆ ನಿರಂತರವಾಗಿ ಹೆಚ್ಚಾಗಬೇಕು. ಎಡೆಬಿಡದೆ ಉತ್ಪಾದನೆಯಾಗಬೇಕಾದರೆ ಸಮಾಜದಲ್ಲಿ ಉತ್ಪಾದನೆಗೆ ಪೂರಕವಾದ ಪರಿಸರ ಇರಬೇಕು. ದಿನಬೆಳಗಾದರೆ ಹಳ್ಳಿಗಳಲ್ಲಿ ಮತ್ತು ಪಟ್ಟಣಗಳಲ್ಲಿ, ಗಲ್ಲಿಗಳಲ್ಲಿ, ಕೇರಿಗಳಲ್ಲಿ ಗಲಭೆಗಳು ನಡೆಯುತ್ತಿದ್ದರೆ, ದಿನಗಟ್ಟಲೆ ಕರ್ಫ್ಯೂ ಜಾರಿಯಲ್ಲಿದ್ದರೆ, ಪೊಲೀಸರು ಗಲಭೆಕೋರರನ್ನು ಪತ್ತೆಹಚ್ಚಿ ಬಂಧಿಸುವ ಹೆಸರಿನಲ್ಲಿ ಅಮಾಯಕರನ್ನು ಎಳೆದುಕೊಂಡು ಹೋಗಿ ಹಲ್ಲೆಗೊಳಪಡಿಸಿದರೆ, ಊರುಗಳಲ್ಲಿ ಹಾಹಾಕಾರ ಹಬ್ಬುತ್ತಿದ್ದರೆ ದುಡಿಮೆ ಸಾಧ್ಯವೆ? ಉತ್ಪಾದನೆ ಸಾಧ್ಯವೆ? ಅಭಿವೃದ್ಧಿ ಸಾಧ್ಯವೆ?

ಕೋಮುವಾದಿ, ಮೂಲಭೂತವಾದಿ ರಾಜಕೀಯ ಪಕ್ಷಗಳು ಕೋಮು ಗಲಭೆಗಳನ್ನು ಅವಲಂಭಿಸಿರುತ್ತವೆ. ಗಲಭೆಗಳನ್ನು ಮಾಡಿಸಿ, ಜನರಲ್ಲಿ ಭೀತಿ ಹುಟ್ಟಿಸಿ ಅವರು ಚುನಾವಣೆಗಳಲ್ಲಿ ಗೆಲ್ಲುತ್ತಾರೆ. ಹಿಂದೂ – ಮುಸಲ್ಮಾನ, ಮಂದಿರ–ಮಸೀದಿ ಹೆಸರಿನಲ್ಲಿ ಗಲಭೆಗಳನ್ನು ಹುಟ್ಟು ಹಾಕುತ್ತಾರೆ. ಆ ಮೂಲಕ ರಾಜಕೀಯ ಅಧಿಕಾರವನ್ನು ಗ್ರಹಣ ಮಾಡುತ್ತಾರೆ. ಇಂತಹ ಕೋಮುವಾದಿ ಮೂಲಭೂತವಾದಿ ರಾಜಕೀಯ ಶಕ್ತಿಗಳಿಗೆ ಜನಸಾಮಾನ್ಯರು ಬೆಂಬಲ ನೀಡಬಾರದು. ಅಂತಹ ರಾಜಕೀಯ ಪಕ್ಷಗಳು ಅಧಿಕಾರದಿಂದ ದೂರ ಉಳಿಯುವಂತೆ ಮಾಡಬೇಕು. ಅಂತಹ ಮತೀಯವಾದಿ ಶಕ್ತಿಗಳನ್ನು ಒಪ್ಪದ ಜಾತ್ಯಾತೀತ ರಾಜಕೀಯ ಪಕ್ಷಗಳು ಒಂದಾಗಿ ಈ ಸವಾಲವನ್ನು ಎದುರಿಸಲು ಸಾಧ್ಯವಾಗಬೇಕು.

ಅಂತಹ ಒಂದು ಬೆಳವಣಿಗೆ ಕರ್ನಾಟಕದಲ್ಲಿ ಸಂಭವಿಸಿದ್ದು ಎಲ್ಲ ದೇಶ ಪ್ರೇಮಿಗಳು ಹೆಮ್ಮೆ ಪಡುವ ವಿಷಯವಾಗಿದೆ. ಪ್ರಸಕ್ತ ಲೋಕಸಭಾ ಚುನಾವಣೆಯ ನಂತರ ಕೇಂದ್ರದಲ್ಲಿಯೂ ಅಂತಹ ಜಾತ್ಯಾತೀತ ಪಕ್ಷಗಳ ಒಂದು ಪರ್ಯಾಯ ಸರ್ಕಾರ ಅಧಿಕಾರಕ್ಕೆ ತರಬೇಕು ಎಂಬ ಜನರ ನಿರೀಕ್ಷೆಗೆ ಕರ್ನಾಟಕದ ಪ್ರಯೋಗ ದಾರಿ ದೀಪವಾಗಿದೆ.

ಆದರೆ, ಕರ್ನಾಟಕದ ಜಾತ್ಯಾತೀತ ಮೈತ್ರಿ ಕೂಟಕ್ಕೆ ಆಂತರಿಕವಾಗಿ ಅಧಿಕಾರ ದಾಹಿಗಳ ಬೆದರಿಕೆಗಳು ಹೆಚ್ಚುತ್ತಿರುವುದು ಜನತೆಯಲ್ಲಿ ನಿರಾಶೆಯನ್ನು ಉಂಟುಮಾಡುತ್ತಿದೆ. ಕೆಲವು ಸಮಯ ಸಾಧಕರ ಸ್ವಾರ್ಥ ಸಾಧನಾ ಪ್ರಯತ್ನಗಳಿಂದಾಗಿ ಜನತೆ ಇಂತಹ ಜಾತ್ಯಾತೀತ ಮೈತ್ರಿ ಕೂಟದ ವ್ಯವಸ್ಥೆಯಲ್ಲಿ ವಿಶ್ವಾಸವನ್ನು ಕಳೆದುಕೊಳ್ಳುವ ಪರಿಸ್ಥಿತಿ ಉಂಟಾಗುತ್ತಿದೆ. ಕೋಮುವಾದದ, ಮೂಲಭೂತವಾದದ ಅಪಾಯವನ್ನು ಮನಗಾಣದ ಇಂತವರಿಗೆ ಪಾಠ ಕಲಿಸಲು ಅಗತ್ಯ ಕ್ರಮಗಳನ್ನು ಕೈಗೊಳ್ಳುವುದು ಆಗಬೇಕಾಗಿದೆ. ಜಾತ್ಯಾತೀತ ಮೈತ್ರಿಕೂಟದ ಸರ್ಕಾರವನ್ನು ಉರುಳಿಸಲು ಹವಣಿಸುತ್ತಿರುವವರಿಗೆ ಸರಿಯಾಗಿ ಪಶ್ಚಾತ್ತಾಪ ಆಗಬೇಕು. ■

ಗೋಡ್ಸೆಯನ್ನು ದೇಶಭಕ್ತನೆಂದು ಹೊಗಳಿರುವ ಬಿಜೆಪಿ ಅಭ್ಯರ್ಥಿಯನ್ನು ಖಂಡಿಸಿ ಮತ್ತು ತಿರಸ್ಕರಿಸಿ ಬಿಜೆಪಿಯನ್ನು ಸೋಲಿಸಿ ಭಾರತದ ಗಣತಂತ್ರವನ್ನು ರಕ್ಷಿಸಿ–ಸಿಪಿಐ(ಎಂ) ಪೊಲಿಟ್‌ಬ್ಯುರೊ ಕರೆ



ಮಹಾತ್ಮ ಗಾಂಧಿಯವರನ್ನು ಹತ್ಯೆ ಮಾಡಿದ ನಾಥುರಾಂ ಗೋಡ್ಸೆ “ಒಬ್ಬ ದೇಶಭಕ್ತನಾಗಿದ್ದರು, ಆಗಿದ್ದಾರೆ ಮತ್ತು ಮುಂದೆಯೂ ಆಗಿರುತ್ತಾರೆ...” ಎಂದು ವರ್ಣಿಸಿರುವ ಭೋಪಾಲ್ ಲೋಕಸಭಾ ಕ್ಷೇತ್ರದ ಬಿಜೆಪಿ ಅಭ್ಯರ್ಥಿ ಪ್ರಜ್ಞಾಸಿಂಗ್ ಠಾಕುರ್‌ರವರ ಆಕ್ರೋಶಕಾರಿ ಹೇಳಿಕೆಯನ್ನು ಸಿಪಿಐ(ಎಂ) ಪೊಲಿಟ್‌ಬ್ಯುರೊ ಬಲವಾಗಿ ಖಂಡಿಸಿದೆ.

ಪ್ರಧಾನ ಮಂತ್ರಿ ನರೇಂದ್ರ ಮೋದಿ ಆಕೆಯನ್ನು “ಭಾರತದ ನಾಗರಿಕತೆಯ ಪರಂಪರೆಯ ಒಂದು ಸಂಕೇತ” ಎಂದು ಬಿಜೆಪಿಯ ಅಭ್ಯರ್ಥಿಯಾಗಿ ಆಕೆಯ ಆಯ್ಕೆಯನ್ನು ಸಮರ್ಥಿಸಿಕೊಳ್ಳುತ್ತ ವರ್ಣಿಸಿದ್ದರು. ವಾಸ್ತವವಾಗಿ ಆಕೆಯನ್ನು ಕಣಕ್ಕಿಳಿಸಿ ಆರೆಸ್ಸೆಸ್–ಬಿಜೆಪಿ ಕೋಮುವಾದಿ ಧ್ರುವೀಕರಣವನ್ನು ಬಡಿದೆಬ್ಬಿಸಲು ಮತ್ತು ‘ಹಿಂದುತ್ವ ಕೋಮುವಾದಿ ವೋಟ್ ಬ್ಯಾಂಕ್’ನ್ನು ಕ್ರೋಡೀಕರಿಸ ಬಯಸಿದ್ದಾರೆ ಎಂದಿರುವ ಸಿಪಿಐ(ಎಂ) ಪೊಲಿಟ್‌ಬ್ಯುರೊ, ಇದು ಭಯೋತ್ಪಾದನೆ, ಒಬ್ಬ ಭಯೋತ್ಪಾದನೆಯ ಆರೋಪಿ ಮತ್ತು ಮಹಾತ್ಮ ಗಾಂಧಿಯವರ ಹಂತಕನ ಬಗ್ಗೆ ಬಿಜೆಪಿಯ ನಿಲುವನ್ನು ಬಿಂಬಿಸುತ್ತದೆ ಎಂದು ಅಭಿಪ್ರಾಯ ಪಟ್ಟಿದೆ.

ಆಕೆ ಈಗ ಬಿಜೆಪಿಯ ಆಣತಿಯಂತೆ ಕ್ಷಮೆ ಕೇಳಿರುವುದು ಕಣ್ಣೊರೆಸಲಿಕ್ಕಾಗಿಯಷ್ಟೇ, ಆಕೆ ತನ್ನ ನಿಲುವಿಗೆ ಬದ್ಧರಾಗಿದ್ದಾರೆ ಎಂಬುದನ್ನು ಇದು ದೃಢಪಡಿಸಿದೆ ಎಂದೂ ಅದು ಹೇಳಿದೆ.

ಈ ವಿಷಯದಲ್ಲಿ, ಚುನಾವಣಾ ಆಯೋಗದ ಇತ್ತೀಚಿನ ವರ್ತನೆಗಳನ್ನು ನೋಡಿದ ಮೇಲೆ, ಸಿಪಿಐ(ಎಂ) ಪೊಲಿಟ್‌ಬ್ಯುರೊ, ಅದರ ಬಳಿ ಹೋಗುವುದಿಲ್ಲ ಎನ್ನುತ್ತ ಭಾರತೀಯ ಸಂವಿಧಾನಾತ್ಮಕ ಗಣತಂತ್ರವನ್ನು ರಕ್ಷಿಸಿಕೊಳ್ಳಲಿಕ್ಕಾಗಿ ಮತ್ತು ಬಲಪಡಿಸಲಿಕ್ಕಾಗಿ ಬಿಜೆಪಿಯನ್ನು ಸೋಲಿಸಿ ಮತ್ತು ತಿರಸ್ಕರಿಸಿ ಎಂದು ಭಾರತೀಯ ಜನತೆಗೆ ಕರೆ ನೀಡಿದೆ. ■

ಆಕೆ ಕ್ಷಮೆ ಕೇಳಿಲ್ಲ, ತನ್ನ ಪಕ್ಷದ ನಿಲುವನ್ನು ದೃಢಪಡಿಸಿದ್ದಾರೆ– ಯೆಚುರಿ

ಪ್ರಜ್ಞಾ ಸಿಂಗ್ ಠಾಕುರ್ “ನನ್ನ ಸಂಘಟನೆ ಬಿಜೆಪಿಯ ಬಗ್ಗೆ ನಿಷ್ಠೆ ಹೊಂದಿದ್ದೇನೆ, ಅದರ ಕಾರ್ಯಕರ್ತಳಾಗಿದ್ದೇನೆ, ಮತ್ತು ಪಕ್ಷದ ಲೈನ್ ನನ್ನ ಲೈನ್ ಆಗಿದೆ” ಎಂದು ಹೇಳಿರುವುದಾಗಿ ವರದಿಯಾಗಿದೆ. ಈ ಬಗ್ಗೆ ಟಿಪ್ಪಣಿ ಮಾಡುತ್ತ, “ಆಕೆ ಕ್ಷಮೆ ಕೇಳಿಲ್ಲ, ಯಾವ ಅಳತೆಗೋಲಿನಿಂದಲೂ ಇದನ್ನು ಕ್ಷಮೆ ಎಂದು ಹೇಳಲು ಸಾಧ್ಯವಿಲ್ಲ, ನಿಜ ಹೇಳಬೇಕೆಂದರೆ, ಆಕೆ ತಾನು ಹೇಳಿರುವುದು ಪಕ್ಷದ ಲೈನ್ ಎಂದು ಈ ಮೂಲಕ ದೃಢಪಡಿಸಿದ್ದಾರೆ” ಎಂದು ಸಿಪಿಐ(ಎಂ) ಪ್ರಧಾನ ಕಾರ್ಯದರ್ಶಿ ಸೀತಾರಾಮ್ ಯೆಚುರಿ ಹೇಳಿದ್ದಾರೆ.

ಮುಂದುವರೆದು ಅವರು, ಈ ಕಾರಣಕ್ಕಾಗಿಯೇ ಸರ್ದಾರ್ ಪಟೇಲ್ ಗಾಂಧೀಜಿ ಹತ್ಯೆಯ ನಂತರ ಆರ್ ಎಸ್ ಎಸ್ ನ್ನು ನಿಷೇಧಿಸಿದ್ದು. ಇದು ಈಗಲೂ ಒಬ್ಬ ಭಯೋತ್ಪಾದನೆಯ ಆರೋಪಿಯನ್ನು ಬೆಂಬಲಿಸುತ್ತಿರುವ ಸಂಘಟನೆ ಎಂಬುದು ವಾಸ್ತವ ಎಂದು ಟಿಪ್ಪಣಿ ಮಾಡಿದ್ದಾರೆ. ■





ದಾವಣಗೆರೆಯಲ್ಲಿ ಮೇ ದಿನಾಚರಣೆ

ಕೇಂದ್ರ ಸರ್ಕಾರದ ನೀತಿಗಳು ದುಡಿಯುವ ವರ್ಗದ ಜನರಿಗೆ ಮಾರಕವಾಗಿವೆ ಎಂದು ಸಿಐಟಿಯು ರಾಜ್ಯ ಕಾರ್ಯದರ್ಶಿ ಕೆ. ಮಹಾಂತೇಶ್ ಆರೋಪಿಸಿದರು

ದಾವಣಗೆರೆಯ ರೋಟರಿ ಬಾಲಭವನದಲ್ಲಿ ಭಾನುವಾರ ಸೆಂಟರ್ ಆಫ್ ಇಂಡಿಯನ್ ಟ್ರೇಡ್ ಯೂನಿಯನ್ಸ್ ವತಿಯಿಂದ ಶೋಷಣೆ ರಹಿತ ಸಮಾಜ ನಿರ್ಮಾಣಕ್ಕಾಗಿ, ಕಾರ್ಮಿಕರ ಐಕ್ಯತೆಗಾಗಿ, ಸಮಾನತೆಯ ಸಮಾಜಕ್ಕಾಗಿ, ಕಾರ್ಮಿಕ ಹಕ್ಕುಗಳ ರಕ್ಷಣೆಗಾಗಿ ಏರ್ಪಡಿಸಿದ್ದ ಕಾರ್ಮಿಕರ ಮೇ ದಿನಾಚರಣೆ ಉದ್ಘಾಟಿಸಿ ಅವರು ಮಾತನಾಡಿದರು.

ಸರ್ಕಾರಿ ಸ್ವಾಮ್ಯದ ಬಿಎಸ್‌ಎನ್‌ಎಲ್ ಸಂಸ್ಥೆಯು, ದೇಶದಾದ್ಯಂತ 2 ಲಕ್ಷ ಕೋಟಿ ಆಸ್ತಿ ಹೊಂದಿದ್ದರೂ, ದೇಶದ ಬ್ಯಾಂಕ್‌ಗಳು ಬಿಎಸ್‌ಎನ್‌ಎಲ್‌ಗೆ 2 ಸಾವಿರ ಕೋಟಿ ಸಾಲ ಕೊಡುತ್ತಿಲ್ಲ. ಇದಕ್ಕೆ ಮೋದಿ ನೇತೃತ್ವದ ಕೇಂದ್ರ ಸರ್ಕಾರವು ಅನುಮತಿ ಕೊಡುತ್ತಿಲ್ಲ. ಹೀಗಾಗಿ ಬಿಎಸ್‌ಎನ್‌ಎಲ್ ಸಂಸ್ಥೆಯು ದಿವಾಳಿಯಾಗಿರುವ ಕಾರಣ ಸಂಸ್ಥೆಯ ಖಾಯಂ ನೌಕರರಿಗೆ ವೇತನ ಸಿಗುತ್ತಿಲ್ಲ. ಅಲ್ಲದೇ, ಗುತ್ತಿಗೆ ಆಧಾರದಲ್ಲಿ ಸಂಸ್ಥೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ಸಿಬ್ಬಂದಿಗಳಿಗೂ ಕಳೆದ ಆರು ತಿಂಗಳುಗಳಿಂದ ಸಂಬಲವೇ ಸಿಕ್ಕಿಲ್ಲ. ಇದಕ್ಕೆ ಕೇಂದ್ರ ಸರ್ಕಾರದ ಕಾರ್ಮಿಕ ವಿರೋಧಿನೀತಿಯೇ ಕಾರಣವಾಗಿದೆ ಎಂದು ದೂರಿದರು.

ಸರ್ಕಾರಿ ಸ್ವಾಮ್ಯದ ಜೆಟ್ ಏರ್‌ವೇಸ್ ಸಂಸ್ಥೆಯು ತನ್ನ ಕಾರ್ಯವನ್ನು ಸ್ಥಗಿತಗೊಳಿಸಿದ್ದು, ನೂರಾರು ವಿಮಾನಗಳು ಹಾರಾಟ ನಿಲ್ಲಿಸಿವೆ. ಈ ಸಂಸ್ಥೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ಪೈಲಟ್‌ಗಳಿಗೆ ಹಾಗೂ ಗಗನಸಖಿಯರಿಗೂ ಸಂಬಳ ಇಲ್ಲವಾಗಿದೆ. ಇದು ಬರೀ ಎರಡು ಸಂಸ್ಥೆಗಳ ಕಥೆಯಲ್ಲ. ಎಲ್ಲ ವರ್ಗದ ಕಾರ್ಮಿಕರಿಗೆ ಸೇವಾ ಭದ್ರತೆಯೇ ಇಲ್ಲವಾಗಿದೆ. ಹೀಗಾಗಿ ತಮ್ಮ ಹಕ್ಕುಗಳಿಗಾಗಿ ಕಾರ್ಮಿಕರು ಹೋರಾಟ ಮುಂದುವರೆಸಬೇಕೆಂದು ಕರೆ ನೀಡಿದರು.

ದುಡಿಯುವ ವರ್ಗದ ಜನತೆ ಹೋರಾಟ ಮುಂದುವರೆಸಬೇಕಾದರೆ, ಕಾರ್ಮಿಕರ ಚಳವಳಿಯ ಹೋರಾಟವನ್ನು ಸ್ಮರಿಸಲೇಬೇಕಾಗಿದೆ. ಭಾರತದ ಕಾರ್ಮಿಕ ಚಳವಳಿಯು ಶತಮಾನದ ಹೊಸ್ತಿಲಲ್ಲಿದೆ. 1908ರಲ್ಲಿ ಬಾಲಗಂಧರ ತಿಲಕ್ ಅವರು ತಮ್ಮ ಸಾರಥ್ಯದಲ್ಲಿ ಹೊರತರುತ್ತಿದ್ದ ಪತ್ರಿಕೆಯಲ್ಲಿ ಬ್ರಿಟಿಷ್ ಸರ್ಕಾರದ ವಿರುದ್ಧ ಬರೆದ ಕಾರಣಕ್ಕೆ ಅವರನ್ನು ಬಂಧಿಸಲಾಗಿತ್ತು. ಆಗ ಮುಂಬೈನ ಕಾರ್ಮಿಕರು ಹೋರಾಟ ಆರಂಭಿಸಿದರು. ಇದು ರಷ್ಯದಲ್ಲಿಯೂ ಪ್ರತಿಧ್ವನಿಸಿತ್ತು.

ರಷ್ಯದಲ್ಲಿ ಲೆನಿನ್ ಅವರು ಭಾರತದ ಕಾರ್ಮಿಕರು ಜಾಗೃತರಾಗಿದ್ದಾರೆಂಬುದಾಗಿ ಲೇಖನ ಬರೆದಿದ್ದರಿಂದ ಸ್ಫೂರ್ತಿಗೊಂಡ ನಮ್ಮ ದೇಶದ ಕಾರ್ಮಿಕರು ತಮ್ಮ ಹಕ್ಕುಗಳಿಗಾಗಿ ಹೋರಾಟ ನಡೆಸಿದ ಪರಿಣಾಮ, ಬ್ರಿಟೀಷ್ ಸರ್ಕಾರವು 1926ರಲ್ಲಿ ಟ್ರೇಡ್ ಯೂನಿಯನ್ ಆಕ್ಟ್ ಜಾರಿಗೆ ತಂದಿದ್ದು, ಅಂದಿನಿಂದ ಕಾರ್ಮಿಕರು ಸಂಘ ಕಟ್ಟಿ ಹೋರಾಟ ಮಾಡಲು ಆರಂಭಿಸಿದರು. ಹೀಗಾಗಿ ದೇಶದ ಸ್ವಾತಂತ್ರ್ಯ ಚಳವಳಿಯಲ್ಲಿ ಕಾರ್ಮಿಕರ ಪಾತ್ರವು ಅತಿ ಮುಖ್ಯವಾಗಿದೆ.

ಈ ಹೋರಾಟದಲ್ಲಿ ಭಾಗವಹಿಸಿದ್ದ ಕಾರ್ಮಿಕರ ವಿರುದ್ಧ ಪೇಶಾವರ ಮೊಕದ್ದಮೆ, ಕಾನ್ಪೂರ್ ಪಿತೂರಿ, ಮಿರತ್ ಮೊಕದ್ದಮೆಗಳನ್ನು ಹೂಡಿ, ಕೆಲ ಕಾರ್ಮಿಕ ನಾಯಕರನ್ನು ಜೈಲಿಗೆ ಅಟ್ಟಲಾಯಿತು. ಅಲ್ಲದೇ, ಇನ್ನೂ ಕೆಲವರನ್ನು ಗಲ್ಲಿಗೆ ಏರಿಸಲಾಯಿತು. ಅಲ್ಲದೇ, ಕಾರ್ಮಿಕ ಸಂಘವನ್ನು ಒಡೆಯುವ ಉದ್ದೇಶದಿಂದ ಬ್ರಿಟೀಷ್ ಸರ್ಕಾರ ಟ್ರೇಡ್ ಡಿಸ್ಪುಟ್ ಆಕ್ಟ್ ಹಾಗೂ ಸೆಫ್ಟಿ ಆಕ್ಟ್ ಜಾರಿಗೆ ತಂದಿತು. ಆದ್ದರಿಂದಲೇ ಭಗತ್‌ಸಿಂಗ್, ರಾಜಗುರು, ಸುಖದೇವ್ ಬ್ರಿಟೀಷ್ ಸರ್ಕಾರದ ಗಮನ ಸೆಳೆಯಲು ಸಂಸತ್‌ನಲ್ಲಿ ಬಾಂಬ್ ಸ್ಫೋಟಿಸುವ ಮೂಲಕ ಗಲ್ಲಿಗೆ ಏರಿದರು. ಇಂತಹ ದೊಡ್ಡ ಪರಂಪರೆ ಕಾರ್ಮಿಕ ಚಳವಳಿಗೆ ಇದೆ ಎಂದು ವಿವರಿಸಿದರು.

ಬ್ರಿಟೀಷ್ ಸರ್ಕಾರದ ಮಾದರಿಯಲ್ಲಿಯೇ ಕಾರ್ಯನಿರ್ವಹಿಸುತ್ತಿರುವ ಮೋದಿ ಸರ್ಕಾರ ಅಧಿಕಾರಕ್ಕೆ ಬಂದ ಹತ್ತು ದಿನಗಳಲ್ಲಿಯೇ, ಬಂಡವಾಳಶಾಹಿಗಳಿಗೆ ಅನುಕೂಲ ಮಾಡಿಕೊಡುವ ಉದ್ದೇಶದಿಂದ ಕಾರ್ಮಿಕ ಕಾನೂನುಗಳಿಗೆ ತಿದ್ದುಪಡಿ ತರುವ ಮೂಲಕ ಕಾರ್ಮಿಕರ ಕಾನೂನುಬದ್ಧ ಸೌಲಭ್ಯಗಳನ್ನು ನಿರಾಕರಣೆ ಮಾಡುವ ಹುನ್ನಾರ ನಡೆಸಿದೆ ಎಂದು ಆರೋಪಿಸಿದರು.

ದೇಶದ ಕಾರ್ಮಿಕರ ಮುಂದೆ ಹಲವು ಸವಾಲುಗಳು ಎದುರಾಗಿದ್ದು, ಈ ಸವಾಲಿಗೆ ಮುಖಾಮುಖಿಯಾಗಲು ಕಾರ್ಮಿಕರು ಐಕ್ಯ ಹೋರಾಟ ಮುಂದುವರೆಸಬೇಕೆಂದು ಕರೆ ನೀಡಿದ ಅವರು, ಕಳೆದ ಐದು ವರ್ಷ ಆಡಳಿತ ನಡೆಸಿರುವ ಮೋದಿ ಸರ್ಕಾರ ಅತ್ಯಂತ ಕಾರ್ಮಿಕ ವಿರೋಧಿಯಾಗಿದೆ ಎಂದು ಅಸಮಾಧಾನ ವ್ಯಕ್ತಪಡಿಸಿದರು.

ಕೇಂದ್ರ ಸರ್ಕಾರ ಜಾರಿಗೆ ತಂದಿರುವ ನೋಟು ಅಮಾನ್ಯೀಕರಣ ಹಾಗೂ ಜಿಎಸ್‌ಟಿಯಿಂದಾಗಿ ದೇಶದ ಸಣ್ಣ ಮತ್ತು ಮಧ್ಯಮ ವರ್ಗದ ಕೈಗಾರಿಕೆಗಳು, ನೆಲ ಕಚ್ಚಿರುವ ಕಾರಣ ಲಕ್ಷಾಂತರ ಕಾರ್ಮಿಕರು ಬೀದಿ ಪಾಲಾಗಿದ್ದಾರೆ. ಹೀಗಾಗಿ ಸರ್ಕಾರದ ನೀತಿಗಳು ಜನರ ಪರವಾಗಿ ಬದಲಾಗುವಂತೆ ಮಾಡಲು ಕಾರ್ಮಿಕರು ಸಂಘಟಿತ ಹೋರಾಟ ನಡೆಸಬೇಕೆಂದು ಕಿವಿಮಾತು ಹೇಳಿದರು.

ಸಿಐಟಿಯು ಜಿಲ್ಲಾ ಗೌರವಾಧ್ಯಕ್ಷ ಕೆ.ಎಲ್. ಭಟ್ ಅಧ್ಯಕ್ಷತೆ ವಹಿಸಿದ್ದರು. ಕಾರ್ಯಕ್ರಮದಲ್ಲಿ ಭಾರತೀಯ ಜೀವ ವಿಮಾ ಪ್ರತಿನಿಧಿಗಳ ಸಂಘದ ದಕ್ಷಿಣ ಮಧ್ಯ ವಲಯ ಅಧ್ಯಕ್ಷ ಎಲ್. ಮಂಜುನಾಥ್, ಸಿಐಟಿಯು ಮುಖಂಡರಾದ ಕೆ.ಎಚ್. ಆನಂದರಾಜ್, ಶ್ರೀನಿವಾಸಮೂರ್ತಿ, ಟಿ.ವಿ. ರೇಣುಕಮ್ಮ, ನವೀನ್‌ಕುಮಾರ್, ಕೆ.ಎಚ್. ಓಲೇಕಾರ್, ಬಾನಳ್ಳಿ ಬಸವರಾಜ, ಮಂಜುನಾಥ ಸಾಲಕಟ್ಟೆ, ಗುಡ್ಡಪ್ಪ, ಶಿವಮೂರ್ತಿ, ಈರಣ್ಣ, ಹಾಲೇಶ ನಾಯ್ಕ, ಅಣ್ಣಪ್ಪಸ್ವಾಮಿ, ಓಬೇದುಲ್ಲಾ ಮತ್ತಿತರರು ಹಾಜರಿದ್ದರು.

ವಿದ್ಯಾರ್ಥಿಗಳು ಪಠ್ಯೇತರ ಚಟುವಟಿಕೆಗಳಿಗೂ ಹೆಚ್ಚಿನ ಆದ್ಯತೆ ನೀಡಬೇಕು – ಪ್ರಿತೇಶ್ ಬಜಾಲ್



ಪಾಠದ ಜೊತೆ ಪಠ್ಯೇತರ ಚಟುವಟಿಕೆಗಳಿದ್ದರೆ ಮಾತ್ರ ಶಿಕ್ಷಣ ಅನ್ನುವ ಪದಕ್ಕೊಂದು ಅರ್ಥ ಬರೋದು. ಜೀವನದಲ್ಲಿ ಮಹತ್ವದನ್ನು ಸಾಧಿಸಬೇಕಾದರೆ ವಿದ್ಯೆಯ ಜೊತೆ ಸಾಹಿತ್ಯ, ಕಲೆ, ಸಾಂಸ್ಕೃತಿಕ ಚಟುವಟಿಕೆಗಳೂ ಬಹಳ ಮುಖ್ಯವಾದದ್ದು ಹಾಗಾಗಿ ವಿದ್ಯಾರ್ಥಿಗಳು ಪಠ್ಯೇತರ ಚಟುವಟಿಕೆಗಳಿಗೂ ಹೆಚ್ಚಿನ ಆದ್ಯತೆ ನೀಡಬೇಕು ಎಂದು ವಾಮಂಜೂರು ಸಂತ ಜೋಸೆಫರ ಇಂಜಿನಿಯರಿಂಗ್ ಕಾಲೇಜಿನ ಉಪನ್ಯಾಸಕರಾದ ಪ್ರೀತೇಶ್ ಬಜಾಲ್ ಇಂದು ಡಿವೈಎಫ್‌ಐ ಬಜಾಲ್ ಪಕ್ಕಲಡ್ಕ ಘಟಕ ಹಾಗೂ ಪಕ್ಕಲಡ್ಕ ಯುವಕ ಮಂಡಲ(ರಿ) ಇದರ ಜಂಟಿ ಆಶ್ರಯದಲ್ಲಿ ಒಂದು ವಾರಗಳ ನಡೆಯುವ ಆಟ ಪಾಠ ಮಕ್ಕಳ ಬೇಸಿಗೆ ಶಿಬಿರವನ್ನು ಉದ್ಘಾಟಿಸಿ ಮಾತನಾಡಿದರು.

ವಿದ್ಯೆಯು ವಿದ್ಯಾರ್ಥಿಗಳ ತಿಳಿವಳಿಕೆ ಮಟ್ಟವನ್ನು ಹೆಚ್ಚಿಸುತ್ತದೆ ಪಠ್ಯೇತರ ಚಟುವಟಿಕೆಗಳು ನಮ್ಮಲ್ಲಿ ಹುದುಗಿರುವ ಪ್ರತಿಭೆಯನ್ನು ಗುರುತಿಸುತ್ತದೆ. ಆದರೆ ಈಗ ಬದಲಾದ ಸ್ಪರ್ಧಾತ್ಮಕ ಶಿಕ್ಷಣದ ನೀತಿಯಿಂದಾಗಿ ವಿದ್ಯೆಗೆ ಸಿಗುವಷ್ಟು ಮಹತ್ವ ಪಠ್ಯೇತರಕ್ಕೆ ಸಿಗುತ್ತಿಲ್ಲ. ಈಗಿನ ಶಿಕ್ಷಣದಿಂದಾಗಿ ವಿದ್ಯಾರ್ಥಿಗಳು ಬಹಳಷ್ಟು ಒತ್ತಡಕ್ಕೆ ಒಳಗಾಗುತ್ತಿದ್ದಾರೆ. ಪರೀಕ್ಷೆಗಳಲ್ಲಿ ಕಡಿಮೆ ಅಂಕ ಬಂದರೂ ಆತ್ಮಹತ್ಯೆ ಮಾಡುವಂತಹ ಮನಸ್ಥಿತಿಗೆ ಒಳಗಾಗುತ್ತಿರುವುದು ಬಹಳ ಆಂತಕಕಾರಿ ವಿಚಾರ. ಆದ್ದರಿಂದ ವಿದ್ಯಾರ್ಥಿಗಳಿಗೆ ಒತ್ತಡದ ಶಿಕ್ಷಣ ನೀಡುವ ಬದಲು ಅವರ ಆಸಕ್ತಿಗೆ ತಕ್ಕುದಾದ ಶಿಕ್ಷಣಕ್ಕೆ ಪ್ರೋತ್ಸಾಹಿಸುವ ಕೆಲಸ ಹೆತ್ತವರಿಂದ ಹಾಗೂ ಸಮಾಜದಿಂದ ಆಗಬೇಕು.

ಈ ವೇಳೆ ವೇದಿಕೆಯಲ್ಲಿ ಡಿವೈಎಫ್‌ಐ ಮುಖಂಡರಾದ ದೀಪಕ್ ಬಜಾಲ್, ಜನತಾ ವ್ಯಾಯಾಮ ಶಾಲೆ ಶಾರೀರಿಕ ಶಿಕ್ಷಕರಾದ ಅಶೋಕ್ ಸಾಲ್ಯಾನ್, ಕಾರ್ಮಿಕ ಮುಖಂಡರಾದ ಲೋಕೇಶ್ ಎಂ, ನಾಗರಾಜ್ ಬಜಾಲ್ ವೇದಿಕೆಯಲ್ಲಿ ಉಪಸ್ಥಿತರಿದ್ದರು. ಡಿವೈಎಫ್‌ಐ ಜೊತೆ ಕಾರ್ಯದರ್ಶಿ ಧೀರಾಜ್ ಬಜಾಲ್ ಸ್ವಾಗತಿಸಿ ಅಖಿಲೇಶ್ ವಂದಿಸಿದರು.


ಹಾಸನ ಆಲೂಗಡ್ಡೆ ರೈತರ ದುಂಡು ಮೇಜಿನ ಸಭೆ

ಕಳೆದ ನಲವತ್ತು ವರ್ಷಗಳಿಂದ ಜಿಲ್ಲೆಯ ಪ್ರಮುಖ ವಾಣಿಜ್ಯ ಬೆಳೆಯಾಗಿರುವ ಆಲೂಗಡ್ಡೆಯನ್ನು ಹಾಸನ ಜಿಲ್ಲೆಯ ಸಾವಿರಾರು ರೈತರು ಮುಂಗಾರು ಹಂಗಾಮಿನಲ್ಲಿ ಕೃಷಿ ಮಾಡುತ್ತಾ ಬರುತ್ತಿದ್ದರು. ಆದರೆ ಕಳೆದ ಹತ್ತು ವರ್ಷಗಳಿಂದ ನಿರಂತರವಾಗಿ ಆಲೂಗಡ್ಡೆ ಬೆಳೆಗೆ ಎದುರಾಗಿರುವ ಹಂಗಮಾರಿ ರೋಗ ಮತ್ತು ಮಳೆಯ ಅಭಾವದಿಂದಾಗಿ ಬರಗಾಲ ತಲೆದೋರಿದ್ದು ಪ್ರತಿಕೂಲ ವಾತಾವರಣದ ಪರಿಣಾಮಗಳಿಂದ ಆಲೂಗಡ್ಡೆ ಬೆಳೆಯುತ್ತಿದ್ದ ರೈತರು ಕ್ರಮೇಣ ನಷ್ಟವನ್ನನುಭವಿಸಿ ಆಲೂಗಡ್ಡೆ ಬೆಳೆಯುವವರ ಸಂಖ್ಯೆ ಜಿಲ್ಲೆಯಲ್ಲಿ ಗಣನೀಯವಾಗಿ ಇಳಿಮುಖವಾಗಿದೆ.

ಇಂತಹ ಪರಿಸ್ಥಿತಿಯನ್ನು ಕೂಲಂಕುಶವಾಗಿ ಅಧ್ಯಯನ ಮಾಡಿ ಪರಿಹಾರವನ್ನು ಕಂಡುಕೊಳ್ಳಬೇಕಾದ ಜಿಲ್ಲಾಡಳಿತ ಮತ್ತು ರಾಜ್ಯ ಸರ್ಕಾರ ಹಾಗೂ ಜನಪ್ರತಿನಿಧಿಗಳ ತೀವ್ರ ನಿರ್ಲಕ್ಷದಿಂದಾಗಿ ಇಂದು ಜಿಲ್ಲೆಯ ಆಲೂಗಡ್ಡೆ ರೈತರು ಸಂಕಷ್ಟವನ್ನು ಎದುರಿಸುತ್ತಿದ್ದಾರೆ.

ಇಂತಹ ಸಂದರ್ಭದಲ್ಲಿ ರೈತ ಸಮುದಾಯ ಒಟ್ಟಾಗಿ ತಮಗೆ ಎದುರಾಗಿರುವ ಸಮಸ್ಯೆಗಳನ್ನು ವಿವರವಾಗಿ ಚರ್ಚಿಸಿ ಅವುಗಳ ಶಾಶ್ವತ ಪರಿಹಾರಕ್ಕೆ ಗಂಭೀರ ಗಮನಕೊಡಬೇಕಾಗಿದೆ. ಆದ್ದರಿಂದ ಕರ್ನಾಟಕ ಪ್ರಾಂತ ರೈತ ಸಂಘ (ಕೆಪಿಆರ್‌ಎಸ್) ವಿಶೇಷವಾಗಿ ಹಾಸನ ಜಿಲ್ಲೆಯ ಆಲೂಗಡ್ಡೆ ರೈತರ ಸಮಸ್ಯೆಗಳ ಕುರಿತು ಚರ್ಚಿಸಿ ಪರಿಹಾರಗಳನ್ನು ಕಂಡುಕೊಳ್ಳುವ ಉದ್ದೇಶದಿಂದ ದುಂಡು ಮೇಜಿನ ಸಭೆಯನ್ನು ದಿನಾಂಕ 20 ಮೇ 2019 ರಂದು ಸೋಮವಾರ ಬೆಳಿಗ್ಗೆ 10.30 ಕ್ಕೆ ಹಾಸನದ ಜಿಲ್ಲಾ ಕೇಂದ್ರ ಗ್ರಂಥಾಲಯದ ಹಿಂಭಾಗದ ಮಾನವ ಬಂಧುತ್ವ ವೇದಿಕೆ ಕಛೇರಿಯಲ್ಲಿ ಕರೆಯಲಾಗಿದೆ. ಆದ್ದರಿಂದ ರೈತರು ಈ ಸಭೆಗೆ ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ ತಮ್ಮ ಅಭಿಪ್ರಾಯಗಳನ್ನು ಹಂಚಿಕೊಳ್ಳಲು ಕೋರಲಾಗಿದೆ.

ಎಚ್.ಆರ್. ನವೀನ್‌ಕುಮಾರ್



ಕ್ರಿಯಾ ಮಾಧ್ಯಮ 'ಮಾರ್ಕ್ಸ್200–ಕ್ಯಾಪಿಟಲ್150' ಯೋಜನೆಯ ಕೊನೆಯ ಪ್ರಕಟಣೆಯಾಗಿದ್ದು, ಸದ್ಯದಲ್ಲೇ ಪ್ರಕಟವಾಗಲಿರುವ 'ಬಂಡವಾಳ' ಸಂಪುಟ–1ರ ಪ್ರವೇಶಿಕೆಯಿಂದ ಆಯ್ದ ಭಾಗ. ಜತೆಯಲ್ಲಿ ಕೊಟ್ಟಿರುವುದು ಪ್ರಸ್ತಾವಿತ ಮುಖಪುಟ.

'ಬಂಡವಾಳ'ದ ಮಹತ್ವ

ವಸಂತರಾಜ ಎನ್.ಕೆ.

'ಬಂಡ್ವಾಳವಿಲ್ಲದ ಬಡಾಯಿ' ಕನ್ನಡ ನಾಟಕದ 'ಪ್ರಪಿತಾಮಹ' ಟಿ.ಪಿ.ಕೈಲಾಸಂ ಅವರ ಒಂದು ಪ್ರಸಿದ್ಧ ನಾಟಕ. ಆದರೆ ಈಗ 'ಬಂಡವಾಳದ ಬಡಾಯಿ'ಯ ಕಾಲ. ಬಂಡವಾಳದ್ದು 'ಬಡಾಯಿ' ಮಾತ್ರವಲ್ಲ, ಅದರದ್ದೇ ಈಗ ಎಲ್ಲೆಲ್ಲೂ ಯಜಮಾನಿಕೆ. ಅದು ಮಾಡಿದ್ದೇ ರೂಲ್ಸು. ಅದರದ್ದೇ ಜಗದ ತುಂಬಾ ರೂಲು. ಬಂಡವಾಳಶಾಹಿ ವ್ಯವಸ್ಥೆಯೇ ಮನುಕುಲದ ಚರಮ ಸಾಧನೆ. ಇದಕ್ಕೆ ಆದಿಯೂ ಇಲ್ಲ, ಅಂತ್ಯವೂ ಇಲ್ಲ. ಅದು ಮನುಷ್ಯ–ಸಹಜವಾದ ಅತ್ಯಂತ ಅಭಿವೃದ್ಧ ವ್ಯವಸ್ಥೆ. ಅದು ಅಜರಾಮರ, ಎಂದು ಅದರ ಭಕ್ತರು ಹೇಳಿದ್ದೇ ಹೇಳಿದ್ದು. ಆದರೆ 150 ವರ್ಷಗಳ ಹಿಂದೆನೇ ಈ ಭಕ್ತರ ಬೊಗಳೆ ಬಯಲು ಮಾಡಿದ್ದು ಆಗ 50 ವರ್ಷದ ಕಾರ್ಲ್ ಮಾರ್ಕ್ಸ್. 1867ರಲ್ಲಿ ಜರ್ಮನಿಯ ಹಾಂಬರ್ಗ್‌ನಲ್ಲಿ ಪ್ರಕಟವಾದ ಅವರ ಮೇರು ಕೃತಿ 'ಬಂಡವಾಳ'ದ ಮೊದಲ ಸಂಪುಟ ಇದನ್ನು ಮಾಡಿತ್ತು. .. ..ಮುಂದಿನ 50 ವರ್ಷಗಳ ಕಾಲ, ಅವರ 'ಬಂಡವಾಳ' ಗ್ರಂಥ ಜಗತ್ತಿನ ತುಂಬಾ ಹರಡಿತ್ತು. ಇಡೀ ಜಗತ್ತಿನಲ್ಲಿ ಚರ್ಚೆಯಾಗುತ್ತಿತ್ತು,

ಮಾರ್ಕ್ಸ್ ಅವರ ಸಿದ್ಧಾಂತದ ಮೇಲೆ ಆಧಾರಿತ ಕಮ್ಯುನಿಸ್ಟ್ ಪಕ್ಷಗಳು ಸ್ಥಾಪಿತಗೊಂಡಿದ್ದವು. ವ್ಲಾಡಿಮಿರ್ ಲೆನಿನ್ ನಾಯಕತ್ವದ ರಶ್ಯನ್ ಕಮ್ಯುನಿಸ್ಟ್ ಪಕ್ಷದ ನಾಯಕತ್ವದಲ್ಲಿ 'ಬಂಡವಾಳ' ಪ್ರಕಟವಾಗಿ 50 ವರ್ಷಗಳಲ್ಲೇ ಮೊದಲ ಕಾರ್ಮಿಕ ಕ್ರಾಂತಿಯಾಗಿ ಆ ದೇಶ ಸಮಾಜವಾದದತ್ತ ಮೊದಲ ಹೆಜ್ಜೆ ಇಟ್ಟಿತ್ತು. ಮುಂದಿನ 50 ವರ್ಷಗಳಲ್ಲಿ (ಅಂದರೆ 'ಬಂಡವಾಳ' ಪ್ರಕಟವಾಗಿ 100 ವರ್ಷಗಳಲ್ಲಿ) ಚೀನಾ, ಇಡೀ ಪೂರ್ವ ಯುರೋಪಿನ ದೇಶಗಳಿಂದ ಕ್ಯೂಬಾದ ವರೆಗೆ ಹಲವು ದೇಶಗಳಲ್ಲಿ ಸಮಾಜವಾದಿ ಕ್ರಾಂತಿ ನಡೆಯಿತು... ..ಈ 50 ವರ್ಷಗಳಲ್ಲಿ ಜಗತ್ತಿನ ಹೆಚ್ಚಿನ ಪ್ರಮುಖ ಭಾಷೆಗಳಿಗೆ 'ಬಂಡವಾಳ'ದ ಅನುವಾದವಾಗಿತ್ತು. 'ಬಂಡವಾಳ' 20ನೇ ಶತಮಾನದ ಬೆಳವಣಿಗೆಗಳ ಮೇಲೆ ಅತ್ಯಂತ ಹೆಚ್ಚಿನ ಪ್ರಭಾವ ಹೊಂದಿದ್ದು, ಅದರ ಗತಿಯನ್ನು ನಿರ್ಧರಿಸಿತು.

ಈ 100 ವರ್ಷಗಳ ಕಾಲವೂ ಒಂದು ಕಡೆಗೆ, ಮಾರ್ಕ್ಸ್‌ರ 'ಬಂಡವಾಳ' ಜಗತ್ತಿನ ತುಂಬಾ ಹರಡಿತ್ತು. ಜತೆ ಜತೆಗೆ 'ಬಂಡವಾಳದ ಬಡಾಯಿ' ಸಹ ಜಗತ್ತಿನ ತುಂಬಾ ನಡೆಯುತ್ತಿತ್ತು. ವಾಸ್ತವದಲ್ಲಿ ಮಾರ್ಕ್ಸ್ ರ 'ಬಂಡವಾಳ'ದ ಬಡಾಯಿ ಮತ್ತು 'ಬಂಡವಾಳದ ಬಡಾಯಿ' ನಡುವೆ ಸತತ ಮುಖಾಮುಖಿ ನಡೆದಿತ್ತು. 1990ರ ದಶಕದ ಆದಿಯಲ್ಲಿ ಸೋವಿಯೆಟ್ ಒಕ್ಕೂಟ ಮತ್ತು ಪೂರ್ವ ಯುರೋಪಿನ ದೇಶಗಳಲ್ಲಿ ಬಂಡವಾಳಶಾಹಿ ವ್ಯವಸ್ಥೆಯ ಮರುಸ್ಥಾಪನೆಯ ನಂತರ ಈ ಮುಖಾಮುಖಿ ಇನ್ನಷ್ಟು ತೀವ್ರವಾಗಿದೆ. 'ಸಮಾಜವಾದ ವ್ಯವಸ್ಥೆ ಬಿದ್ದು ಹೋಗಿದ್ದರಿಂದ, ಬಂಡವಾಳಶಾಹಿ ವ್ಯವಸ್ಥೆಯ ಬಗೆಗಿನ ಮಾರ್ಕ್ಸ್ ಅವರ ವಿಶ್ಲೇಷಣೆ ಸಹ ತಪ್ಪು ಎಂದು ಸಾಬೀತಾಗಿದೆ' ಎಂಬ ಪ್ರಚಾರ ಜೋರಾಗಿತ್ತು. ಆದರೆ 20ನೇ ಶತಮಾನದ ಕೊನೆಯಲ್ಲಿ ಕಳೆದ ಸಹಸ್ರಮಾನದ (11–20 ನೇ ಶತಮಾನದ ಅವಧಿ) ಹತ್ತು ಶ್ರೇಷ್ಟ ಚಿಂತಕರು ಯಾರು ಎಂದು ಬಿಬಿಸಿ ನಡೆಸಿದ ಆನ್ ಲೈನ್ ಸಮೀಕ್ಷೆಯಲ್ಲಿ ಮಾರ್ಕ್ಸ್ ಮೊದಲ ಸ್ಥಾನದಲ್ಲಿ ಹೊಮ್ಮುವುದನ್ನು ಯಾವ ಪ್ರಚಾರಕ್ಕೂ ತಡೆಯಲಾಗಲಿಲ್ಲ.

ಕಳೆದ ಮೂರು ದಶಕಗಳಲ್ಲಿ ಜಾಗತಿಕವಾಗಿರುವ ಹಣಕಾಸು ಬಂಡವಾಳ ಹಿಂದೆಂದಿಗಿಂತಲೂ ಗಟ್ಟಿ ಸದ್ದು ಮಾಡುತ್ತಿದೆ. ಆದರೆ 2008ರ ಮಹಾ ಬಿಕ್ಕಟ್ಟು ಮತ್ತು ಆ ಮೇಲೆ ಈ ವರೆಗೂ ಬಿಕ್ಕಟ್ಟಿನಿಂದ ಚೇತರಿಕೆಯ ಸವಾಲುಗಳು 'ಬಂಡವಾಳ'ದ ಮಹತ್ವವನ್ನು ಮತ್ತೆ ಹೆಚ್ಚಿಸಿವೆ. ಈ ಮಹಾ ಬಿಕ್ಕಟ್ಟಿನ ಸಂದರ್ಭದಲ್ಲಿ 'ಬಂಡವಾಳ'ದ ಪ್ರತಿಗಳಿಗೆ ಬೇಡಿಕೆ ಹೆಚ್ಚಿತ್ತು. ಆಗ ನ್ಯೂಯಾರ್ಕ್ ಟೈಮ್ಸ್ ಲೇಖನವೊಂದರಲ್ಲಿ ಮಹಾ ಬಿಕ್ಕಟ್ಟನ್ನು ಅರ್ಥ ಮಾಡಿಕೊಂಡು ಪರಿಹಾರ ಹುಡುಕಬೇಕಾದರೆ ಮಾರ್ಕ್ಸ್‌ರ 'ಬಂಡವಾಳ'ಕ್ಕೆ ಮರಳಬೇಕು ಎಂದಿತ್ತು. ಈ ವರೆಗೆ ಬಂಡವಾಳಶಾಹಿ ಆರ್ಥಿಕದ ಮಾರ್ಕ್ಸ್‌ವಾದಿ ವಿಶ್ಲೇಷಣೆ ನಿರ್ಲಕ್ಷಿಸಿದ್ದ ಅಥವಾ ಹೀಗಳೆಯುತ್ತಿದ್ದ ಹಲವು ಬೂರ್ಜ್ವಾ ಅರ್ಥಶಾಸ್ತ್ರಜ್ಞರು ಬಿಕ್ಕಟ್ಟು ಹೇಗೆ ಉಂಟಾಗುತ್ತದೆ? ಬಿಕ್ಕಟ್ಟಿಗೆ ತಾಳಿಕೊಳ್ಳಬಲ್ಲ ಪರಿಹಾರಗಳು ಏನು? ಇಂತಹ ಪ್ರಶ್ನೆಗಳಿಗೆ ಉತ್ತರ ಸಿಗಬಹುದು ಎಂಬುದಕ್ಕಾಗಿ 'ಬಂಡವಾಳ'ದ ಅಧ್ಯಯನ ಆರಂಭಿಸಿದ್ದರಂತೆ. ಜರ್ಮನಿಯಲ್ಲಿ 2010ರಲ್ಲಿ 'ಬಂಡವಾಳ'ದ ಪ್ರತಿಗಳ ಮಾರಾಟ 10 ಪಟ್ಟು ಏರಿತ್ತು. ಹ್ಯಾಂಬರ್ಗಿನಲ್ಲಿ 'ಬಂಡವಾಳ' ಸಂಪುಟ 1 ರ ಪ್ರಕಟಣೆಯ 150ನೇ ವಾರ್ಷಿಕದ (ಸೆಪ್ಟೆಂಬರ್ 2017) ಸಂದರ್ಭದಲ್ಲಿ ಅದರ ಇಂದಿನ ಪ್ರಸ್ತುತತೆ ಬಗ್ಗೆ ಜರ್ಮನಿ–ವ್ಯಾಪಿಯಾಗಿ ಸಮೀಕ್ಷೆ ನಡೆಸಲಾಯಿತು. ಆ ಸಮೀಕ್ಷೆಯಲ್ಲಿ ಮೂವರಲ್ಲಿ ಇಬ್ಬರು 'ಹಿಂದೆಂದಿಗಿಂತಲೂ ದಾಸ್ ಕ್ಯಾಪಿಟಲ್ ಇಂದು ಪ್ರಸುತ' ಎಂದು ಅಭಿಪ್ರಾಯ ನೀಡಿದ್ದರು. ಕೇವಲ ಶೇ.6 ಮಾತ್ರ 'ಇಂದಿಗೆ ದಾಸ್ ಕ್ಯಾಪಿಟಲ್ ಅಪ್ರಸ್ತುತ' ಎಂದರು.


ಸಾಮಾನ್ಯವಾಗಿ ಯಾವುದೇ ಸಂಶೋಧನಾ ಪ್ರಕಟಣೆಯ (ಪುಸ್ತಕ ಅಥವಾ ಲೇಖನ) ಹೆಚ್ಚುಗಾರಿಕೆ, ಮಹತ್ವ ಮತ್ತು ಅದಕ್ಕೆ ಸಿಕ್ಕಿರುವ ಮನ್ನಣೆಯನ್ನು, ಇತರ ಸಂಶೋಧನಾ ಪ್ರಕಟಣೆಗಳು ಎಷ್ಟು ಬಾರಿ ಅದನ್ನು ಉಲ್ಲೇಖಿಸಿವೆ ಅಥವಾ ಉದ್ಧರಿಸಿವೆ ಎಂಬುದರ ಮೇಲೆ ಅಳೆಯಲಾಗುತ್ತದೆ. ಈಗ ಹೆಚ್ಚಿನ ಪ್ರಮುಖ ('ಬಂಡವಾಳ'ದಂತಹ ಹಿಂದಿನ ಶತಮಾನಗಳ ಕ್ಲಾಸಿಕ್ ಗಳನ್ನು ಸೇರಿದಂತೆ) ಸಂಶೋಧನಾ ಪ್ರಕಟಣೆಗಳು ಇಂಟರ್‌ನೆಟ್ ನಲ್ಲಿ (ಎಲ್ಲವೂ ಉಚಿತವಲ್ಲದಿರಬಹುದು) ಲಭ್ಯವಿದ್ದು, 'ಗೂಗಲ್ ಸ್ಕಾಲರ್' ಎಂಬ ವೆಬ್ ಸೇವೆ ಒಂದು ನಿರ್ದಿಷ್ಟ ಸಂಶೋಧನಾ ಪ್ರಕಟಣೆ ಯಾವ ಇತರ ಪ್ರಕಟಣೆಗಳಲ್ಲಿ ಉಲ್ಲೇಖಿತ/ಉದ್ಧೃತವಾಗಿವೆ ಎಂಬ ಪಟ್ಟಿಯನ್ನು ಕೊಡುತ್ತದೆ. 2004ರಿಂದ ಬಳಕೆಯಲ್ಲಿರುವ 'ಗೂಗಲ್ ಸ್ಕಾಲರ್' ಕೊಡುವ ಈ ಮಾಹಿತಿಯನ್ನು ಸಂಗ್ರಹಿಸಿ ವಿವಿಧ ಪ್ರಕಟಣೆಗಳನ್ನು ಹೋಲಿಸಬಹುದು. ಮೇ 2016ರಲ್ಲಿ ಇಂತಹ ಒಂದು ಅಧ್ಯಯನವನ್ನು ಕೈಗೊಳ್ಳಲಾಗಿದ್ದು, 1950ರ ಮೊದಲು ಪ್ರಕಟವಾದ ಸಮಾಜಶಾಸ್ತ್ರದ ಪುಸ್ತಕಗಳಲ್ಲಿ 'ದಾಸ್ ಕ್ಯಾಪಿಟಲ್' ಅತ್ಯಂತ ಹೆಚ್ಚು ಇತರ ಸಮಾಜಶಾಸ್ತ್ರದ ಪ್ರಕಟಣೆಗಳಲ್ಲಿ ಉಲ್ಲೇಖಿತ/ಉದ್ಧೃತವಾಗಿರುವ ಪುಸ್ತಕ ಎಂದು ಗುರುತಿಸಲಾಗಿದೆ. 'ದಾಸ್ ಕ್ಯಾಪಿಟಲ್' 40,237 ಇತರ ಸಮಾಜಶಾಸ್ತ್ರದ ಪ್ರಕಟಣೆಗಳಲ್ಲಿ ಉದ್ಧೃತವಾಗಿದೆ. ರಾಜಕೀಯ ಅರ್ಥಶಾಸ್ತ್ರದ 'ಕ್ಲಾಸಿಕ್'ಗಳು ಎಂದು ಪರಿಗಣಿಸಲಾಗುವ ಆದಂ ಸ್ಮಿತ್ ಅವರ 'ವೆಲ್ತ್ ಆಫ್ ನೇಶನ್ಸ್' ಎರಡನೇ ಸ್ಥಾನದಲ್ಲಿ (36,331 ಉಲ್ಲೇಖ/ಉದ್ಧರಣೆಗಳು) ಮತ್ತು ಜಾನ್ ಕೀನ್ಸ್ ಅವರ 'ಜನರಲ್ ಥಿಯರಿ ಆಫ್ ಎಂಪ್ಲಾಯ್‌ಮೆಂಟ್, ಇಂಟರೆಸ್ಟ್ ಅಂಡ್ ಮನಿ' ಆರನೇ ಸ್ಥಾನದಲ್ಲಿ (29,131 ಉಲ್ಲೇಖ/ಉದ್ಧರಣೆಗಳು) ಇವೆ. ಈ ಅಧ್ಯಯನ ಇಂಟರ್‌ನೆಟ್ ನಲ್ಲಿ ಲಭ್ಯವಿರದ ಪ್ರಕಟಣೆಗಳನ್ನು ಒಳಗೊಳ್ಳುವುದಿಲ್ಲ. ಅವನ್ನು ಒಳಗೊಂಡರೆ 'ಬಂಡವಾಳ'ದ ಸ್ಕೋರ್ ಇನ್ನೂ ಹೆಚ್ಚಾಗಬಹುದು. ಇವೆಲ್ಲದ್ದರಿಂದ ಪುನಃ ಮಾರ್ಕ್ಸ್‌ರ 'ಬಂಡವಾಳ'ದ ಮಹತ್ವ ಮತ್ತು ಜನಪ್ರಿಯತೆ ಹೆಚ್ಚಿದೆ ಎಂದು ತಿಳಿಯುತ್ತದೆ.

'ಬಂಡವಾಳ' ಹೆಚ್ಚು ಕಡಿಮೆ ಎಲ್ಲಾ ಆಧುನಿಕ ಭಾಷೆಗಳಲ್ಲಿ ಅನುವಾದವಾಗಿದೆ. ಮಾರ್ಕ್ಸಿಸ್ಟ್ ಇಂಟರ್ ನೆಟ್ ಆಕರದ (www.marxists.org) ಪ್ರಕಾರ 18 ಭಾಷೆಗಳಲ್ಲಿರುವ 'ಬಂಡವಾಳ' ಸಂಪುಟ 1 ರ ಅನುವಾದಗಳು ಇಂಟರ್‌ನೆಟ್ ನಲ್ಲಿ ಲಭ್ಯ ಇವೆ. ಅವುಗಳಲ್ಲಿ 11 ಭಾಷೆಗಳ ಅನುವಾದಗಳು ಅದೇ ಆಕರದಲ್ಲಿವೆ. 2012ರಲ್ಲಿ ಜಪಾನೀ ಭ್ಹಾಷೆಯಲ್ಲಿ 'ಬಂಡವಾಳ' ವನ್ನು ಕಾಮಿಕ್ಸ್ ರೂಪದಲ್ಲಿ ಪ್ರಕಟಿಸಲಾಗಿದೆ.

ಭಾರತದ ಭಾಷೆಗಳಲ್ಲಿ 'ಬಂಡವಾಳ' ಹಿಂದಿ, ಬಂಗಾಳಿ, ಪಂಜಾಬಿ, ಮಲಯಾಳಂ, ತೆಲುಗು, ತಮಿಳು, ಒಡಿಯಾ, ಉರ್ದು ಗಳಲ್ಲಿ ಅನುವಾದವಾಗಿದ್ದು ಪ್ರಕಟವಾಗಿದೆ. ಸಂಪುಟ 1 ರ ಹಿಂದಿ ಅನುವಾದವನ್ನು 1961ರಲ್ಲಿ ಮಾಸ್ಕೋದ ಪ್ರಗತಿ ಪ್ರಕಾಶನ ಮತ್ತು ಪೀಪಲ್ಸ್ ಪಬ್ಲಿಷಿಂಗ್ ಹೌಸ್ ಜಂಟಿಯಾಗಿ ಪ್ರಕಟಿಸಿದವು. ಸಂಪುಟ 2 1979 ರಲ್ಲಿ ಮತ್ತು ಸಂಪುಟ 3 1983ರಲ್ಲಿ ಅವೇ ಪ್ರಕಾಶಕರಿಂದ ಪ್ರಕಟವಾಗಿತ್ತು. ಸಂಪುಟ 1 ರ ಅನುವಾದಕರು ಓಂ ಪ್ರಕಾಶ್ ಸಂಗಲ್. ಸಂಪುಟ 2 ರ ಅನುವಾದಕರು ಹಿಂದಿಯ ಪ್ರಸಿದ್ಧ ಲೇಖಕ ರಾಮವಿಲಾಸ ಶರ್ಮ (ಸಂಪಾದಕರು ನರೇಶ್ ವೇದಿ). ಸಂಪುಟ 3 ರ ಅನುವಾದಕರು ನರೇಶ್ ವೇದಿ (ಸಂಪಾದಕರು

ಪುಟ 14 ಕ್ಕೆ

ಪೆಪ್ಸಿ ಕಂಪನಿಯು ಕೇಸುಗಳನ್ನು ವಾಪಸ್ ಪಡೆದಿರುವುದನ್ನು ಸಸ್ಯ ಪ್ರಬೇಧಗಳ ಮತ್ತು ರೈತರ ಹಿತಾಸಕ್ತಿಯ ರಕ್ಷಣೆಯ ವಿಷಯದಲ್ಲಿ ಭಾರತದ ಕಾನೂನುಗಳ ವಿಜಯವೆಂದು ಭಾವಿಸಲಾಗದು. ಮಾಧ್ಯಮಗಳಲ್ಲಿ ಬರುತ್ತಿರುವ ವರದಿಗಳನ್ನು ನೋಡುವುದಾದಲ್ಲಿ ಈ ನಿರ್ದಿಷ್ಟ ಪ್ರಕರಣದಲ್ಲಿ ಯಾವುದೇ ನೈಜ "ರೈತ" ಹಿತಾಸಕ್ತಿಯು ಒಳಗೊಂಡಿರುವಂತಿಲ್ಲ. ಗುಜರಾತಿನ ಪ್ರಾದೇಶಿಕ ಮಾರುಕಟ್ಟೆಯ ಮೇಲೆ ಕಬ್ಜಾ ಹೊಂದಿರುವ ಪ್ರಾದೇಶಿಕ ಶಕ್ತಿಗಳ ವಿರುದ್ಧ ಪೆಪ್ಸಿ ಕಂಪನಿ ಗುದ್ದಾಟದಲ್ಲಿ ತೊಡಗಿತ್ತು. ಈ ಚುನಾವಣೆಯ ಸಂದರ್ಭದಲ್ಲಿ ಸರ್ಕಾರವು "ರೈತ ಪಕ್ಷಪಾತಿ" ಧೋರಣೆಯನ್ನು ಪ್ರದರ್ಶಿಸುವ ಮೂಲಕ ತನ್ನ ಲಾಭವನ್ನು ಖಾತರಿಪಡಿಸಿಕೊಂಡಿದೆಯಷ್ಟೆ. ಹೀಗಾಗಿ ಬಹುರಾಷ್ಟ್ರೀಯ ಕಂಪನಿಗಳು ಭಾರತದ ಕೃಷಿ ವೈವಿಧ್ಯತೆಯನ್ನು ನಾಶ ಮಾಡುತ್ತಿರುವ ಬಗ್ಗೆ ಹೋರಾಟಗಾರರು ಮಾಡುತ್ತಿರುವ ಆರೋಪಗಳನ್ನು ಉತ್ತರಿಸುವ ಭರದಲ್ಲಿ ಸರ್ಕಾರದ ಸ್ಪರ್ಧಾತ್ಮಕ ಬೆಂಬಲ ಬೆಲೆ ನೀತಿಗಳ ಮತ್ತು ಕುಸಿಯುತ್ತಿರುವ ಕೃಷಿ ಸಂಶೋಧನಾ ವೆಚ್ಚಗಳಂಥ ನೀತಿಗಳ ಪಾತ್ರವನ್ನು ಕಡೆಗಣಿಸುವಂತಾಗಬಾರದು.





ಆಲೂಗಡ್ಡೆ ರೈತರು ಮತ್ತು ಪೆಪ್ಸಿ ಕಂಪನಿಯ ಸಂಘರ್ಷ

(EPW ಮೇ 11 ಸಂಪಾದಕೀಯ)

ಕೆಲವು ನಿರ್ದಿಷ್ಟ ಆಲೂ ತಳಿಗಳ ಮೇಲೆ ತನ್ನ ಕಂಪನಿಗಿದ್ದ ಬೌದ್ಧಿಕ ಸ್ವಾಮ್ಯ ಹಕ್ಕನ್ನು ಗುಜರಾತಿನ ಕೆಲವು ರೈತರು ಉಲ್ಲಂಘಿಸಿದ್ದಾರೆಂದು ಪೆಪ್ಸಿ ಕಂಪನಿಯು ಆ ರೈತರ ಮೇಲೆ ಹಾಕಿದ್ದ ದಾವೆಯು ದೊಡ್ಡ ಕೋಲಾಹಲವನ್ನೇ ಸೃಷ್ಟಿಸಿಬಿಟ್ಟಿತು. ನಮ್ಮ ದೇಶದಲ್ಲಿ ಯಾವುದೇ ವಿಷಯದಲ್ಲಿ "ರೈತ"ರೆಂಬ ಪದಬಳಕೆ ಆದರೂ ಸಾಕು ಅಪಾರ ನೈತಿಕ ಆಕ್ರೋಶವನ್ನು ಕೆರಳಿಸುತ್ತದೆಂಬುದನ್ನು ಇದು ಮತ್ತೊಮ್ಮೆ ಸಾಬೀತುಮಾಡಿದೆ. ದೇಶವೊಂದರ ಅರ್ಧಕ್ಕಿಂತ ಹೆಚ್ಚು ಜನರು ಉತ್ಪಾದನಾ ಸಾಧನಗಳ ವಿತರಣೆಗಳಲ್ಲಿ ಅಪಾರ ತಾರತಮ್ಯಕ್ಕೆ ಗುರಿಯಾಗಿರುವ ಮತ್ತು ಆದಾಯಗಳಲ್ಲಿ ಸದಾ ಏರುಪೇರುಗಳಿರುವ ಕೃಷಿ ಕ್ಷೇತ್ರವನ್ನೇ ತಮ್ಮ ಜೀವನೋಪಾಯಕ್ಕೆ ಆಧರಿಸಿರುವಾಗ ಇಂಥಾ ಆತಂಕ ಹಾಗು ಪ್ರತಿಕ್ರಿಯೆಗಳು ಅನಿವಾರ್ಯವೇ ಇರಬೇಕು. ಇಂಥಾ ಸನ್ನಿವೇಶವನ್ನು ಬಲಿಷ್ಠ ಬಹುರಾಷ್ಟ್ರೀಯ ಕಂಪನಿಗಳು ತಮ್ಮ ಅನೂಕೂಲಕ್ಕೆ ತಕ್ಕಂತೆ ಆಟವಾಡಲು ಬಳಸಿಕೊಳ್ಳಬಹುದು ಎಂಬ ಆತಂಕವನ್ನೂ ತಳ್ಳಿಹಾಕಲು ಬರುವುದಿಲ್ಲ. ಆದರೆ ಈ ಆತಂಕಗಳು ಜನರ ವಿವೇಚನಾ ಶಕ್ತಿಯನ್ನೇ ಕುಂಠಿತಗೊಳಿಸುವುದು ಮಾತ್ರ ಕಳವಳವನ್ನು ಹುಟ್ಟಿಸುತ್ತದೆ. ಅದರಲ್ಲೂ ಮುಖ್ಯವಾಗಿ ಹೊರಗಿನ "ದೈತ್ಯ" ಶತ್ರುಗಳನ್ನು ಕಲ್ಪಿಸಿಕೊಳ್ಳುವ ಭರದಲ್ಲಿ ಒಳಗಿನ ತಥಕಥಿತ "ಸಂತರು" ಅಂದರೇ ಭಾರತದ ಅಸಮರ್ಥ ಪ್ರಭುತ್ವವು ಭಾರತದ ಕೃಷಿಯನ್ನು ಅಭಿವೃದ್ಧಿ ಪಥದಿಂದ ಹೊರದೂಡಿ ಸಂಕಷ್ಟಕ್ಕೆ ಸಿಲುಕಿಸಿರುವ ವಾಸ್ತವವನ್ನು ಮರೆಯುವಂತಾಗಬಾರದು.

ಕೆಲವು ಅತಿಮೂಲಭೂತ ವಿಷಯಗಳನ್ನು ಕಾನೂನಿನ ಕಣದಾಚೆಗೆ ನಿಂತು ಅರ್ಥಮಾಡಿಕೊಳ್ಳೋಣ. ಒಂದು ಬಲಿಷ್ಠ ಬಹುರಾಷ್ಟ್ರೀಯ ಕಂಪನಿಯು ತನ್ನ ಮಾರುಕಟ್ಟೆ ಬಲವನ್ನು ಬಳಸಿ ರೈತರು ತಮಗೆ ಬೇಕಾದ ಆಲೂ ತಳಿಯನ್ನು ಬೆಳೆಯದಂತೆ ನಿರ್ಬಂಧಿಸುತ್ತಿದೆಯೆಂಬ ಈ ವಿವಾದದಲ್ಲಿ ಒಂದು ಸಹಜ ಪ್ರಶ್ನೆಯು ಉದ್ಭವವಾಗುತ್ತದೆ: ತಮ್ಮ ಆಸುಪಾಸಿನಲ್ಲಿ ತಾವು ಬೆಳೆಯುತ್ತಿರುವ ಆಲೂ ತಳಿಗೆ ಮಾರುಕಟ್ಟೆ ಇಲ್ಲದಿದ್ದರೂ ಮತ್ತು ತಾವು ಬೆಳೆಯುತ್ತಿರುವ ತಳಿಯ ಮಾರುಕಟ್ಟೆಗೆ ಹಲವಾರು ನಿರ್ಬಂಧಗಳಿವೆ ಎಂದು ತಿಳಿದಿದ್ದರೂ ಆ ರೈತರು ಅದೇ ತಳಿಯ ಆಲುಗಡ್ಡೆಯನ್ನು ಬೆಳೆದಿದ್ದೇಕೆ?

ಪೆಪ್ಸಿ ಕಂಪನಿಯ ಸಹಯೋಗದಲ್ಲಿ ಆಲೂ ಉತ್ಪಾದನೆ ಮಾಡುತ್ತಿರುವ ಪ.ಬಂಗಾಳ ಮತ್ತಿತರ ರಾಜ್ಯಗಳ ರೈತರು ತಾವು ಈ ಹಿಂದೆ ಉತ್ಪಾದಿಸುತ್ತಿದ್ದ ಸ್ಥಳೀಯ ತಳಿಗಳಿಗೆ ಹೋಲಿಸಿದಲ್ಲಿ ಪಪ್ಸಿ ಕಂಪನಿಯ ತಳಿಗಳ ಉತ್ಪಾದನಾ ವೆಚ್ಚವೂ ಹೆಚ್ಚು ಮತ್ತು ಇಳುವರಿಯೂ ಕಡಿಮೆ ಎಂದು ಸತತವಾಗಿ ದೂರುತ್ತಲೇ ಬಂದಿದ್ದಾರೆ. ಹಾಗೆ ನೋಡಿದರೆ, ಕಂಪನಿಯೊಂದಿಗೆ ರೈತರು ಮಾಡಿಕೊಂಡಿರುವ ಮಾರುಕಟ್ಟೆ ಒಪ್ಪಂದವು ಅವರನ್ನು ಉತ್ಪಾದನಾ ನಂತರದ ಏರುಪೇರುಗಳಿಂದಲೂ ರಕ್ಷಿಸುತ್ತಿಲ್ಲ. ಏಕೆಂದರೆ ಆ ಒಪ್ಪಂದಗಳು ಕಂಪನಿಯ ನಿರೀಕ್ಷಿತ ಗುಣಮಟ್ಟಕ್ಕೆ ತಕ್ಕಹಾಗಿಲ್ಲ ಎನ್ನುವ ನೆಪದಲ್ಲಿ ರೈತರ ಸರಕನ್ನು ಕಂಪನಿಯು ತಿರಸ್ಕರಿಸುವುದರಿಂದಲೂ ರಕ್ಷಣೆ ನೀಡುವುದಿಲ್ಲ ಅಥವಾ ಮುಕ್ತಮಾರುಕಟ್ಟೆಗಳು ಸ್ಥಿರವಾಗಿದ್ದಾಗ ಕನಿಷ್ಟ ಅದಕ್ಕೆ ಸರಿಸಮನಾದ ಬೆಲೆಯನ್ನೂ ಸಹ ಖಾತರಿ ಮಾಡುವುದಿಲ್ಲ.

ಆದರೂ ಪಶ್ಚಿಮ ಬಂಗಾಳದ ಕೋಲ್ಡ್ ಸ್ಟೋರೇಜ್ (ಶೀತಲ ಸಂಗ್ರಾಹಕ) ಸಂಸ್ಥೆಯ ಒಂದು ಅಂದಾಜಿನ ಪ್ರಕಾರ ಪೆಪ್ಸಿ ಕಂಪನಿಯ ಜೊತೆಗೆ ಒಪ್ಪಂದ ಮಾಡಿಕೊಳ್ಳುತ್ತಿರುವ ರೈತರ ಸಂಖ್ಯೆ ಕಳೆದ ಒಂದು ದಶಕದಲ್ಲಿ ಏಳುಪಟ್ಟು ಹೆಚ್ಚಿದೆ. ಈ ತದ್ವಿರುದ್ಧರೂಪದ ಉದಾಹರಣೆಗಳಿಗೆ ಯಾವುದೇ ಆರ್ಥಿಕ ತರ್ಕವನ್ನು ಒದಗಿಸುವುದು ಕಷ್ಟವಾದರೂ ಅದು ತಳಮಟ್ಟದಲ್ಲಿರುವ ವಾಸ್ತವ ಪರಿಸ್ಥಿತಿಗಳ ಬಗ್ಗೆ ಕಣ್ಣು ತೆರೆಸುವಂತಿದೆ. ಬೆಳೆದ ಬೆಳೆಗೆ ಸಾಕಷ್ಟು ಮಾರುಕಟ್ಟೆ ಅವಕಾಶಗಳಿಲ್ಲದಿರುವ ವಾಸ್ತವಗಳಿಂದಾಗಿಯೇ ರೈತರು ತಮಗೆ ದಕ್ಕಬಹುದಾದ ಆದಾಯಕ್ಕಿಂತ ಜಾಸ್ತಿ ಖಚಿತ ಮಾರುಕಟ್ಟೆಗೆ ಹೆಚ್ಚಿನ ಪ್ರಾಶಸ್ತ್ಯ ಕೊಡುತ್ತಿರುವುದನ್ನು ಇದು ಸೂಚಿಸುತ್ತದೆ.

ಕಳೆದ ಮೂರು ದಶಕಗಳಲ್ಲಿ ಆಲೂ ಉತ್ಪಾದನೆಯು ಶೇ.227ರಷ್ಟು ಹೆಚ್ಚಿದೆ. 1988–89ರಲ್ಲಿ ಆಲೂ ಉತ್ಪಾದನೆಯು 14.86 ಮಿಲಿಯನ್ ಟನ್ನಿನಷ್ಟು ಇದ್ದದ್ದು 2017–18ರಲ್ಲಿ 48.6 ಮಿಲಿಯನ್ ಟನ್ನಿಗೆ ಏರಿದೆ. ಅದರೆ ವಿಚಿತ್ರವೇನೆಂದರೆ ಆಲೂಗಡ್ಡೆಯನ್ನು ಎಲ್ಲೆಡೆ ಬಳಸುತ್ತಿದ್ದರೂ ಅದರ ತಲಾವಾರು ಬಕೆಯ ಪ್ರಮಾಣ ಮಾತ್ರ ಶೇ.22 ರಷ್ಟು ಮಾತ್ರ ಏರಿಕೆ ಕಂಡಿದೆ. 1987–88ರಲ್ಲಿ ತಲಾವಾರು ಆಲೂ ಬಳಕೆ 14 ಕೆಜಿಗಳಷ್ಟಿದ್ದರೆ 2016–17ರಲ್ಲಿ ಅದು ಕೇವಲ 17 ಕೆಜಿಗಳಿಗೆ ಮಾತ್ರ ಏರಿಕೆಯಾಗಿದೆ. ಇಂದು ಭಾರತದಲ್ಲಿ ಅಂದಾಜು 133 ಕೋಟಿ ಜನಸಂಖ್ಯೆ ಇದ್ದರೂ ಆಲೂ ಬಳಕೆಯ ಬೇಡಿಕೆಯು ಅದರ ಹಾಲಿ ಉತ್ಪಾದನೆಯ ಶೇ.50ರಷ್ಟು ಮಾತ್ರವಿದೆ.

ಮಾರುಕಟ್ಟೆಯ ಬಗ್ಗೆಯ ಅಗತ್ಯ ಮಾಹಿತಿಯ ಕೊರತೆ ಮತ್ತು ಶೀತ ಸಂಗ್ರಾಹಕ (ಕೋಲ್ಡ್ ಸ್ಟೋರೇಜ್)ಗಳಂಥ ಮೂಲಭೂತ ಸೌಕರ್ಯಗಳ ಕೊರತೆಯಿಂದಾಗಿಯೂ ಸರಬರಾಜು ನಿರ್ವಹಣೆಯ ಸಂಕಷ್ಟಗಳು ಮತ್ತಷ್ಟು ಹೆಚ್ಚಾಗಿದೆ. ಇಂದು ದೇಶಾದ್ಯಂತ ಉತ್ಪಾದಿಸಿದ ಆಲೂಗಡ್ಡೆಯೆಲ್ಲವನ್ನೂ ಶೀತ ಸಂಗ್ರಾಹಕಗಳಿಗೆ ಸರಬರಾಜು ಮಾಡಿದಲ್ಲಿ ಒಟ್ಟಾರೆ ಉತ್ಪಾದನೆಯ ಶೇ.70ರಷ್ಟನ್ನು ಮಾತ್ರ ಸಂಗ್ರಹಿಸಿಡಬಹುದಾದ ಸಾಮರ್ಥ್ಯ ಮಾತ್ರ ಲಭ್ಯವಿದೆ. ಇದರ ಜೊತೆಗೆ ಸುಧಾರಿತ ತಂಪೀಕರಣ ತಂತ್ರಜ್ಞಾನವನ್ನು ಬಳಸಬೇಕೆಂಬ ಶರತ್ತಿನೊಂದಿಗೆ ಕೋಲ್ಡ್ ಸ್ಟೋರೇಜ್‌ಗಳ ಸ್ಥಾಪನಾ ವೆಚ್ಚಕ್ಕೆ ಕೊಡುತ್ತಿದ್ದ ಸಬ್ಸಿಡಿಯನ್ನು ಶೇ.20ರಿಂದ ಶೇ.40ಕ್ಕೆ ಏರಿಸಲಾಗಿದೆ. ಇದು ಒಂದೋ ಬಹುಉಪಯೋಗಿ, ಬಹು ಕಪಾಟಿನ ಮತ್ತು ಹೆಚ್ಚು ವಿದ್ಯುತ್ ಬಳಕೆ ಮಾಡುವ ಸ್ಟೋರೇಜ್ ಸೌಲಭ್ಯಗಳಿಗೆ ಉತ್ತೇಜನ ನೀಡುತ್ತದೆ ಅಥವಾ ಶೀತ ಸಂಗ್ರಾಹಕ ತಂತ್ರಜ್ಞಾನ ಕೆಳಗಿನವರೆಗೆ ಪಸರಿಸುವುದನ್ನು ತಡೆಗಟ್ಟುತ್ತದೆ. ಎರಡರಲ್ಲಿ ಯಾವೊಂದು ಸಂಭವಿಸಿದರೂ ಸಣ್ಣ ರೈತರಿಗಂತೂ ಅದು ಎಟುಕುವುದಿಲ್ಲ.

ಮತ್ತೊಂದು ಕಡೆ ಉಳಿದ ಶೇ.50 ಭಾಗದಲ್ಲಿ ಕೇವಲ ಶೇ.6ರಷ್ಟನ್ನು ಮಾತ್ರ ಇನ್ನಿತರ ಆಲೂ ಉತ್ಪನ್ನ ಉದ್ದಿಮೆಗಳಿಗೆ ಬಳಸಲಾಗುತ್ತದೆ. 2000ದ ಏಪ್ರಿಲ್ ಮತ್ತು 2017ರ ಮಾರ್ಚ್ ನಡುವೆ ಭಾರತಕ್ಕೆ 7.54 ಬಿಲಿಯನ್ ಡಾಲರ್ (754 ಕೋಟಿ ಡಾಲರ್) ಗಳಷ್ಟು ವಿದೇಶಿ ನೇರ ಬಂಡವಾಳವು ಹರಿದು ಬಂದಿದ್ದರೂ ಆಹಾರೋತ್ಪನ್ನ ಉದ್ದಿಮೆಯು ಒಟ್ಟಾರೆ ಕೃಷಿ ಕ್ಷೇತ್ರಕ್ಕೆ ಶೇ.8.39ರಷ್ಟು ಮೌಲ್ಯ ವರ್ಧನೆಯನ್ನು ಮಾತ್ರ ಸೇರ್ಪಡೆ ಮಾಡಿದೆ. ಸರ್ಕಾರಗಳ ನೀತಿಗಳು ಸಹ ಅದಕ್ಕೆ ತಕ್ಕ ಹಾಗಿವೆ. ಸರ್ಕಾರದ ಶೇ.100ರಷ್ಟು ವಿದೇಶಿ ನೇರ ಹೂಡಿಕೆಗೆ ಅನುಮತಿ ಒದಗಿಸುವ ನೀತಿಗಳು ಸಹ ಒಂದೋ ಪ್ರಾಥಮಿಕ ಸ್ಥರದ ಉತ್ಪನ್ನಗಳ ಮೇಲೆ ಅಥವಾ ಆಹಾರ ವಸ್ತುಗಳ ಬಿಡಿ ಮಾರಾಟದ ಸುತ್ತಾ ಕೇಂದ್ರೀಕರಿಸಿರುವುದು ಸಹ ಇದೇ ಧೋರಣೆಯ ಪ್ರತಿಫಲನವಾಗಿದೆ.

ಆಲೂ ಉತ್ಪನ್ನಗಳ ಉದ್ದಿಮೆಗಳ ಬಗ್ಗೆ ಹೇಳುವುದಾದರೆ ಇದರಲ್ಲಿ ಪ್ರಧಾನವಾಗಿ ಔಪಚಾರಿಕ ವಲಯದ ಸಣ್ಣಪುಟ್ಟ ಉದ್ದಿಮೆಗಳೇ ಹೆಚ್ಚಾಗಿದ್ದು ಅವು ಶೇ.50ರಷ್ಟು ಮಾರುಕಟ್ಟೆಯನ್ನು ನಿಯಂತ್ರಿಸುವುದರಿಂದ ಈ ಕ್ಷೇತ್ರದಲ್ಲಿ ತಂತ್ರಜ್ಞಾನ ವರ್ಗಾವಣೆ ಅಥವಾ ಬಂಡವಾಳ ಹೂಡಿಕೆ ಮತ್ತು ಖಾತರಿ ಮಾರುಕಟ್ಟೆಯ ಅವಕಾಶಗಳು ಸಹ ತುಂಬಾ ಸೀಮಿತವಾಗಿಯೇ ಇವೆ. ಹೀಗಾಗಿ ಈ ಮಾರುಕಟ್ಟೆಯಲ್ಲಿರುವ ಕೆಲವೇ ದೊಡ್ಡ ಮತ್ತು ಸಂಘಟಿತ ಉದ್ದಿಮೆಗಳ ಜೊತೆ ಕರಾರು ಒಪ್ಪಂದವನ್ನು ಮಾಡಿಕೊಳ್ಳುವುದರಿಂದ ಮೇಲಿನ ಮೂರು ಸೌಕರ್ಯಗಳು ದೊರೆಯಬಹುದಾದರೂ, ಈ ದೊಡ್ಡ ಕಂಪನಿಗಳು ತಮ್ಮ ಲಾಭವನ್ನು ಹೆಚ್ಚಿಸಿಕೊಳ್ಳುವ ಸಲುವಾಗಿ ತಮ್ಮ ಬೃಹತ್ ಶಕ್ತಿಯನ್ನು ಬಳಸಿಕೊಂಡು ರೈತರಿಗೆ ಅವರ ಶ್ರಮದ ಬೆಲೆಯನ್ನು ಬಿಟ್ಟರೆ ಬೇರೆ ಯಾವ ಲಾಭಾಂಶವನ್ನೂ ಕೊಡದೆ ಹೋಗಬಹುದು. ಆದರೆ ಇದೂ ಕೂಡಾ ಸಂಪೂರ್ಣ ಸತ್ಯವಲ್ಲ. ಮಾರ್ಪಾಡಾಗಿರುವ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಗಳ (ಎಪಿಎಂಸಿ) ಕಾಯಿದೆಯಲ್ಲಿರುವ ಆಯ್ದ ಅವಕಾಶಗಳ ದುರ್ಬಳಕೆಗೆ (ಉದಾಹರಣೆಗೆ ಪಶ್ಚಿಮ ಬಂಗಾಳದಲ್ಲಿ ಗುತ್ತಿಗೆ ಕೃಷಿಗೆ ಅವಕಾಶವಿಲ್ಲದಿದ್ದರೂ ಸಹಯೋಗಿ (ಕೊಲ್ಯಾಬರೇಟೀವ್) ಕೃಷಿಯ ಹೆಸರಿನಲ್ಲಿ ಗುತ್ತಿಗೆ ಕೃಷಿಗೆ ಆವಕಾಶ ಮಾಡಿಕೊಡುವ ಮೂಲಕ ಅಥವಾ ಕಾನೂನುಬದ್ಧ ಅವಕಾಶವಿರುವ ಗುಜರಾತಿನಂಥ ಕಡೆ ಗುತ್ತಿಗೆ ಕೃಷಿಗೇ ಅವಕಾಶ) ಮಾಡಿಕೊಡುವ ಮೂಲಕ ಈ ಪ್ರಭುತ್ವವೂ ರೈತರನ್ನು ಶೋಷಿಸುವುದರಲ್ಲಿ ಪಾಲ್ಗೊಂಡಿದೆ.

ಹೀಗಾಗಿ ಪೆಪ್ಸಿ ಕಂಪನಿಯು ಕೇಸುಗಳನ್ನು ವಾಪಸ್ ಪಡೆದಿರುವುದನ್ನು ಸಸ್ಯ ಪ್ರಬೇಧಗಳ ಮತ್ತು ರೈತರ ಹಿತಾಸಕ್ತಿಯ ರಕ್ಷಣೆಯ ವಿಷಯದಲ್ಲಿ ಭಾರತದ ಕಾನೂನುಗಳ ವಿಜಯವೆಂದು ಭಾವಿಸಲಾಗದು. ಮಾಧ್ಯಮಗಳಲ್ಲಿ ಬರುತ್ತಿರುವ ವರದಿಗಳನ್ನು ನೋಡುವುದಾದಲ್ಲಿ ಈ ನಿರ್ದಿಷ್ಟ ಪ್ರಕರಣದಲ್ಲಿ ಯಾವುದೇ ನೈಜ "ರೈತ" ಹಿತಾಸಕ್ತಿಯು ಒಳಗೊಂಡಿರುವಂತಿಲ್ಲ. ಗುಜರಾತಿನ ಪ್ರಾದೇಶಿಕ ಮಾರುಕಟ್ಟೆಯ ಮೇಲೆ ಕಬ್ಜಾ ಹೊಂದಿರುವ ಪ್ರಾದೇಶಿಕ ಶಕ್ತಿಗಳ ವಿರುದ್ಧ ಪೆಪ್ಸಿ ಕಂಪನಿ ಗುದ್ದಾಟದಲ್ಲಿ ತೊಡಗಿತ್ತು. ಈ ಚುನಾವಣೆಯ ಸಂದರ್ಭದಲ್ಲಿ ಸರ್ಕಾರವು "ರೈತ ಪಕ್ಷಪಾತಿ" ಧೋರಣೆಯನ್ನು ಪ್ರದರ್ಶಿಸುವ ಮೂಲಕ ತನ್ನ ಲಾಭವನ್ನು ಖಾತರಿಪಡಿಸಿಕೊಂಡಿದೆಯಷ್ಟೆ. ಹೀಗಾಗಿ ಬಹುರಾಷ್ಟ್ರೀಯ ಕಂಪನಿಗಳು ಭಾರತದ ಕೃಷಿ ವೈವಿಧ್ಯತೆಯನ್ನು ನಾಶ ಮಾಡುತ್ತಿರುವ ಬಗ್ಗೆ ಹೋರಾಟಗಾರರು ಮಾಡುತ್ತಿರುವ ಆರೋಪಗಳನ್ನು ಉತ್ತರಿಸುವ ಭರದಲ್ಲಿ ಸರ್ಕಾರದ ಸ್ಪರ್ಧಾತ್ಮಕ ಬೆಂಬಲ ಬೆಲೆ ನೀತಿಗಳ ಮತ್ತು ಕುಸಿಯುತ್ತಿರುವ ಕೃಷಿ ಸಂಶೋಧನಾ ವೆಚ್ಚಗಳಂಥ ನೀತಿಗಳ ಪಾತ್ರವನ್ನು ಕಡೆಗಣಿಸುವಂತಾಗಬಾರದು.

ಕೃಪೆ: Economic and Political Weekly
May 11, 2019. Vol. 54. No.19
ಅನು: ಶಿವಸುಂದರ್
(EPW ಅನುವಾದ ಯೋಜನೆಯ ಹೆಚ್ಚಿನ ಮಾಹಿತಿಗಾಗಿ: http://www.epw.in/translation)

•



ಮೋದಿಯನ್ನು ಕಾಡುತ್ತಿದೆ ಮೈತ್ರಿಕೂಟ ಭೀತಿ

ಕೇಂದ್ರದಲ್ಲಿ ಒಂದು ಜಾತ್ಯತೀತ ಸರಕಾರವನ್ನು ರಚಿಸಬಲ್ಲ ಒಂದು ಚುನಾವಣೋತ್ತರ ಮೈತ್ರಿಕೂಟ ರೂಪುಗೊಳ್ಳಲಿದೆ ಎಂಬ ಭೀತಿಯ ಭೂತ ಮೋದಿಯನ್ನು ಕಾಡುತ್ತಿದೆ, ಇಂತಹ ಒಂದು ಸರಕಾರ ಮೈತ್ರಿಕೂಟದ ಎಲ್ಲ ಅಂಗಪಕ್ಷಗಳು ಅಂಗೀಕರಿಸುವ ಒಂದು ಸಮಾನ ಕನಿಷ್ಟ ಕಾರ್ಯಕ್ರಮದ ಆಧಾರದಲ್ಲಿ ರಚನೆಗೊಳ್ಳುತ್ತದೆ. ಇಂತಹ ಒಂದು ಮೈತ್ರಿ ತನ್ನ ಜಾಗದಲ್ಲಿ ಅಧಿಕಾರಕ್ಕೆ ಬರಬಹುದು ಎಂಬ ಭೀತಿಯನ್ನೇ ಮೋದಿ ಮೈತ್ರಿಗಳ ವಿರುದ್ಧ ತನ್ನ ಆರ್ಭಟಗಳ ಮೂಲಕ ಪ್ರದರ್ಶಿಸುತ್ತಿದ್ದಾರೆ. ಆ ಭೀತಿಯ ಭೂತೋಚ್ಚಾಟನೆಗೆ ಅವರು ಪ್ರಯತ್ನಿಸುತ್ತಿದ್ದಾರೆ.



ಪ್ರಕಾಶ ಕಾರಟ್

ಈ ಚುನಾವಣಾ ಪ್ರಚಾರದಲ್ಲಿ ನರೇಂದ್ರ ಮೋದಿ 'ಮಹಾಗಟ್ ಬಂಧನ್' ಅಥವ ಪ್ರತಿಪಕ್ಷಗಳ ಮೈತ್ರಿಯನ್ನು 'ಮಹಾಮಿಲಾವಟ್' (ಮಹಾ ಕಲಸುಮೇಲೋಗರ) ಎಂದು ಅದರ ಮೇಲೆ ದಾಳಿ ನಡೆಸದ ದಿನವೇ ಇಲ್ಲ. ಪ್ರತಿಪಕ್ಷಗಳ ಮುಖಂಡರುಗಳು ಅಧಿಕಾರದಾಹ ತುಂಬಿದ ಸಮಯಸಾಧಕರ ಒಂದು ಪಡೆ ಎಂದು ವರ್ಣಿಸದ ದಿನವೇ ಇಲ್ಲ.

ಪ್ರಚಾರದ ಆರಂಭದಿಂದಲೂ, ಮೋದಿಯವರ ಭಾಷಣಗಳಲ್ಲಿ, 'ಮಹಾಮಿಲಾವಟ್' ಸರಕಾರ ಹೇಗೆ ಅಭಿವೃದ್ಧಿಗೆ ಕಂಟಕವಾಗುತ್ತದೆ, ರಾಷ್ಟ್ರೀಯ ಭದ್ರತೆಯನ್ನು ಖಾತ್ರಿಪಡಿಸಲಾರದ ಒಂದು ದುರ್ಬಲ ಸರಕಾರವಾಗುತ್ತದೆ, ಹೇಗೆ ಉತ್ತರ ಪ್ರದೇಶ ಮತ್ತು ಇತರೆಡೆಗಳಲ್ಲಿನ ಪ್ರತಿಪಕ್ಷಗಳ ಮೈತ್ರಿ ಮುಖಂಡರ ವೈಯಕ್ತಿಕ ಹಿತಗಳಿಗಾಗಿ ಅಧಿಕಾರವನ್ನು ಬಾಚಿಕೊಳ್ಳುವ ಒಂದು ನೀತಿವಿಹೀನ, ಸಮಯಸಾಧಕರ ಗುಂಪಷ್ಟೇ ಆಗಿದೆ, ಎಂಬುದೇ ನಿರಂತರವಾದ ರಾಗಾಲಾಪನೆ.

ಪ್ರತಿಪಕ್ಷಗಳ ಮೈತ್ರಿಯ ಮೇಲೆ ಇಂತಹ ಒಂದು ಸತತ ದಾಳಿ, ತನ್ನ ಆಳ್ವಿಕೆ ಹೋಗಿ ಒಂದು ಮೈತ್ರಿ ಸರಕಾರ ಬರುವ ಸಂಭವವಿದೆ ಎಂಬ ನಿಜವಾದ ಭೀತಿಯನ್ನು ಮೋದಿ ಹೊಂದಿದ್ದಾರೆ ಎಂಬುದನ್ನು ಪ್ರಕಟಪಡಿಸುತ್ತದೆ.

1977ರಿಂದೀಚೆಗೆ, ಕೆಲವು ಅಪವಾದಗಳನ್ನು ಬಿಟ್ಟರೆ, ಮೈತ್ರಿ ಸರಕಾರಗಳು ಒಂದು ಸಾಮಾನ್ಯ ಸಂಗತಿಯಾಗಿ ಬಿಟ್ಟಿವೆ. ಮೋದಿ ವರ್ಣನೆಗೆ ತದ್ವಿರುದ್ಧವಾಗಿ ಮೈತ್ರಿ ಸರಕಾರಗಳು ಸ್ಥಿರ ಸರಕಾರಗಳನ್ನು ಕೊಟ್ಟಿವೆ ಮತ್ತು 'ಅಭಿವೃದ್ಧಿ' ಕುರಿತಂತೆ ಅವುಗಳ ದಾಖಲೆ ಬೇರೆ ಸರಕಾರಗಳಿಗಿಂತ ಭಿನ್ನವಾಗಿಯೇನೂ ಇಲ್ಲ, ಎಲ್ಲವೂ ಬಂಡವಾಳಶಾಹಿ ಅಭಿವೃದ್ಧಿಯ ಚೌಕಟ್ಟಿನಲ್ಲೇ ಇವೆ. ನಿಜಸಂಗತಿಯೆಂದರೆ, 1999–2004ರ ವಾಜಪೇಯಿ ನೇತೃತ್ವದ ಮೈತ್ರಿ ಸರಕಾರವನ್ನು ಬಿಜೆಪಿಯೇ "ಪ್ರಕಾಶಮಾನ ಭಾರತ"ದ ಒಂದು ಮಾದರಿ ಎಂದು ಹೇಳುತ್ತಿತ್ತು.

ಮೋದಿ ಏನೇ ಹೇಳಿಕೊಳ್ಳಲಿ, ಒಂದು ಸಮಾನ ಕನಿಷ್ಟ ಕಾರ್ಯಕ್ರಮವನ್ನು ಆಧರಿಸಿದ ಒಂದು ಚುನಾವಣೋತ್ತರ ಮೈತ್ರಿಯು ಸ್ಥಿರ ಸರಕಾರವೊಂದರ ರಚನೆಗೆ ಆಧಾರವಾಗುವುದಿಲ್ಲ ಎಂದು ನಂಬಲು ಕಾರಣಗಳೇನೂ ಇಲ್ಲ. 2004ರ ಚುನಾವಣೆಗಳ ನಂತರ ಯುಪಿಎ ರಚನೆಗೊಂಡು ಒಂದು ಸಮಾನ ಕನಿಷ್ಟ ಕಾರ್ಯಕ್ರಮ ಅಂಗೀಕಾರವಾಯಿತು ತಾನೇ. ಬಿಜೆಪಿಯ ಅನುಭವವೂ ಇದೇ. 1998 ರಲ್ಲಿ ಮತ್ತು 1999ರಲ್ಲಿ ಚುನಾವಣೆಗಳ ನಂತರ ಎನ್‌ಡಿಎ ಮೈತಿಕೂಟ ರಚಿಸಲು ಅದು ಆಳ್ವಿಕೆಯ ಅಜೆಂಡಾ ಎಂಬುದನ್ನು ರೂಪಿಸಿತು. ಆ ಸಮಯದಲ್ಲಿ ಬಿಜೆಪಿ ಇಂತಹ ಒಂದು ಸರಕಾರದ ರಚನೆಗಾಗಿ, 370ನೇ ವಿಧಿಯ ರದ್ಧತಿ, ರಾಮಮಂದಿರ ನಿರ್ಮಾಣ ಮತ್ತು ಸಮಾನ ನಾಗರಿಕ ಸಂಹಿತೆಯ ತನ್ನ ಮೂಲ ಬೇಡಿಕೆಗಳನ್ನು ಬದಿಗಿಟ್ಟಿತ್ತು. ಮೋದಿ ಈಗ ಇಂತಹ ಮೈತ್ರಿ ಸರಕಾರಗಳನ್ನು ದೂಷಿಸುವುದೆಂದರೆ, ತನ್ನದೇ ಪಕ್ಷದ ಸರಕಾರಗಳನ್ನೂ ಖಂಡಿಸಿದಂತೆಯೇ ಸರಿ.



ವ್ಯಂಗ್ಯಚಿತ್ರ: ಕೀರ್ತಿಶ್ ಭಟ್, ಬಿಬಿಸಿ ನ್ಯೂಸ್

ಇಂತಹ 'ಮಹಾಮಿಲಾವಟ್ ಗ್ಯಾಂಗ್' ಸರಕಾರದಲ್ಲಿ ಇದ್ದಾಗ ಮಾವೋವಾದಿ ಚಟುವಟಿಕೆಗಳು ಭುಗಿಲೆದ್ದವು ಎಂದು ದೂಷಿಸಿರುವುದು, ಮತ್ತು ತನ್ನ ಸರಕಾರ ಬಂದ ಮೇಲೆ ಅವನ್ನು ಪರಿಣಾಮಕಾರಿ ಭದ್ರತಾ ಕಾರ್ಯಾಚರಣೆಗಳ ಮೂಲಕ ಮೆಟ್ಟಿ ಹಾಕಲಾಯಿತು ಎಂದಿರುವುದು ಕೂಡ ಮೋದಿಯ ಅಸಂಬದ್ಧ ಹೇಳಿಕೆ. ಮೋದಿಯ ಈ ಸುಳ್ಳು, ಪ್ರಸಕ್ತ ಚುನಾವಣಾ ಪ್ರಚಾರದ ವೇಳೆಯಲ್ಲೇ ಬಯಲಿಗೆ ಬಂದಿದೆ. ಗಡ್ಚಿರೋಲಿಯಲ್ಲಿ ಒಂದು ಮಾವೋವಾದಿ ದಾಳಿಯಲ್ಲಿ 15 ಭದ್ರತಾ ಸಿಬ್ಬಂದಿಯು ಪ್ರಾಣ ಹೋದವು, ಮತ್ತು ಛತ್ತಿಸ್‌ಗಡ್‌ನ ದಾಂತೆವಾಡದಲ್ಲಿ ಒಂದು ಸ್ಫೋಟಕ ಉಪಕರಣದಿಂದ ಉಂಟಾದ ಕಾರ್ ಸ್ಫೋಟದಲ್ಲಿ ಆ ಕಾರಿನಲ್ಲಿದ್ದ ಒಬ್ಬ ಬಿಜೆಪಿ ಶಾಸಕ ಮತ್ತು ನಾಲ್ವರು ಭದ್ರತಾ ಸಿಬ್ಬಂದಿ ಕೊಲ್ಲಲ್ಪಟ್ಟರು.

ಈ 'ಪರಿಶುದ್ಧ' ಮೋದಿ ಸರಕಾರದ ಅಡಿಯಲ್ಲಿ ಜಮ್ಮು ಮತ್ತು ಕಾಶ್ಮೀರದಲ್ಲಿ ಭದ್ರತಾ ಸನ್ನಿವೇಶ ಹೇಗೆ ಹದಗೆಟ್ಟಿದೆ ಎಂಬುದನ್ನು ನಾವು ನೋಡುತ್ತಿದ್ದೇವೆ. ಅಲ್ಲಿ 2014ರಿಂದ 2019ರ ನಡುವೆ ಭಯೋತ್ಪಾದಕ ದಾಳಿಗಳ ಸಂಖ್ಯೆ 109ರಿಂದ 626ಕ್ಕೆ ಏರಿದೆ ಮತ್ತು ಕೊಲ್ಲಲ್ಪಟ್ಟ ಭದ್ರತಾ ಸಿಬ್ಬಂದಿಯ ಸಂಖ್ಯೆ 130ರಿಂದ 483ಕ್ಕೇರಿದೆ.

ಹೀಗೆ ಇಲ್ಲಿರುವ ಪ್ರಶ್ನೆ ಒಂದು ಏಕ ಪಕ್ಷ ಬಹುಮತದ ಸರಕಾರ ಇದೆಯೇ ಅಥವ ಒಂದು ಮೈತ್ರಿಕೂಟದ ಸರಕಾರ ಇದೆಯೇ ಎಂಬುದಲ್ಲ. ಆ ಸರಕಾರ ಯಾವ ಧೋರಣೆಗಳನ್ನು ಮತ್ತು ಕಾರ್ಯಕ್ರಮವನ್ನು ಅನುಸರಿಸುತ್ತಿದೆ ಎಂಬುದೇ ಪ್ರಶ್ನೆ.

ನೋಟುರದ್ದತಿಯ ಕರಾಳ ಧೋರಣೆಯನ್ನು ಹೇರಿದ್ದು ಲೋಕಸಭೆಯಲ್ಲಿ ಬಹುಮತ ಹೊಂದಿದ್ದ ಬಿಜೆಪಿಯ ನೇತೃತ್ವದ ಒಂದು ನಿರ್ಣಾಯಕ ಸರಕಾರವೇ ತಾನೇ? ಈ ವಿಧ್ವಂಸಕಾರಿ ಹೆಜ್ಜೆಗೆ ಯಾರನ್ನೂ ಹೊಣೆ ಮಾಡಲಾಗಿಲ್ಲ.

'ಮಹಾಗಟ್‌ಬಂಧನ್' ರಚಿಸಿಕೊಂಡಿರುವ ಎಸ್‌ಪಿ–ಬಿಎಸ್‌ಪಿ–ಆರ್‌ಎಲ್‌ಡಿ ಪಕ್ಷಗಳು ಮೋದಿಯವರ ಪ್ರಧಾನ ಗುರಿ, ಏಕೆಂದರೆ, ಈ ಮೈತ್ರಿಕೂಟ ಉತ್ತರಪ್ರದೇಶದಲ್ಲಿ ಬಿಜೆಪಿಗೆ ಒಂದು ನಿರ್ಣಾಯಕ ಸೋಲು ಉಣ್ಣಿಸುವ ಬೆದರಿಕೆ ಒಡ್ಡಿದೆ. ಆದರೆ ಪ್ರತಿಪಕ್ಷಗಳ ಮೈತ್ರಿಗಳ ಮೇಲೆ ದಾಳಿ ಮಾಡುವ ಭರದಲ್ಲಿ ಎನ್‌ಡಿಎ 40 ಪಕ್ಷಗಳ ಒಂದು 'ಮಹಾಗಟ್‌ಬಂಧನ್' ಎಂಬುದನ್ನು ಮೋದಿ ಮರೆತಿದ್ದಾರೆ.

ಕೇಂದ್ರದಲ್ಲಿ ಒಂದು ಜಾತ್ಯತೀತ ಸರಕಾರವನ್ನು ರಚಿಸಬಲ್ಲ ಒಂದು ಚುನಾವಣೋತ್ತರ ಮೈತ್ರಿಯ ಭೀತಿಯ ಭೂತ ಮೋದಿಯನ್ನು ಕಾಡುತ್ತಿದೆ, ಇಂತಹ ಒಂದು ಸರಕಾರ ಮೈತ್ರಿಕೂಟದ ಎಲ್ಲ ಅಂಗಪಕ್ಷಗಳು ಅಂಗೀಕರಿಸುವ ಒಂದು ಸಮಾನ ಕನಿಷ್ಟ ಕಾರ್ಯಕ್ರಮದ ಆಧಾರದಲ್ಲಿ ರಚನೆಗೊಳ್ಳುತ್ತದೆ. ಇಂತಹ ಒಂದು ಮೈತ್ರಿ ತನ್ನ ಜಾಗದಲ್ಲಿ ಅಧಿಕಾರಕ್ಕೆ ಬರಬಹುದು ಎಂಬ ಭೀತಿಯನ್ನೇ ಮೋದಿ ಮೈತ್ರಿಗಳ ವಿರುದ್ಧ ತನ್ನ ಆರ್ಭಟಗಳ ಮೂಲಕ ಪ್ರದರ್ಶಿಸುತ್ತಿದ್ದಾರೆ. ಆ ಭೀತಿಯ ಭೂತೋಚ್ಚಾಟನೆಗೆ ಅವರು ಪ್ರಯತ್ನಿಸುತ್ತಿದ್ದಾರೆ.



ವ್ಯಂಗ್ಯಚಿತ್ರ: ಅಲೋಕ್ ನಿರಂತರ್

ಮೋದಿಯವರ ವಿರುದ್ಧ ಕ್ಷಿಪ್ರ ಕ್ರಮ ಕೈಗೊಳ್ಳಿ......

ಮುಖ್ಯ ಚುನಾವಣಾ ಆಯುಕ್ತರಿಗೆ ಯೆಚುರಿಯವರ ಮತ್ತೊಂದು ಪತ್ರ

ಪುಟ 2 ರಿಂದ

ಉಲ್ಲಂಘನೆಗಳ ವಿರುದ್ಧ ನಮ್ಮ ಪ್ರತಿಭಟನೆಯನ್ನು ದಾಖಲಿಸುವುದು ನಮ್ಮ ಆದ್ಯ ಕರ್ತವ್ಯವಾಗುತ್ತದೆ.

ಆರನೇ ಘಟ್ಟದ ಮತದಾನದ ಮುನ್ನಾದಿನ ನ್ಯೂಸ್ ನೇಶನ್ ಚಾನಲ್ ಪ್ರಸಾರ ಮಾಡಿರುವ ಒಂದು ಸಂದರ್ಶನದಲ್ಲಿ ಶ್ರೀ ಮೋದಿ ಒಂದು ಅತಿರೇಕದ ದಾವೆ ಇಟ್ಟಿದ್ದಾರೆ. ಭಾರತೀಯ ವಾಯುಪಡೆಯ ಗಡಿಯಾಚೆಗಿನ ಮಿಶನ್ ಗೆ ತಾನು, ಆಗ ಹವಾಮಾನ ಕೆಟ್ಟದಾಗಿದ್ದರೂ, ವೃತ್ತಿಪರ ಪರಿಣಿತರ ಸಲಹೆಯ ವಿರುದ್ಧ ಮಂಜೂರಾತಿಯನ್ನು, ಮೋಡಗಳು ಭಾರತೀಯ ಫೈಟರ್ ಜೆಟ್‌ಗಳನ್ನು ಪಾಕಿಸ್ತಾನಿ ರಾಡಾರ್ ಗಳಿಂದ ಮರೆಮಾಚುತ್ತವೆ ಎಂಬ ಕಾರಣಕ್ಕೆ ನೀಡಿರುವುದಾಗಿಯೂ ಹೇಳಿಕೊಂಡಿದ್ದಾರೆ. ಈ ಮಿಶನ್‌ನ ಯೋಜನೆ ರಚಿಸಿದ್ದ ರಕ್ಷಣಾ ಪರಿಣಿತರ ಸಂದೇಹಗಳನ್ನು ನಿವಾರಿಸಲು ತನ್ನ "ಕಚ್ಚಾ ಜಾಣ್ಮೆ" ಯನ್ನು ಉಪಯೋಗಿಸಿದೆ ಎಂದು ಈ ಸಂದರ್ಶನದಲ್ಲಿ ಅವರು ಹೇಳಿದರು. "ನನ್ನನ್ನು ದೂಷಿಸುವ ದೇಶದ ಪಂಡಿತರಿಗೆ ಇದು ಹೊಳೆಯಲೇ ಇಲ್ಲ ಎಂದು ನನಗೆ ಆಶ್ಚರ್ಯವಾಗುತ್ತಿದೆ" ಎಂದೂ ಅವರು ಹೇಳಿದರು.

ಶ್ರೀ ಮೋದಿಯವರು ಒಂದು ಸೂಕ್ಷ್ಮವಾದ ಮಿಲಿಟರಿ ಮಿಶನ್ ನ ಕಾರ್ಯವಿವರಗಳನ್ನು, ಮತದಾರರ ಮೇಲೆ ಚುನಾವಣಾ ಪ್ರಚಾರದ ಮೌನ ಅವಧಿಯಲ್ಲಿ ಪ್ರಭಾವ ಬೀರುವ ಉದ್ದೇಶದಿಂದ ಹೊರಹಾಕಿರುವ ಸಂದರ್ಶನವನ್ನು ಆಯೋಗ ದಾಖಲು ಮಾಡಿಕೊಂಡು ಕ್ರಮ ಕೈಗೊಳ್ಳಬೇಕಾಗಿದೆ. ಅವರ ವರ್ತನೆ ಮತ್ತು ಹೇಳಿಕೆಗಳು ಚುನಾವಣಾ ಆಯೋಗವು ಮೊದಲ ಸುತ್ತಿನ ಮತದಾನದ ಮೊದಲೇ ಸ್ಪಷ್ಟಪಡಿಸಿದ್ದ ಮತ್ತು ಆಮೇಲೆ ಮತ್ತೆ ಪ್ರಕಟಿಸಿದ ಹಾಗೂ ಪುನರುಚ್ಚರಿಸಿದ, ಸಶಸ್ತ್ರ ಪಡೆಗಳು ಸರ್ವ ಭಾರತಕ್ಕೆ ಸೇರಿರುವಂತದ್ದಾದ್ದರಿಂದ ಅದು ಯಾವುದೇ ಪಕ್ಷಕ್ಕೆ ಮತ ಬಾಚಿಕೊಳ್ಳುವ ಅತಿರೇಕದ ಮತ್ತು ಸುಳ್ಳುದಾವೆಗಳಿಗೆ ಒಂದು ವಿಷಯವಾಗಲಾರದು ಎಂಬ ಮಾರ್ಗಸೂತ್ರದ ಸ್ಪಷ್ಟ ಮತ್ತು ಉದ್ದೇಶಪೂರ್ವಕವಾದ ಉಲ್ಲಂಘನೆಯಾಗಿದೆ.

ಶ್ರೀ ಮೋದಿ ಎಲ್ಲ ನಿಯಮಗಳನ್ನು, ಸಂಹಿತೆಗಳನ್ನು ಮತ್ತು ಮಾರ್ಗಸೂತ್ರಗಳನ್ನು ಮುಲಾಜಿಲ್ಲದೆ ಉಲ್ಲಂಘಿಸುತ್ತ ಚುನಾವಣಾ ಆಯೋಗವನ್ನು ಅಣಕಿಸುತ್ತಿರುವಂತೆ ಕಾಣುತ್ತದೆ. ಇದು ನಮ್ಮ ಪ್ರಜಾಪ್ರಭುತ್ವದ ಮೇಲೆ ಹಾನಿಕಾರಕ ಪರಿಣಾಮಗಳನ್ನು ಬೀರುತ್ತದೆ. ಚುನಾವಣಾ ಆಯೋಗ ನಮ್ಮ ಈ ಪ್ರಜಾಪ್ರಭುತ್ವದ ಪಾಲಕನಾಗಿದೆ. ತಾವು ಚುನಾವಣಾ ಆಯೋಗದ ಪ್ರತಿಷ್ಠೆ, ಗೌರವ ಮತ್ತು ವಿಶ್ವಾಸಾರ್ಹತೆಯನ್ನು ಎತ್ತಿ ಹಿಡಿಯುತ್ತೀರಿ, ಶ್ರೀ ಮೋದಿಯವರ ವಿರುದ್ಧ ಕ್ರಮ ಕೈಗೊಳ್ಳುತ್ತೀರಿ ಎಂದು ನಾವು ಆಶಿಸುತ್ತೇವೆ.

ಶ್ರೀ ಮೋದಿ ಮತ ಯಾಚನೆಗೆ ಸಶಸ್ತ್ರ ಪಡೆಗಳನ್ನು ಉಪಯೋಗಿಸಿರುವ ಮತ್ತು ಚುನಾವಣಾ ಆಯೋಗವನ್ನು ಅಣಕಿಸಿರುವ ಮತ್ತೊಂದು ಸುದ್ದಿ ಬಂದಿದೆ. ಈ ಬಾರಿ ಇದು ಕುಶಿನಗರದಲ್ಲಿ ಮೇ 12, 2019ರ ದು ಚುನಾವಣಾ ರ್‍ಯಾಲಿಯಿಂದ ಬಂದಿದೆ. ಶ್ರೀ ಮೋದಿ "ಇಂದು ಭಯೋತ್ಪಾದಕರನ್ನು ಕಾಶ್ಮೀರದಲ್ಲಿನ ನಮ್ಮ ಸೇನೆ ಸಾಯಿಸಿದೆ. ಈಗ ಕೆಲವು ಮಂದಿಗೆ ಮೋದಿ, ಮತದಾನ ನಡೆಯುತ್ತಿರುವಾಗ ಭಯೋತ್ಪಾದಕರನ್ನು ಯಾಕೆ ಕೊಂದರು ಎಂದು ಬೇಸರವಾಗಿರುತ್ತದೆ. ಸಶಸ್ತ್ರ ಭಯೋತ್ಪಾದಕ ದಾಳಿ ಮಾಡುತ್ತಿದ್ದಾನೆ, ನನ್ನ ಸೈನಿಕರು ಚುನಾವಣಾ ಆಯೋಗಕ್ಕೆ ಅವನನ್ನು ಕೊಲ್ಲಲು ಅನುಮತಿ ಕೇಳಲು ಹೋಗಬೇಕೇ?" ಎಂದು ಕೇಳಿರುವುದಾಗಿ ವರದಿಯಾಗಿದೆ. ಗಮನಿಸಿ ಅವರ ದಾವೆಯನ್ನು: ಭಯೋತ್ಪಾದಕರನ್ನು ಕೊಂದಿರುವುದು ತಾನು, ನಮ್ಮ ಸಶಸ್ತ್ರ ಪಡೆಗಳಲ್ಲ!

ಈ ಹಿಂದೆ ಕೂಡ, ನಾವು, ಅವರ ಉಲ್ಲಂಘನೆಗಳ ಇಂತಹ ಘಟನೆಗಳನ್ನು ತಮ್ಮ ಗಮನಕ್ಕೆ ತಂದಿದ್ದೇವೆ. ಆದರೆ, ಚುನಾವಣಾ ಆಯೋಗ, ಶ್ರೀ ಮೋದಿ ಮತ್ತು ಶ್ರೀ ಅಮಿತ್ ಷಾ ಚುನಾವಣಾ ಪ್ರಕ್ರಿಯೆಗೆ ಮೀರಿದವರು, ಮಾದರಿ ಆಚಾರ ಸಂಹಿತೆ ಅವರಿಗೆ ಅನ್ವಯವಾಗುವುದಿಲ್ಲ ಎಂದು ಯೋಚಿಸಿರುವಂತೆ ಕಾಣುತ್ತದೆ. ಇದನ್ನು ಹಲವಾರು ವ್ಯಂಗ್ಯಚಿತ್ರಕಾರರು, ಪತ್ರಿಕಾ ಸಂಪಾದಕೀಯಗಳು ಮತ್ತು ಟಿಪ್ಪಣಿಗಾರರು ಗಮನಿಸಿದ್ದಾರೆ. ಅವರೆಲ್ಲರ ಭಾವನೆ ತಪ್ಪು ಎಂದು ಚುನಾವಣಾ ಆಯೋಗ ಸಾಬೀತು ಮಾಡುತ್ತದೆ, ಮತ್ತು ಕ್ಷಿಪ್ರ ಹಾಗೂ ಸೂಕ್ತ ಕ್ರಮ ಕೈಗೊಳ್ಳುತ್ತದೆ ಎಂದು ನಾನು ಆಶಿಸುತ್ತೇನೆ.

ನಿಮ್ಮ ವಿಶ್ವಾಸಿ,
ಸೀತಾರಾಮ್ ಯೆಚುರಿ
ಪ್ರಧಾನ ಕಾರ್ಯದರ್ಶಿ



ಮತದಾರ ಬರುತ್ತಿದ್ದಾನೆ, ಆ ಮೋಡಗಳ ಹಿಂದೆ ಅಡಗಿಕೊಳ್ಳಿ
ವ್ಯಂಗ್ಯ ಚಿತ್ರ: ಅಲೋಕ್ ನಿರಂತರ್

ಬೌದ್ಧ ದರ್ಶನ

ನಿತ್ಯಾನಂದಸ್ವಾಮಿ



ಬುದ್ಧ ಪ್ರಾಚೀನ ಭಾರತದ ಒಬ್ಬ ಶ್ರೇಷ್ಠ ದಾರ್ಶನಿಕ ಹಾಗೂ ಸಮಾಜ ಸುಧಾರಕನಾಗಿದ್ದನು. ಭಾರತದಲ್ಲಿ ಇಂದಿಗೂ ಜೀವಂತವಾಗಿರುವ ಶ್ರೇಣಿಕೃತ ಜಾತಿ ವ್ಯವಸ್ಥೆಯನ್ನು ವಿರೋಧಿಸಿದ ಭಾರತದ ಮೊದಲ ಸಮಾಜ ಚಿಂತಕ ಭಾರತದ ತತ್ವಶಾಸ್ತ್ರೀಯ ಪರಂಪರೆಗೆ ಬುದ್ಧನ ಕೊಡುಗೆ ಅನನ್ಯವಾದದು.

ಪ್ರಾಚೀನ ಭಾರತದಲ್ಲಿ ತತ್ವಶಾಸ್ತ್ರೀಯ ಚಿಂತನೆ ಕ್ರಿ.ಪೂ. ಒಂದನೇ ಸಹಸ್ರಮಾನದ ಮಧ್ಯ ಭಾಗದಲ್ಲಿ ಕಾಣಸಿಗುತ್ತದೆ. ವೇದಗಳೇ ಭಾರತೀಯ ತತ್ವಶಾಸ್ತ್ರದ ಕೇಂದ್ರ ಬಿಂದು. ವೇದ ಎಂದರೆ ಜ್ಞಾನ ಎಂದರ್ಥ. ಬರವಣಿಗೆ ಇನ್ನೂ ಆರಂಭವಾಗುವ ಮೊದಲು ಬಾಯ್ದೆರೆಯಾಗಿ ರಚಿಸಲಾದ, ತಲೆಮಾರಿನಿಂದ ತಲೆಮಾರಿಗೆ ಬೋಧಿಸಲಾಗುತ್ತಿದ್ದ ಗೀತೆಗಳೇ ವೇದಗಳು. ಅವುಗಳನ್ನು ಶ್ರುತಿ (ಕೇಳಿ ತಿಳಿದಿದ್ದು) ಗಳೆನ್ನುತ್ತಾರೆ. ಇವುಗಳಲ್ಲಿ ವಿಶ್ವದ ಕುರಿತಾದ ಕಲ್ಪನೆಗಳು, ಮಾನವನ ನೈತಿಕ ಜೀವನದ ವಿಚಾರಗಳು ಒಳಗೊಂಡಿವೆ.

ವೇದಗಳು ನಾಲ್ಕು. (1) ಋಗ್ವೇದ (2) ಯಜುರ್ವೇದ (3) ಸಾಮವೇದ (4) ಅಥರ್ವವೇದ. ಒಂದೊಂದು ವೇದವನ್ನು 4 ಭಾಗಗಳಾಗಿ ವಿಂಗಡಿಸಲಾಗಿದೆ. (1) ಸಹಿತೆ = ಪ್ರಕೃತಿಯ ಶಕ್ತಿಗಳನ್ನು ಕುರಿತು ಗೀತೆಗಳು. (2) ಬ್ರಾಹ್ಮಣ = ಯಜ್ಞಯಾದಿಗಳಲ್ಲಿ ಬಳಸುವ ಮಂತ್ರಗಳು. (3) ಅರಣ್ಯಕ = ಸನ್ಯಾಸಿಗಳು ಅನುಸರಿಸಬೇಕಾದ ಜೀವನ ನಿಯಮಗಳು. (4) ಉಪನಿಷತ್ತುಗಳು = ತತ್ವಶಾಸ್ತ್ರೀಯ ವಿಚಾರಗಳು.

ವೇದಗಳನ್ನೇ ಆಧಾರವಾಗಿಟ್ಟು 6 ತತ್ವಶಾಸ್ತ್ರೀಯ ಪಂಥಗಳು ಅನಂತರ ಬೆಳೆದುಬಂದವು. ಅವುಗಳನ್ನು ವೈದಿಕ ದರ್ಶನಗಳೆಂದೂ, ಆಸ್ತಿಕ ಷಡ್ದರ್ಶನಗಳೆಂದೂ ಕರೆಯುತ್ತಾರೆ. 1) ಸಂಖ್ಯಾ ದರ್ಶನ, 2) ಯೋಗದರ್ಶನ 3) ನ್ಯಾಯ ದರ್ಶನ 4) ವೈಶೇಷಿಕ ದರ್ಶನ 5) ಮಿಮಾಂಸ ದರ್ಶನ ಮತ್ತು 6) ವೇದಾಂತ ದರ್ಶನ.

ವೇದಗಳ ನಾಲ್ಕನೇಯ (ಕೊನೆಯ) ಭಾಗವೇ ಉಪನಿಷತ್ತುಗಳು ಎಂದು ಮೇಲೆ ಹೇಳಲಾಗಿದೆ. ವೇದಗಳು ಅಂತ್ಯ ಭಾಗವೇ ಉಪನಿಷತ್ತುಗಳು. ವೇದಗಳ ಅಂತ್ಯ ಭಾಗವನ್ನು ಅಂದರೆ ಉಪನಿಷತ್ತುಗಳನ್ನು ಆಧರಿಸಿದ ತತ್ವಶಾಸ್ತ್ರೀಯ ಪಂಥವೇ 'ವೇದಾಂತ ದರ್ಶನ'. 250 ಕ್ಕೂ ಹೆಚ್ಚು ಉಪನಿಷತ್ತುಗಳಿವೆ. ಅವುಗಳಲ್ಲಿ 108 ಅತಿ ಪ್ರಾಚೀನವಾದವುಗಳು. ಉಪನೀಷತ್ತುಗಳಲ್ಲಿ 10 ಪ್ರಮುಖವಾಗಿವೆ. ಕ್ರಿ. ಶ. ಆರಂಭದ ಸುಮಾರಿಗೆ ಬಾದರಾಯಣ ಎಂಬುವರು 'ವೇದಾಂತ ದರ್ಶನ' ವನ್ನು ಸೂತ್ರ ರೂಪದಲ್ಲಿ ನಿರೂಪಿಸಿದರು. ಅದವೇ 'ಬ್ರಹ್ಮ ಸೂತ್ರ'. ಶಂಕರ, ರಾಮಾನುಜ ಮತ್ತು ಮದ್ವರು ಬ್ರಹ್ಮಸೂತ್ರಕ್ಕೆ ಭಿನ್ನ ಭಿನ್ನವಾದ ವಾಖ್ಯೆ (ಭಾಷ್ಯ) ಬರೆದರು. ಶಂಕರ ಅದ್ವೈತ ಸಿದ್ಧಾಂತವನ್ನು ರಾಮಾನುಜ ವಿಶಿಷ್ಟಾದ್ವೈತ ಸಿದ್ಧಾಂತವನ್ನು ಹಾಗೂ ಮದ್ವ ದ್ವೈತ ಸಿದ್ಧಾಂತವನ್ನು ಪ್ರತಿಪಾದಿಸಿದರು.

ವೇದಗಳನ್ನು ಒಪ್ಪದ 3 ಪಂಥಗಳು 'ನಾಸ್ತಿಕ ದರ್ಶನ' ಗಳೆಂದು ಪ್ರಚಾರಕ್ಕೆ ಬಂದವು. 1) ಲೋಕಾಯತ 2) ಜೈನ ಮತ್ತು 3) ಬೌಧ ದರ್ಶನಗಳು ವೇದಗಳನ್ನು ತಿರಸ್ಕಾರಿಸಿದ ಅವೈದಿಕ ದರ್ಶನಗಳಾಗಿವೆ.

ಬುದ್ಧನ ಜೀವನ ವೃತ್ತಾಂತ :

ಬುದ್ಧನ ಮೂಲ ಹೆಸರು ಗೌತಮ. ತಾಯಿ ಮಾಯಾದೇವಿ. ತಂದೆ ಶುದ್ಧೋಧನ. ಇವರು ಶಾಕ್ಯ ಬುಡಕಟ್ಟಿಗೆ ಸೇರಿದವರು. ಬುದ್ಧ ಹುಣ್ಣಿಮೆಯಂದು ಜನಿಸಿದ್ದರಿಂದ ಬುದ್ಧನ ಜನ್ಮದಿನವನ್ನು ಬುದ್ಧ ಪೂರ್ಣಿಮೆ ಎಂದು ಕರೆಯುತ್ತಾರೆ.

ಕೋಸಲ ದೇಶದಲ್ಲಿದ್ದ ಲುಂಬಿನಿಯು ಬುದ್ಧನ ಜನ್ಮಸ್ಥಳ. ಇಂದು ನೇಪಾಳದಲ್ಲಿರುವ ಲುಂಬಿನಿ ಮತ್ತು ಕಪಿಲವಸ್ತು ಬುದ್ಧ ತನ್ನ ಬಾಲ್ಯದಲ್ಲಿ ಕಳೆದ ಸ್ಥಳಗಳು. ಬುದ್ಧನ ಬಾಲ್ಯದ ಹೆಸರು ಸಿದ್ಧಾರ್ಥ.

ಸಿದ್ಧಾರ್ಥನ ಕಾಲದ ಸಮಾಜದಲ್ಲಿ ಜನಸಾಮಾನ್ಯರ ಜೀವನ ಹೀನಾಯ ಸ್ಥಿತಿಯಲ್ಲಿತ್ತು. ಸಮಾಜ ನಾಲ್ಕು ವರ್ಣಗಳಾಗಿ ವಿಭಜನೆಯಾಗಿತ್ತು. ಇವುಗಳಲ್ಲಿ ಬ್ರಾಹ್ಮಣರದೇ ಮೇಲುಗೈ. ಯಜ್ಞಯಾದಿಗಳನ್ನು ಮಾಡುತ್ತಿದ್ದರು. ಶೂದ್ರರು ಅನೇಕ ಪಂಗಡಗಳಾಗಿ ವಿಂಗಡನೆಯಾಗಿದ್ದರು. ವ್ಯವಸಾಯದ ಕ್ಷೋಭೆಯಿಂದ ಜನರು ನರಳುತ್ತಿದ್ದರು. ಬರಗಾಲಕ್ಕೆ ತುತ್ತಾಗಿ ಹಸಿವೆಯಿಂದ ಸಾಯುತ್ತಿದ್ದರು.ಜನರ ದುಃಖವನ್ನು ಕಂಡು ಸಿದ್ಧಾರ್ಥನ ಮನಸ್ಸು ನೊಂದಕೊಂಡಿತು.

ಸಿದ್ಧಾರ್ಥ ವಯಸ್ಸಿಗೆ ಬಂದಾಗ ಯಶೋಧರೆಯೊಂದಿಗೆ ಆತನ ವಿವಾಹವಾಯಿತು. ಇವರಿಗೆ ರಾಹುಲ ಎಂಬ ಮಗ ಜನಿಸಿದನು. ಮಗ ಹುಟ್ಟಿದ ಏಳನೇ ದಿನಕ್ಕೆ ಸಿದ್ಧಾರ್ಥ ಮನೆ ಬಿಟ್ಟು ಹೊರಟು ಹೋದ ಎನ್ನುತ್ತವೆ ಬೌದ್ಧ ಗ್ರಂಥಗಳು. ಮನೆ ತೊರೆದು ಹೊರಟ ಸಿದ್ಧಾರ್ಥನು ಭಿಕ್ಷೆ ಬೇಡುತ್ತಾ ಸನ್ಯಾಸಿ ಜೀವನವನ್ನು ಆರಂಭಿಸಿದನು. ಧಾನ್ಯದ ಮಾರ್ಗವನ್ನು ಅರಸುತ್ತಾ ಸಾಗಿದ ಸಿದ್ಧಾರ್ಥನಿಗೆ ಇಂದು ಬೋಧಗಯಾ ಎಂದು ಪ್ರಸಿದ್ಧವಾಗಿರುವ ಸ್ಥಳದಲ್ಲಿ ಜ್ಞಾನೋದಯವಾಯಿತು ಎಂದು ಹೇಳಲಾಗುತ್ತದೆ. ಅಂದಿನಿಂದ ಸಿದ್ಧಾರ್ಥ ಬುದ್ಧ (ಜ್ಞಾನಿ) ಎಂದು ಕರೆಯಲ್ಪಡುತ್ತಾನೆ.

ಬುದ್ಧನ ತತ್ವ ಶಾಸ್ತ್ರ :

ಬುದ್ಧ ಉಪದೇಶ ಮಾಡುತ್ತಾ ಸಂಘವನ್ನು ಕಟ್ಟುವ ಕೆಲಸ ಆರಂಭಿಸುತ್ತಾನೆ. 'ಅಷ್ಟಾಂಗ ಮಾರ್ಗ' ಎಂಬ ಎಂಟು ಸೂತ್ರಗಳನ್ನು ಪ್ರಕಟಿಸುತ್ತಾನೆ. ಒಳ್ಳೆಯ ಉದ್ದೇಶ, ಒಳ್ಳೆಯ ಸಂಕಲ್ಪ, ಒಳ್ಳೆಯ ಮಾತು, ಒಳ್ಳೆಯ ಕೃತಿ, ಒಳ್ಳೆಯ ಜೀವನ, ಒಳ್ಳೆಯ ಪ್ರಯತ್ನ, ಒಳ್ಳೆಯ ಮನಸ್ಸು, ಒಳ್ಳೆಯ ಸಮಾಧಿ. ದುಃಖ ನಿರೋಧದ ಮಾರ್ಗವೇ "ಅಷ್ಟಾಂಗ ಮಾರ್ಗ" ಬುದ್ಧನ ತತ್ವಶಾಸ್ತ್ರದ ಬೇರುಗಳು ಈ ಅಷ್ಟಾಂಗ ಮಾರ್ಗಗಳಲ್ಲಿವೆ ಎಂದು ಡಿ.ಡಿ. ಕೋಸಾಂಬಿ ಅಭಿಪ್ರಾಯ ಪಡುತ್ತಾರೆ. ಇದು ಮಧ್ಯ ಮಾರ್ಗ ಎಂದು ಪ್ರಸಿದ್ಧವಾಯಿತು. ವೈದಿಕ ಮತ್ತು ಅವೈಧಿಕ ತತ್ವ ಶಾಸ್ತ್ರಗಳ ನಡುವಿನ ಮಾರ್ಗ.

ಬುದ್ಧ ಮುಕ್ತ ಚಿಂತನೆಯನ್ನು ತಡೆಯುವ ಶಾಸ್ತ್ರೀಯ ಚಿಂತನಾ ವಿಧಾನವನ್ನು ಒಪ್ಪುತ್ತಿರಲಿಲ್ಲ. ಯಾವುದೂ ಸ್ವತಂತ್ರವಾಗಿ ಅಸ್ತಿತ್ವದಲ್ಲಿರುವುದಿಲ್ಲ. ಪ್ರತಿಯೊಂದೂ ಯಾವುದೋ ಕಾರಣದ ಪರಿಣಾಮ ಆಗಿರುತ್ತದೆ. ಚಿರಂತನವಾದ ಆತ್ಮವಾಗಲಿ, ಬ್ರಹ್ಮನಾಗಲಿ ಇರುವುದಿಲ್ಲ ಎಂದು ಬುದ್ಧ ಪ್ರತಿಪಾದಿಸುತ್ತಿದ್ದರು. ಆದಿ ಇದ್ದಲ್ಲಿ ಅಂತ್ಯ ಇರುತ್ತದೆ. ಜೀವ ಇದ್ದರೆ ಸಾವು. ಬುದ್ಧನ ಪ್ರಕಾರ ವಿಶ್ವವು ಕೊನೆಯಿಲ್ಲದ ಪ್ರಕ್ರಿಯೆ. ಅರಸೊತ್ತಿಗೆ ಸಾಮಾಜಿಕ ದೌರ್ಜನ್ಯ, ಗುಲಾಮಗಿರಿ, ಅಸಮಾನತೆ ಇವೆಲ್ಲವೂ ತಾತ್ಕಾಲಿಕ ಹಗಲು ರಾತ್ರಿಯನ್ನು ಹಿಂಬಾಲಿಸುವಂತೆ ಹೊಸತು ಹಳೆಯದನ್ನು ಹಿಂಬಾಲಿಸುತ್ತದೆ. ಚರಿತ್ರೆ ಎಂದರೆ ಹಳೆಯ ಘಟನೆಗಳ ಪುನರಾವರ್ತನೆ ಅಲ್ಲ. ಮಾನವ ನಾಗರಿಕತೆ ಅಂದರೆ ಕೆಳಸ್ತರದಿಂದ ಮೇಲ್ಸ್ತರಕ್ಕೆ ಕ್ರಮೇಣವಾಗಿ ಸಾಗುವ ಚಲನೆ.

ಬೌದ್ಧ ತತ್ವಶಾಸ್ತ್ರ ದೇವರ ಅಸಿತ್ವವನ್ನು ಸ್ಪಷ್ಟವಾಗಿ ನಿರಾಕರಿಸುತ್ತದೆ. ಅದೇ ರೀತಿ ಅಂತ್ಯ ಇಲ್ಲದ ಆತ್ಮದ ಅಸ್ತಿತ್ವವನ್ನೂ ಅದು ನಿರಾಕರಿಸುತ್ತದೆ. ಶರೀರ ಸಾವನಪ್ಪಿದ ನಂತರವೂ ಆತ್ಮ ಅಸ್ತಿತ್ವದಲ್ಲಿ ಇರುತ್ತದೆ ಎಂಬುದನ್ನು ಬೌದ್ಧ ತತ್ವಶಾಸ್ತ್ರ ಒಪ್ಪುವುದಿಲ್ಲ.

ಭಾರತೀಯ ತತ್ವಶಾಸ್ತ್ರಕ್ಕೆ ಬೌದ್ಧ ತತ್ವಶಾಸ್ತ್ರದ ಕೊಡುಗೆ ತುಂಬಾ ಮಹತ್ವದ್ದು. ಚಲನೆ ಅಥವ ಬದಲಾವಣೆಯನ್ನು ವಿವರಿಸಲು ಅದು ದ್ವಂದಮಾನ ಪರಿಕಲ್ಪನೆಯನ್ನು ಬಳಸುತ್ತದೆ. ಬುದ್ಧನ ಮಾತುಗಳಲ್ಲಿ ಹೇಳುವುದಾದರೆ, ಈ ಪ್ರಪಂಚವು ಸಾಮಾನ್ಯವಾಗಿ ದ್ವಂದದ ಆಧಾರದಲ್ಲಿ ನಡೆಯುತ್ತದೆ. 'ಅದು ಇದೆ' ಮತ್ತು 'ಅದು ಇಲ್ಲ' ಅದು ಹೌದು ಮತ್ತು ಅದು ಅಲ್ಲ ಎಂಬ ದ್ವಂದ ಇದ್ದೇ ಇರುತ್ತದೆ.

ಬೌದ್ಧ ದರ್ಶನದ ಸಾಮಾಜಿಕ ಮಹತ್ವ

ವರ್ಣ ವ್ಯವಸ್ಥೆಯ ವಿರುದ್ಧ ಬಲವಾದ ಧ್ವನಿ ಎತ್ತುವ ಮೂಲಕ ಬೌದ್ಧ ತತ್ವಶಾಸ್ತ್ರ ಕ್ರಾಂತಿಕಾರಿ ಪಾತ್ರವನ್ನು ನಿರ್ವಹಿಸಿತು. ಉಪನಿಷತ್ತುಗಳು ವರ್ಣ ವ್ಯವಸ್ಥೆಯನ್ನು, ತಳವರ್ಗಗಳ ಗುಲಾಮಗಿರಿಯನ್ನು ಬೆಂಬಲಿಸುತ್ತವೆ. ಆದ್ದರಿಂದ ಬುದ್ಧ ವೇದಗಳನ್ನು, ಉಪನಿಷತ್ತುಗಳನ್ನು ತಿರಸ್ಕರಿಸಿದರು. ಎಲ್ಲವೂ ಬದಲಾಗುತ್ತದೆ. ಯಾವುದೂ ಶಾಶ್ವತವಲ್ಲ. ಈ ವರ್ಣವ್ಯವಸ್ಥೆಯೂ ಶಾಶ್ವತವಲ್ಲ ಎಂದು ಬುದ್ಧ ಘೋಷಿಸಿದರು. ಮಾನವ ಕುಲವನ್ನು ಎಲ್ಲ ತರಹದ ಶೋಷಣೆ, ತಾರತಮ್ಯದಿಂದ ಮುಕ್ತಗೊಳಿಸುವುದೇ ತನ್ನ ಬದುಕಿನ ಉದ್ದೇಶವಾಗಿದೆ ಎಂದು ಬುದ್ಧ ಘೋಷಿಸಿದಾಗ ಅಂದಿನ ದಲಿತರು, ದಮನಿತರು ಮಹಿಳೆಯರು ಬುದ್ಧನಲ್ಲಿ ತಮ್ಮ ವಿಮೋಚಕನನ್ನು ಕಂಡರು. ಬುದ್ಧ ದ್ವಂದಮಾನ ಭೌತವಾದದ ನಿಯಮಗಳನ್ನು ತನ್ನದೆ ಆದ ರೀತಿಯಲ್ಲಿ ಅಂದಿನ ಸಾಮಾಜಿಕ ಪರಿಸ್ಥಿತಿಗೆ ಅನ್ವಯಿಸಲು ಮಾಡಿದ ಪ್ರಯತ್ನ ಹಾಗೂ ಸಾಧನೆ ಶ್ಲಾಘನೀಯವಾಗಿದೆ.

ಬುದ್ಧ ಅಭಿವೃದ್ಧಿ ಪಡಿಸಿದ ತತ್ವಶಾಸ್ತ್ರದಲ್ಲಿ ನ್ಯೂನತೆಗಳು ಇವೆ. ಕರ್ಮ ಸಿದ್ಧಾಂತ, ಪುನರ್ಜನ್ಮದಂತಹ ಪ್ರಶ್ನೆಗಳಿಗೆ ಬೌದ್ಧ ತತ್ವಶಾಸ್ತ್ರ ಸಮರ್ಪಕವಾದ ಉತ್ತರ ನೀಡುವುದಿಲ್ಲ. ಧಾರ್ಮಿಕ ಆಚರಣೆಗಳು, ಮೂಢ ನಂಬಿಕೆಗಳ ವಿರುದ್ಧ ಬುದ್ಧ ಸ್ಪಷ್ಟವಾಗಿ ಧ್ವನಿ ಎತ್ತಿದ್ದಾರೆ. ಆದರೆ ಬುದ್ಧನ ನಂತರದ ಬೌದ್ಧ ಧರ್ಮದಲ್ಲಿ ಮೌಢ್ಯಾಚರಣೆಗಳಿಗೆ ಅವಕಾಶ ದೊರೆತದನ್ನು ಕಾಣಬಹುದು. ಬುದ್ಧನಿಗೆ ಆ ಕಾಲದಲ್ಲಿ ವಿಜ್ಞಾನದ ಸಂಶೋಧನೆಗಳ ನೆರವು ಸಿಕ್ಕಿರಲಿಲ್ಲ. ಸ್ವಯಂ ಚಿಂತನೆ ಹಾಗೂ ಜನರೊಂದಿಗೆ, ಭಿಕ್ಷುಗಳೊಂದಿಗೆ ಬುದ್ಧ ನಡೆಸಿದ ಸಂವಾದದಿಂದ ಒಂದು ಭೌತವಾದಿ ತತ್ತಶಾಸ್ತ್ರವನ್ನು ಅಭಿವೃದ್ಧಿ ಪಡಿಸಲು ಸಾಧ್ಯವಾಗಿರುವುದು ಭಾರತ ಹೆಮ್ಮೆ ಪಡುವ ವಿಷಯವಾಗಿದೆ.ಬುದ್ಧನ ಪ್ರತಿಪಾದನೆಯಿಂದಾಗಿ ಮುಕ್ತವಾದ ಚಿಂತನೆಯ ಬಾಗಿಲುಗಳನ್ನು ತೆರೆದಂತಾಯಿತು. ವಿಶ್ವವನ್ನು ವಿಜ್ಞಾನದ ಬೆಳಕಿನಲ್ಲಿ ನೋಡಲು ಪ್ರೋತ್ಸಾಹ ದೊರೆಯಿತು.ಅನಿಷ್ಟ ಜಾತಿ ಪದ್ಧತಿ ವಿರುದ್ಧ ಹೋರಾಡಲು ಸೈದ್ಧಾಂತಿಕ ಅಸ್ತ್ರ ದೊರೆಯುವಂತಾಯಿತು. ಡಾ. ಬಾಬಾಸಾಹೇಬ್ ಅಂಬೇಡ್ಕರ್ ತಮ್ಮ ಬದುಕಿನ ಸಾರ್ಥಕತೆಯನ್ನು ಪಡೆಯುವಂತಾಯಿತು.



ಸಾಮಾಜಿಕ ಮತ್ತು ರಾಜಕೀಯ ಕಾರ್ಯಕರ್ತರಿಗೆ ಚಿರಪರಿಚಿತ ಹೆಸರು ತೀಸ್ತಾ ಸೆತಲ್ವಾಡ್. ಮುಂಬೈನ ವಕೀಲರ ಕುಟುಂಬಕ್ಕೆ ಸೇರಿದ ತೀಸ್ತಾ ಕಾನೂನು ಮತ್ತು ಸಂವಿಧಾನದ ಮೌಲ್ಯಗಳನ್ನೇ ಉಸಿರಾಗಿಸಿಕೊಂಡು ಬೆಳೆದವರು. ತಂದೆ, ತಾತ ಮತ್ತು ಮುತ್ತಾತ ದೇಶದ ಪ್ರಸಿದ್ಧ ವಕೀಲರಾಗಿ ಪಡೆದಿದ್ದ ಶ್ರೇಯಸ್ಸಿನ ನೆರಳಲ್ಲೇ ಸಾಗಿದ ತೀಸ್ತಾ ನ್ಯಾಯದಾನಕ್ಕಾಗಿ ಆರಿಸಿಕೊಂಡಿದ್ದು ಪತ್ರಿಕೋದ್ಯಮವನ್ನು. ವೃತ್ತಿಯ ಆರಂಭದಲ್ಲೇ ಕೋಮುಗಲಭೆಯ ವರದಿಗಾರಿಕೆ ಮಾಡಬೇಕಾಗಿ ಬರುತ್ತದೆ. ಅಲ್ಲಿ ಕಂಡ ಮಾನವ ಹಕ್ಕುಗಳ ದಮನ, ದ್ವೇಷದ ರಾಜಕೀಯ, ರಾಜಸತ್ತೆಯ ದಮನಕಾರಿ ಪ್ರವೃತ್ತಿಗಳು ಅವರನ್ನು ಆಕ್ಟಿವಿಸ್ಟ್ ಆಗಿ ರೂಪಿಸುತ್ತದೆ. ಪತ್ರಿಕೋದ್ಯಮದಲ್ಲೇ ಬಾಳ ಸಂಗಾತಿ ಜಾವೇದ್ ಆನಂದ್ ಅವರನ್ನೂ ಭೇಟಿ ಮಾಡುವ ತೀಸ್ತಾ ಮುಂದೆ ಪ್ರಮುಖ ವಾಹಿನಿ ಪತ್ರಿಕೆಗಳಿಂದ ಭ್ರಮನಿರಸನಗೊಂಡು 'ಕಮ್ಯುನಲಿಸಂ ಕಾಂಬ್ಯಾಟ್' ಎನ್ನುವ ಪತ್ರಿಕೆಯನ್ನು ಆರಂಭಿಸಿದರು. ಕೋಮುವಾದದ ವಿರುದ್ಧ ಸಾಮಾಜಿಕ, ರಾಜಕೀಯ ಹಾಗೂ ಕಾನೂನು ಹೋರಾಟಗಳನ್ನು ನಡೆಸುತ್ತಾ ಬಂದಿರುವ ಈ ಪತ್ರಿಕೆಯು ಜಗತ್ತಿನಲ್ಲೇ ವಿಶಿಷ್ಟ ಎನ್ನಲಾಗಿದೆ.

1984 ಹಾಗೂ 1992–93 ಮುಂಬೈ ಗಲಭೆಗಳು ಹಾಗೂ 2002ರ ಗುಜರಾತ್ ಹತ್ಯಾಕಾಂಡದಲ್ಲಿ ನೊಂದು ಬೆಂದವರಿಗೆ ನ್ಯಾಯ ದೊರಕಿಸಿಕೊಡಲು ಅನವರತ ಶ್ರಮಿಸುತ್ತಿರುವ ತೀಸ್ತಾ ಇಂದು ಭಾರತದ ಪ್ರಮುಖ ಮಾನವಹಕ್ಕು ಹೋರಾಟಗಾರ್ತಿಯಾಗಿದ್ದಾರೆ. ತಮ್ಮ ಸತತ ಹೋರಾಟದಿಂದ ಗುಜರಾತ್ ಹತ್ಯಾಕಾಂಡದಲ್ಲಿ 117 ಜನರಿಗೆ ಶಿಕ್ಷೆಯಾಗುವಂತೆ ಶ್ರಮವಹಿಸಿದವರು ತೀಸ್ತಾ. ಇವರ ಹೋರಾಟದಿಂದ ಎದೆಗುಂದಿದ ಗುಜರಾತ್ ಸರ್ಕಾರ ಇವರ ಮೇಲೆ ಅನೇಕ ರೀತಿಯ ದೈಹಿಕ, ಮಾನಸಿಕ ಮತ್ತು ಕಾನೂನು ದಾಳಿಗಳನ್ನು ನಡೆಸಿದರೂ ಎದೆಗುಂದದೆ ನ್ಯಾಯಕ್ಕಾಗಿ ಹೋರಾಡುತ್ತಿರುವ ಅಪರೂಪದ ವ್ಯಕ್ತಿ ತೀಸ್ತಾ. ದಮನಿತರ ನಿಜವಾದ ಸಂಗಾತಿ.

ತಮ್ಮ ಬಾಲ್ಯ, ಯೌವನ, ಹಾಗೂ ನಂತರದ ಹೋರಾಟದ ಬದುಕನ್ನು ದಾಖಲಿಸಿರುವ ಹೊತ್ತಿಗೆಯೇ ಸಂವಿಧಾನದ ಕಾಲಾಳು ಪುಸ್ತಕ. ಇದನ್ನು ಇಂಗ್ಲೀಷ್ ಮೂಲದಲ್ಲಿ ದೆಹಲಿಯ ಲೆಫ್ಟ್‌ವರ್ಡ್ ಪ್ರಕಟಿಸಿದ್ದು, ಸಂವಹನ ಸಮಾಲೋಚಕಿ ಸತ್ಯಾ ಎಸ್ ಇದನ್ನು ಕನ್ನಡಕ್ಕೆ ತಂದಿದ್ದಾರೆ. ಅದನ್ನು ಕ್ರಿಯಾ ಮಾಧ್ಯಮ ಸದ್ಯದಲ್ಲೇ ಬಿಡುಗಡೆ ಮಾಡಲಿದೆ.

ಪುಸ್ತಕದಿಂದ ಆಯ್ದ ಎರಡು ಭಾಗಗಳನ್ನು ಇಲ್ಲಿ ಪ್ರಕಟಿಸಲಾಗಿದೆ:



'ಸಂವಿಧಾನದ ಕಾಲಾಳು'
ತೀಸ್ತಾ ಸೆತಲ್ವಾಡ್ ನೆನಪುಗಳು

1992–93ರ ಮುಂಬೈ ಗಲಭೆಗಳನ್ನು ಬಿಸಿನೆಸ್ ಇಂಡಿಯಾ ಪತ್ರಿಕೆಗೆ ವರದಿ ಮಾಡುತ್ತಿದ್ದ ಸಂದರ್ಭ. ಸುದ್ದಿ ಸಂಗ್ರಹಣೆ ಮಾಡುತ್ತಾ ಬೀದಿಗಳಲ್ಲಿ ಅಲೆದಾಡುತ್ತಿದ್ದೆ. 1993ರ ಜನವರಿ 10 ರಿಂದ 18 ರವರೆಗೆ ಕೆಲವು ಮುಸ್ಲಿಂ ಯುವಕರ ನೆರವಿನಿಂದ ಪೊಲೀಸರ ವಯರ್ ಲೆಸ್ ಸಂದೇಶಗಳನ್ನು ಆಲಿಸಿದೆವು. ಅದು ಸಂಚಾರಿ ಪೊಲೀಸ್ ವ್ಯಾನ್ ಮತ್ತು ಪೊಲೀಸ್ ಕಂಟ್ರೋಲ್ ರೂಂ ನಡುವೆ ನಡೆಯುತ್ತಿದ್ದ ಸಂಭಾಷಣೆಯಾಗಿತ್ತು. ಅದರ ಫ್ರೀಕ್ವೆನ್ಸಿಯನ್ನು ಹೇಗೋ ಪತ್ತೆ ಮಾಡಿ, ಧ್ವನಿ ಮುದ್ರಣವನ್ನೂ ಮಾಡಿಕೊಂಡು ದಾಖಲೆಯಾಗಿ ಸಂಗ್ರಹಿಸಿದೆವು.

ಆ ಸಂಭಾಷಣೆಗಳಲ್ಲಿ ಮುಸ್ಲಿಮರನ್ನು ಅವಾಚ್ಯ ಶಬ್ದಗಳಿಂದ ನಿಂದಿಸುತ್ತಿದ್ದ ಪೊಲೀಸರು, ಮುಸ್ಲಿಮರ ಪ್ರದೇಶಗಳಿಗೆ ಹೋಗದಂತೆ ಪರಿಹಾರ ತಂಡಗಳಿಗೆ ಸೂಚನೆಯನ್ನು ಕೊಡುತ್ತಿದ್ದರು. ಅವರ ಮಾತುಗಳಲ್ಲಿ ಮುಸ್ಲಿಮರ ಬಗ್ಗೆ ತಿರಸ್ಕಾರ ಮತ್ತು ದ್ವೇಷದ ಭಾವನೆಗಳಿದ್ದವು.

ಈ ತನಿಖಾ ವರದಿಯು ಸಿಎನ್ ಎನ್, ಬಿಬಿಸಿ, ನ್ಯೂಸ್ ಟ್ರ್ಯಾಕ್ ಹಾಗೂ ಐ ವಿಟ್ನೆಸ್ ಚಾನೆಲ್ ಗಳಲ್ಲಿ ಪ್ರಸಾರವಾಯಿತು. ಪೊಲೀಸರ ಈ ನಡೆ ಎಲ್ಲ ಕಡೆ ತೀಕ್ಷ್ಣ ಚರ್ಚೆಗೆ ಗುರಿಯಾಯಿತು. ರಕ್ಷಣೆ ಮಾಡಬೇಕಾದ ಪೊಲೀಸರಲ್ಲೇ ಇರುವ ಈ ಕೋಮುಭಾವನೆ, ದ್ವೇಷ ನನ್ನನ್ನು ಸದಾ ಚಿಂತೆಗೆ ಗುರಿ ಮಾಡಿದೆ.


ಇದು ಮತ್ತೆ ಗುಜರಾತಿನಲ್ಲೂ, ಇನ್ನಷ್ಟು ತೀವ್ರತೆಯಿಂದ, ಇನ್ನಷ್ಟು ದ್ವೇಷಪೂರಿತವಾಗಿ, ಇನ್ನಷ್ಟು ವ್ಯಾಪಕವಾಗಿ ವ್ಯಕ್ತಗೊಂಡಿತು.

ಭಾರತದ ಕಾನೂನು ಅನುಷ್ಠಾನ ಸಂಸ್ಥೆಗಳು (ಪೊಲೀಸ್), ಗುಪ್ತಚರ ಇಲಾಖೆ ಹಾಗೂ ಇತರ ಹಲವಾರು ಆಡಳಿತ ಸಂಸ್ಥೆಗಳಲ್ಲಿ ತೂರಿಕೊಂಡಿರುವ ಕೋಮುವಾದಿ ಮತ್ತು ಬಹುಸಂಖ್ಯಾತ ಜನರ ಪರವಾದ ಮನೋಭಾವಗಳು ಇತ್ತೀಚಿನ ವರ್ಷಗಳಲ್ಲಿ ಹೆಚ್ಚಾಗುತ್ತಿರುವುದನ್ನು ನನ್ನ ಪತ್ರಿಕೋದ್ಯಮದ ಬರವಣಿಗೆಯುದ್ದಕ್ಕೂ ಮತ್ತು ಸಾಮಾಜಿಕ ಕಾರ್ಯಗಳಲ್ಲೂ ನಿರಂತರ ಪ್ರಸ್ತಾಪಿಸುತ್ತಾ ಬಂದಿರುವೆ.

ರಾಷ್ಟ್ರೀಯ ಪೊಲೀಸ್ ಆಯೋಗದ ಎಂಟನೇ ವರದಿಯು (1979–81) ಈ ತರತಮದ ಬಗ್ಗೆ ಪ್ರಸ್ತಾಪ ಮಾಡಿದ್ದರೂ, ಅದನ್ನು ಒಪ್ಪಿಕೊಳ್ಳಲು ನಮ್ಮ ಆಡಳಿತ ವ್ಯವಸ್ಥೆ ಹಿಂಜರಿಯುತ್ತಿದೆ.

* * *

ಬಹಳಷ್ಟು ಜನರಿಗೆ ಗುಜರಾತಿನ ಈ ಪ್ರಕರಣವು ತನಿಖೆಗಳ ಭಾರತದಲ್ಲಿ ಕಳೆದುಹೋದ ಅಧ್ಯಾಯದಂತೆ ಕಂಡುಬರಬಹುದು. ಆದರೆ, ದಾಖಲೆಗಳನ್ನು ಕೆದಕುತ್ತಾ ಹೋದರೆ, ಸರ್ವಕಾಲಕ್ಕೂ ಎಚ್ಚರಿಸುವಂತಹ ಮಾಹಿತಿಗಳು ದೊರೆಯುತ್ತವೆ. ಅಂತಹುದರಲ್ಲಿ ಒಂದು ದಾಖಲೆ 2002ರ ಜೂನ್ 1ರಂದು ಅಂದಿನ ಪ್ರಧಾನಿ ಅಟಲ್ ಬಿಹಾರಿ ವಾಜಪೇಯಿ ಅವರು ಗುಜರಾತ್ ಮುಖ್ಯಮಂತ್ರಿ ನರೇಂದ್ರ ಮೋದಿಗೆ ಬರೆದ ಪತ್ರ. ಗೋಧ್ರಾ ಘಟನೆ ಮತ್ತು ಗೋಧ್ರಾ ನಂತರದ ಘಟನೆ ಸಂಭವಿಸಿ ಮೂರು ತಿಂಗಳ ನಂತರ ಬರೆದ ಈ ಪತ್ರದಲ್ಲಿ ವಾಜಪೇಯಿ ಅವರು ಗುಜರಾತಿನಲ್ಲಿ ಇರುವ ಸೂಕ್ಷ್ಮ ಕೋಮು ವಾತಾವರಣದ ಬಗ್ಗೆ ಆತಂಕ ವ್ಯಕ್ತಪಡಿಸಿದ್ದಾರೆ; ಕೋಮು ಗಲಭೆಗೆ ಬಲಿಯಾದ ಜನರ ಹಿತರಕ್ಷಣೆಯ ಬಗ್ಗೆ ಕಾಳಜಿ ವ್ಯಕ್ತಪಡಿಸಿದ್ದಾರೆ.26,27 ಮುಖ್ಯಮಂತ್ರಿಯಾದವರು ತನ್ನ ಜನರನ್ನು ಜಾತಿ, ಧರ್ಮ, ಪಂಗಡಗಳ ಆಧಾರದ ಮೇಲೆ ತಾರತಮ್ಯ ಮಾಡದೆ, ರಾಜಧರ್ಮ ಪಾಲಿಸಬೇಕು ಎಂದು ವಾಜಪೇಯಿ ಅವರು ಖುದ್ದಾಗಿ ಮೋದಿಗೆ ಹೇಳಿದ ಎರಡು ತಿಂಗಳ ನಂತರ ಈ ಪತ್ರ ಬರೆಯಲಾಗಿದೆ. ಮಾಹಿತಿ ಹಕ್ಕು ಕಾಯಿದೆಯ ಮೂಲಕ ಪಡೆಯಲಾದ ಈ ಪತ್ರದಲ್ಲಿ, ಸಾಧಾರಣವಾಗಿ ದೀರ್ಘ ಪತ್ರಗಳನ್ನು ಬರೆಯದಿರುವ ವಾಜಪೇಯಿ ಅವರು ಗುಜರಾತಿನ ಮುಖ್ಯಮಂತ್ರಿಗೆ ಸುದೀರ್ಘ ಪತ್ರ ಬರೆದಿರುವುದನ್ನು ಕಾಣಬಹುದು. ಹತ್ಯಾಕಾಂಡದ ಸಂತ್ರಸ್ತರಿಗೆ ಪರಿಹಾರ ಒದಗಿಸಲು, ರಕ್ಷಣೆ ಒದಗಿಸಲು, ಭರವಸೆ ನೀಡಲು ಸಾಕಷ್ಟು ಕ್ರಮಗಳನ್ನು ಕೈಗೊಂಡಿಲ್ಲ ಎನ್ನುವ ಕಾಳಜಿ ಈ ಪತ್ರದಲ್ಲಿ ಧ್ವನಿಸುತ್ತದೆ. ಗಲಭೆಯಲ್ಲಿ ಮನೆಗಳಿಗೆ ಆಗಿರುವ ಹಾನಿಯ ಬಗ್ಗೆ ರಾಜ್ಯ ಸರ್ಕಾರ ನೀಡಿದ ಅಂಕಿಅಂಶಗಳು ಸತ್ಯಕ್ಕೆ ದೂರವಾಗಿದೆ ಎಂಬ ಅಂಶವನ್ನು ವಾಜಪೇಯಿ ಅವರು ಮೋದಿ ಅವರ ಗಮನಕ್ಕೆ ತಂದಿದ್ದಾರೆ. 'ಅನೇಕ ಕಾರಣಗಳಿಂದಾಗಿ ಹಾನಿಯನ್ನು ಅಂದಾಜು ಮಾಡಲು ನಿಯೋಜಿಸಿರುವ ತಂಡವು ಹಾನಿಯನ್ನು ಸರಿಯಾಗಿ ಗ್ರಹಿಸದೆ ಹೋಗಿರುವ ಸಾಧ್ಯತೆಗಳಿವೆ. ಎಲ್ಲರಿಗೂ ನ್ಯಾಯದೊರಕುವಂತೆ ಎಚ್ಚರವಹಿಸಲು ಅಲ್ಲಲ್ಲಿ ಈ ಹಾನಿ ಅಂದಾಜು ಪ್ರಕ್ರಿಯೆಯನ್ನು ಮರುಪರೀಕ್ಷೆಗೆ ಒಳಪಡಿಸಬೇಕು. ಈ ಮರುಪರೀಕ್ಷೆಯಲ್ಲಿ ಹಾನಿಯ ಅಂದಾಜು ಎಲ್ಲಾದರೂ ಕಡಿಮೆ ಇರುವುದು ಕಂಡು ಬಂದರೆ, ಮರುಪರೀಕ್ಷೆಗೆ ಆದೇಶಿಸಬೇಕು' ಎಂದಿದ್ದಾರೆ. ಪರಿಹಾರ ಕಾರ್ಯಗಳಿಗೆ ಹೆಚ್ಚಿನ ಆರ್ಥಿಕ ನೆರವು ಬೇಕಾದಲ್ಲಿ ಕೇಂದ್ರದಿಂದ ಅದನ್ನು ಒದಗಿಸುವ ಭರವಸೆಯನ್ನೂ ನೀಡಿದ್ದಾರೆ. 'ಹತ್ಯೆಗೊಳಗಾದ ಜನರ ಗುರುತು ಪತ್ತೆ ಹಚ್ಚುವ ಕೆಲಸ ಮತ್ತು ಹತ್ಯೆಗೊಳಗಾದವರ ಕುಟುಂಬಗಳಿಗೆ ಪರಿಹಾರ ಧನ ನೀಡುವ ಕೆಲಸ ವಿಳಂಬವಾಗಿರುವುದರ ಬಗ್ಗೆ ಅನೇಕ ದೂರುಗಳು ಬಂದಿವೆ. ಕಾಣೆಯಾದವರನ್ನು ಪತ್ತೆ ಮಾಡುವ ಕೆಲಸವೂ ನಿಧಾನಗತಿಯಲ್ಲಿ ಸಾಗಿದೆ ಎಂದು ತಿಳಿದುಬಂದಿದೆ. ಪರಿಹಾರ ಧನ ನೀಡುವ ಕೆಲಸದಲ್ಲಿ ಆಗುತ್ತಿರುವ ವಿಳಂಬವು ತೀವ್ರ ಕಾಳಜಿಗೆ ಕಾರಣವಾಗಿದೆ. ಡಿಎನ್ಎ ಮಾದರಿಗಳ ಮೂಲಕ ಗುರುತು ಪತ್ತೆಹಚ್ಚುವುದು ಬಹಳ ಸಮಯ ಬೇಡುವ ವಿಧಾನವಾಗಿದೆ' ಎಂದಿರುವ ಅವರು, 'ಇದು ಪರಿಹಾರ ಕಾರ್ಯಗಳನ್ನು ಮತ್ತಷ್ಟು ವಿಳಂಬ ಮಾಡುತ್ತದೆ'



ಪುಟ 11 ಕ್ಕೆ

'ಸಂವಿಧಾನದ ಕಾಲಾಳು' ಪುಸ್ತಕದ ಬಗ್ಗೆ ಗಣ್ಯರ ಹೇಳಿಕೆಗಳು

ಒಂದೊಂದು ವಿವರವನ್ನೂ ದಾಖಲಿಸಿರುವ ಈ ರಾಜಕೀಯ ಹೋರಾಟದ ನೆನಪುಗಳ ಪುಸ್ತಕ, ಈಗಿನ ವಿದ್ಯಮಾನಗಳ ವಿಸ್ತೃತ ಹೇಳಿಕೆಯಂತಿದೆ. ವಿಭಿನ್ನ ಹೇಳಿಕೆಗಳು ತೇಲಾಡುತ್ತಿರುವ ಸಂದರ್ಭದಲ್ಲಿ ಸತ್ಯವನ್ನು ಬಿಚ್ಚಿಡುವ ಇಂತಹ ದಾಖಲೆ ಅಗತ್ಯವಿದೆ. ಇಡೀ ವಿದ್ಯಮಾನವನ್ನು ಸ್ಪಷ್ಟತೆ ಹಾಗೂ ಸಮಗ್ರ ದೃಷ್ಟಿಕೋನದಿಂದ ಕಟ್ಟಿಕೊಡುತ್ತಾರೆ. ಅವರ ಬಗ್ಗೆ ಹರಿಯಬಿಟ್ಟಿರುವ ಸುಳ್ಳು ಆರೋಪಗಳ ಹೊರತಾಗಿಯೂ ಅವರು ತಮ್ಮ ಹೋರಾಟವನ್ನು ಮುಂದುವರೆಸಿ ಸತ್ಯಾಂಶಗಳನ್ನು ಜನರ ಮುಂದಿಡುತ್ತಾರೆ ಎಂಬ ಭರವಸೆ ನನಗಿದೆ. ಇಂತಹವರು ಹೆಚ್ಚು ಹೆಚ್ಚು ಜನ ಇರಬೇಕೆಂದು ಮನಸ್ಸು ಬಯಸುತ್ತದೆ.

–ರೊಮಿಲಾ ಥಾಪರ್, ಖ್ಯಾತ ಇತಿಹಾಸಕಾರರು

ತೀಸ್ತಾನ ಬೆನ್ನ ಹಿಂದೆ ಅಪ್ರತಿಮ ಪರಂಪರೆ ಇದೆ. ಅವರ ತಾತ ಮತ್ತು ತಂದೆ ಭಾರತದ ಸಾಂವಿಧಾನಿಕ ಕಾನೂನನ್ನು ಬಲಪಡಿಸಲು ತಮ್ಮದೇ ಆದ ಕೊಡುಗೆ ನೀಡಿದ್ದಾರೆ. ಆ ಪರಂಪರೆಯ ಮುಂದುವರಿಕೆಯಾಗಿ ತೀಸ್ತಾ ತಮ್ಮದೇ ಆದ ಹಾದಿಯನ್ನು ಮೂಡಿಸುತ್ತಾ ಸಾಗಿದ್ದಾರೆ. ಸಂವಿಧಾನವನ್ನು ರಕ್ಷಿಸುವ ಅಸಾಧಾರಣ ಕಾಲಾಳು ಆಗಿದ್ದಾರೆ.

ಫಾಲಿ ಎಸ್. ನಾರಿಮನ್,
ಪ್ರಖ್ಯಾತ ನ್ಯಾಯವಾದಿಗಳು

ಹೋರಾಟ ಸಣ್ಣದಿರಲಿ, ದೊಡ್ಡದಿರಲಿ, ಒಂದೇ ತೆರನಾದ ಬದ್ಧತೆ ಮತ್ತು ಗಟ್ಟಿತನದಿಂದ ಹೋರಾಡುತ್ತಾರೆ ತೀಸ್ತಾ. ಅವರ ಎದುರಾಳಿಗಳು, ಅವರನ್ನು ಹಣಿಯಲು ಹೆಣಗುತ್ತಿರುವವರು ಎಷ್ಟೇ ಎತ್ತರದ ಹುದ್ದೆಯಲ್ಲಿದ್ದರೂ, ಇವರ ಹೋರಾಟದ ಕೆಚ್ಚಿಗೆ ಅವರು ಸಾಟಿಯಾಗುವುದೇ ಇಲ್ಲ.

ಪಿ. ಬಿ. ಸಾವಂತ್,
ಹಿರಿಯ ನ್ಯಾಯವಾದಿಗಳು

ಗುಜರಾತ್ ಹಿಂಸಾಕಾಂಡವು ಒಂದು ತುದಿಯಲ್ಲಿ ಮೋದಿಯನ್ನು ಮತ್ತೊಂದು ತುದಿಯಲ್ಲಿ ತೀಸ್ತಾ ಅವರನ್ನೂ ಸೃಷ್ಟಿಸಿತು. ಭಾರತದ ಸಾಮಾಜಿಕ ಮತ್ತು ರಾಜಕೀಯ ವಲಯದಲ್ಲಿ ತೊಡಗಿಸಿಕೊಳ್ಳುವ ಪ್ರತಿಯೊಬ್ಬರೂ ತೀಸ್ತಾ ಅವರ ಬದುಕಿನ ಈ ಪುಸ್ತಕವನ್ನು ಓದಲೇ ಬೇಕು.

ಕಾಂಚಾ ಇಳಯ್ಯಾ ಶುರಿಗಾಹಿ,
ಮಾನವ ಹಕ್ಕು ಹೋರಾಟಗಾರರು

ಹೋರಾಟಕ್ಕೆ ಒಂದು ಉದಾಹರಣೆ ತೀಸ್ತಾ; ನಮ್ಮ ಪೀಳಿಗೆಗೆ ಮತ್ತು ಮುಂದಿನ ಪೀಳಿಗೆಗೂ ಕೂಡ. ಹಾಗೂ ಅವರ ಈ ಪುಸ್ತಕ ಆ ಹೋರಾಟಕ್ಕೆ ಒಂದು ಅಸ್ತ್ರ.

– ಕನ್ಹಯ್ಯ ಕುಮಾರ್,
ವಿದ್ಯಾರ್ಥಿ ಯುವಜನ ನಾಯಕ


ದಗಾಕೋರರು, ಫ್ಯಾಸಿಸ್ಟರು ರಾಜಕೀಯ ಆಡಳಿತವನ್ನು ತಮ್ಮ ಹಿಡಿತಕ್ಕೆ ತೆಗೆದುಕೊಂಡಿರುವ ಈ ಘೋರ ದಿನಗಳಲ್ಲಿ ತೀಸ್ತಾ ಅವರ ದನಿಯು ಒಂದಿಷ್ಟು ಸಾಂತ್ವನ, ಒಂದಿಷ್ಟು ಭರವಸೆ ನೀಡುತ್ತದೆ.

ಸಯೀದ್ ಮಿರ್ಜಾ, ಚಲನಚಿತ್ರ ನಿರ್ದೇಶಕರು ಧೈರ್ಯ ಮತ್ತು ಆಳವಾದ ಬದ್ಧತೆಗೆ ಮತ್ತೊಂದು ಹೆಸರು ತೀಸ್ತಾ. ಈ ಪುಸ್ತಕವು ಅವರ ಗಟ್ಟಿತನ ಮತ್ತು ಹೋರಾಟದ ಕೆಚ್ಚಿಗೆ ಸಾಕ್ಷಿಯಾಗಿದೆ.

–ಮಲ್ಲಿಕಾ ಸಾರಾಭಾಯ್, ನೃತ್ಯ ಕಲಾವಿದೆ

ಜೀವದ ಉಗಮ ಮತ್ತು ವಿಕಾಸ.... ಪುಟ 16 ರಿಂದ

ರಾಸಾಯನಿಕ. ಜೀವಕೋಶದೊಳಗಿನ ಡಿ.ಎನ್.ಎ. ಮತ್ತು ಆರ್.ಎನ್.ಎ.ಗಳನ್ನು ವಿಭಜಿಸಿದಾಗ ಈ ಅಮಿನೋ ಆಸಿಡ್ ಸಿಗುತ್ತದೆ ಎನ್ನುವುದನ್ನು ಮರೆಯಬಾರದು. ಇಂಥದ್ದೇ ಪ್ರಯೋಗಗಳಲ್ಲಿ ವಿವಿಧ ವಿಜ್ಞಾನಿಗಳು ಅಮಿನೋ ಆಮ್ಲ ಅಲ್ಲದೇ ಪ್ರೋಟೀನ್‌ಗಳನ್ನು ಹೋಲುವ ವಸ್ತುಗಳನ್ನು ಸಹ ಪಡೆದುಕೊಂಡಿದ್ದಾರೆ.




ವಿಜ್ಞಾನಿ ಮಿಲ್ಲರನ ಪ್ರಯೋಗ.

ಅಂದರೆ, ನಿರ್ಜೀವ ವಸ್ತುಗಳಿಂದ ಅತಿಸೂಕ್ಷ್ಮವಾದ ಜೈವಿಕ ಘಟಕಗಳನ್ನು ಪಡೆಯಲು ಸಾಧ್ಯ ಎಂದು ವಿಜ್ಞಾನ ಸಿದ್ಧಮಾಡಿ ತೋರಿಸಿದೆ. ಆದ್ದರಿಂದ ಒಂದು ನಿರ್ದಿಷ್ಟ ಬಗೆಯ ಸನ್ನಿವೇಶದಲ್ಲಿ ನಿರ್ಜೀವ ರಸಾಯನಿಕ ವಸ್ತುಗಳ ವಿಶಿಷ್ಟ ಸಂಯೋಜನೆಯಿಂದ ಜಗತ್ತಿನಲ್ಲಿ ಜೀವ ಸೃಷ್ಟಿಯಾಗಿದೆ ಎಂದು ತಿಳುವಳಿಕೆಗೆ ಬರಲಾಗಿದೆ. ಈಗಾಗಲೇ ಹೇಳಿದಂತೆ ಪ್ರತಿ ಜೀವಕೋಶದೊಳಗೆ ಡಿ.ಎನ್.ಎ. ಮತ್ತು ಆರ್.ಎನ್.ಎ. ಎಂಬ ಅಂಗಗಳಿವೆ. ಅವು ಬಿದುರು ಮತ್ತು ಹಗ್ಗದಿಂದ ಮಾಡಿದ ಸುರುಳಿ ಏಣಿಯಂತೆ ವಕ್ರವಾಗಿ ಸುತ್ತಿಹೆಣೆದುಕೊಂಡಿವೆ. ಇವುಗಳಲ್ಲಿ ವಂಶವಾಹಿಗಳು ಇವೆ.

ಡಿ.ಎನ್.ಎ. ಎಂದರೆ ಡೈ–ಆಕ್ಸಿ–ರೈಬೋನ್ಯೂಕ್ಲಿಕ್ ಆಸಿಡ್, ಆರ್.ಎನ್.ಎ. ಎಂದರೆ ರೈಬೋನ್ಯೂಕ್ಲಿಕ್ ಆಸಿಡ್ ಎಂದು. ಮತ್ತೆ ಇವುಗಳನ್ನು ವಿಭಜಿಸಿದರೆ ನ್ಯೂಕ್ಲಿಯೋಟೈಡ್‌ಗಳು ಸಿಗುತ್ತವೆ. ಈ ನ್ಯೂಕ್ಲಿಯೋಟೈಡ್‌ಗಳಲ್ಲಿ ಶರ್ಕರಾ, ಕ್ಷಾರ, ಫಾಸ್ಫೇಟ್ ಎಂಬ ರಾಸಾಯನಿಕ ವಸ್ತುಗಳು ದೊರೆಯುತ್ತವೆ. ಜೊತೆಗೆ ಪ್ರೋಟೀನು ಹಾಗೂ ಅಮಿನೋ ಆಸಿಡ್ ದೊರೆಯುತ್ತವೆ.

ಜೀವಕೋಶಗಳೊಳಗೆ ಇರುವ ಒಟ್ಟಾರೆ ಜೈವಿಕ ವಸ್ತುಗಳನ್ನು ಮೂಲ ರಾಸಾಯನಿಕ ವಸ್ತುಗಳಾಗಿ ವಿಭಜಿಸಿದರೆ ಅದರೊಳಗೆ ಕಾರ್ಬನ್, ಆಮ್ಲಜನಕ, ಸಾರಜನಕ, ರಂಜಕ, ಗಂಧಕ, ಕ್ಯಾಲ್ಸಿಯಂ, ಮೆಗ್ನಿಷಿಯಂ ಮತ್ತು ಹಲವಾರು ಲೋಹಗಳು ಮುಂತಾದವು ದೊರೆಯುತ್ತವೆ.

ವಿಜ್ಞಾನಿಗಳು 'ಜೀವ'ವನ್ನು ಸೃಷ್ಟಿಸಿದ್ದಾರೆ ಎಂದಾಗ, ಅವರು ಕರಡಿ, ಕೋತಿಯಂತಹ ಪ್ರಾಣಿಗಳನ್ನಾಗಲಿ ಅಥವಾ ಇಲಿ, ಇರುವೆಯಂತಹ




ಆರ್.ಎನ್.ಎ. ಮತ್ತು ಡಿ.ಎನ್.ಎ.ಗಳ ಚಿತ್ರ.

ಪ್ರಾಣಿಗಳನ್ನಾಗಲಿ ಸೃಷ್ಟಿಸಿದ್ದಾರೆ ಎಂದು ಭಾವಿಸಬಾರದು. ಒಂದು ಅಮಿಬಾದಂತಹ ಏಕಕೋಶ ಜೀವಿ ಬಹುಕೋಶ ಜೀವಿಯಾಗಲು ಎಷ್ಟೋ ಕೋಟಿ ವರ್ಷಗಳಾಗಿರಬಹುದು. ಆದ್ದರಿಂದ ನಾವು ಈ ಪ್ರಯೋಗದ ಮೂಲಕ ಜೀವ ಸೃಷ್ಟಿಯ ಅತಿ ಆರಂಭಿಕ ಘಟ್ಟವನ್ನು ಮಾತ್ರ ಪ್ರವೇಶಿದ್ದೇವೆ ಎಂದು ಭಾವಿಸಬಹುದೇನೋ ಅಷ್ಟೆ.

ಜೀವಕೋಶಗಳ ಪರಸ್ಪರ ಸಹಕಾರದಿಂದ ಬಹುಕೋಶ ಜೀವಿಗಳು

'ಸ್ಪಂಜು' ಎಂಬುದು ನೀರಿನಲ್ಲಿ ವಾಸಿಸುವ ಲಕ್ಷಾಂತರ ಸ್ಪಂಜು ಪ್ರಾಣಿಗಳ ಸತ್ತ ದೇಹದ ಮುದ್ದೆ. ಈ ಸ್ಪಂಜು ಜೀವಿಗಳಲ್ಲಿ ಒಂದು ವಿಶೇಷವಿದೆ. ಚಿತ್ರದಲ್ಲಿ ಕಾಣಿಸುತ್ತಿರುವುವಂತೆ ಸ್ಪಂಜು ಒಂದು ನಿರ್ದಿಷ್ಟ ಆಕಾರಕ್ಕೆ ಬೆಳೆಯುತ್ತದೆ ಎಂದು ಕೊಳ್ಳೋಣ. ಆದರೆ ಸ್ಪಂಜು ಯಾವುದೇ ಆಕಾರದಲ್ಲಿ ಬೆಳೆದಿದ್ದರೂ ಅದರ ಒಂದೊಂದು ಕೋಶವು ಸ್ವತಂತ್ರ ಜೀವಿಯಂತೆ ಇರುತ್ತವೆ. ಜೀವಿಯಲ್ಲಿನ ಪ್ರತಿಯೊಂದು ಕೋಶವು ಸಹಕಾರದಿಂದ ಜೊತೆಗೆ ಇದ್ದು ಜೀವಿಸುತ್ತವೆ ಅಷ್ಟೆ. ಈ ಜೀವಕೋಶಗಳು ಬೇರೆಯಾದರೂ ಬದುಕಿ ಉಳಿಯುತ್ತವೆ.



ಸ್ಪಂಜು ಜೀವಿಯ ಚಿತ್ರ

ಅಮೀಬಾದಂತಹ ಏಕ ಕೋಶ ಜೀವಿಗಳಲ್ಲಿ ವಿವಿಧ ಕೋಶಗಳು ಜೊತೆಗೂಡಿ ಸಹಕಾರದಿಂದ ವಿವಿಧ ಅಂಗಾಂಗಳು ರೂಪುಗೊಂಡವು. ಮುಂದೆ ಮೀನು ಮುಂತಾದ ಬಹುಕೋಶ ಜೀವಿಗಳು ಇದೇ ರೀತಿಯಾಗಿ ಕೋಶಗಳ ಸಹಕಾರದಿಂದ ಬೆಳವಣಿಗೆ ಹೊಂದಿದವು. ಆದರೆ ಮೀನು ಕಪ್ಪೆ ಮುಂತಾದ ಪ್ರಾಣಿಗಳ ಜೀವಕೋಶಗಳು ಪ್ರತ್ಯೇಕಗೊಂಡು ಬದುಕುವ ಸಾಮರ್ಥ್ಯವನ್ನು ಪಡೆದಿಲ್ಲ. ಆದರೆ ಆರಂಭಿಕ ಘಟ್ಟಗಳಲ್ಲಿ ಬಹುಕೋಶ ಜೀವಿಗಳು ಹೇಗೆ ಹುಟ್ಟಿಕೊಂಡವು ಎಂಬುದಕ್ಕೆ ಇದೇ 'ಸ್ಪಂಜು' ಒಂದು ನಿದರ್ಶನವಾಗಿದೆ.

'ಜೀವ' ಹುಟ್ಟಿದಾಗ ಅದು ಅತಿ ಸೂಕ್ಷ್ಮ ಜೀವಿಯಾಗಿತ್ತು. ಅಮೀಬಾ ಅಂತಹ ಒಂದು ಸೂಕ್ಷ ಜೀವಿ. ಅದು ಬರಿಗಣ್ಣಿಗೆ ಕಾಣುವುದಿಲ್ಲ. ಅದಕ್ಕೆ ನಿರ್ದಿಷ್ಟ ಆಕಾರವೇ ಇರಲಿಲ್ಲ. ಇಲ್ಲ. ಒಂದು ಕಡಲೇಕಾಳಿನ ಗಾತ್ರದ ಜಾಗದಲ್ಲಿ ಕೋಟಿಗಟ್ಟಲೇ ಅಮಿಬಾಗಳನ್ನು ಇರಿಸಲು ಸಾಧ್ಯ. ಅಮೀಬಾ ನಾವು ಮಾಡುವ ಚಪಾತಿಯಂತೆ. ಚಪಾತಿ ಹಿಟ್ಟನ್ನು ಒತ್ತಿದಂತೆಲ್ಲಾ ಆಕಾರ ಪಡೆದುಕೊಳ್ಳುತ್ತದೆ. ಗುಂಡಗೆ, ವಕ್ರವಕ್ರ, ಸ್ವಲ್ಪ ತ್ರಿಕೋಣಾಕಾರ, ಸ್ವಲ್ಪ ಚೌಕಾಕಾರ ಹೀಗೆ ಯಾವುದೆಂದರೆ ಅದು. ಅಮಿಬಾಗೆ ಚಲಿಸಲು ಮುಂದೆ ಚಾಚಿದ ಭಾಗಗಳೇ ಕಾಲುಗಳು.

ಸಿಹಿ ನೀರಿನಲ್ಲಿ ಈಗಲೂ ಜೀವಿಸಿರುವ ಅಮೀಬಾ ಎನ್ನುವ ಈ ಏಕಕೋಶ ಜೀವಿಯು ಆಹಾರ ತಿನ್ನುವುದು ಸಹ ವಿಶಿಷ್ಟವೇ. ಮನೆಗಳಲ್ಲಿ ಹಬ್ಬದ ದಿನಗಳಲ್ಲಿ ಒಬ್ಬಟ್ಟು ಮಾಡುವುದು ಸಾಮಾನ್ಯವಾಗಿ ಎಲ್ಲರಿಗೂ ಗೊತ್ತು. ಮಧ್ಯೆ ಹೂರಣ ಇಟ್ಟು ಕಲಸಿದ ಮೈದಾ ಹಿಟ್ಟಿನುಂಡೆಯನ್ನು ಆಕಡೆಯಿಂದ ಈ ಕಡೆಯಿಂದ ಎಳೆದು ಎಳೆದು ತಂದು ಹೋಳಿಗೆ ಉಂಡೆಕಟ್ಟುವುದಿಲ್ಲವೇ ಹಾಗೇ.

ಬಾಯಿ, ಹಲ್ಲು, ನಾಲಿಗೆ, ಕಣ್ಣು, ಮುಖ ಏನೊಂದೂ ಇಲ್ಲದ ಒಂದು ಮೈದಾಹಿಟ್ಟಿನ ಹಾಳೆ ತೆಂಗಿನಕಾಯಿ ಹೋಳಿಗೆಯ ಹೂರಣವನ್ನು ನುಂಗಿತಲ್ಲ !!! ಹಾಗೇ ಅಮಿಬಾ ತನಗೆ ಸಿಕ್ಕ ಚೂರು ಪಾರು ಆಹಾರವನ್ನು ಅದರ ಮೇಲೆ ಬಾಣಲೆಯಂತೆ ಬಿದ್ದು ತಿನ್ನುತ್ತದೆ. ಇದೇ ರೀತಿಯಾಗಿ ಬೇಡದ್ದನ್ನು ಹೊರಹಾಕುತ್ತದೆ.


ಜೀವ ಸೃಷ್ಟಿಯಾದಾಗಿನ ವಾತಾವರಣ

ಜೀವದ ಸೃಷ್ಟಿಯ ಕಥೆ ಪೂರ್ಣ ಅರ್ಥವಾಗಬೇಕಾದರೆ ಈ ಭೂಮಿಯ ಮೇಲೆ– ಭೂಮಿ ಸೃಷ್ಟಿಯಾದಾಗ ಎಂತಹ ವಾತಾವರಣ ಇತ್ತು ಎಂದು ತಿಳಿದುಕೊಳ್ಳುವುದು ಅವಶ್ಯಕ. ಭೂಮಿ ರೂಪುಗೊಂಡಾಗ ಮೊದಲು ಅದು ತಣ್ಣನೆಯ ಧೂಳಿನ ಚೆಂಡಿನಂತೆ ಇತ್ತು ಎಂದು ವಿಜ್ಞಾನಿಗಳು ಕಂಡುಕೊಂಡಿದ್ದಾರೆ. ಚೆಂಡಿನ ಒಳಗಿನ ಒತ್ತಡದ ಫಲವಾಗಿ ಭೂಮಿ ನಿಧಾನವಾಗಿ ಬಿಸಿಯಾಗಲಾರಂಭಿಸಿತು. ಯುರೇನಿಯಂ ಎಂಬ ವಸ್ತುವು ತನ್ನ ವಿಕಿರಣಗಳನ್ನು ಹೊಮ್ಮಿಸುತ್ತಿತ್ತು. ಇದರಿಂದಾಗಿ ಸಹ ಭೂಮಿಯು ಇನ್ನಷ್ಟು ಬಿಸಿಯಾಗಲಾರಂಭಿಸಿತು. ಭೂಮಿಯ ಬಿಸಿ ಏರುತ್ತಾ ಏರುತ್ತಾ ಹೋಯಿತು. ಇದೆಲ್ಲದರ ಪರಿಣಾಮವಾಗಿ ಭೂಮಿಯ ಒಳಗಿದ್ದ ನೀರು ಮತ್ತು ಗಾಳಿಯು ಸಿಡಿದು ಹೊರಬಂದವು.

ಆ ನಂತರ ಭೂಮಿಯ ಮೇಲ್ಮೈಯ ಶೀತದಿಂದಾಗಿ ಈ ನೀರಿನ ಹನಿಗಳು ಮತ್ತು ಗಾಳಿ ಭೂಮಿಯ ಮೇಲ್ಭಾಗದಲ್ಲಿ ಉಳಿದವು. ನೀರಿನ ಬಿಸಿ ಆವಿ ತಣ್ಣಗಾಗಿ ಭೂಮಿಯ ತಗ್ಗು ಪ್ರದೇಶದಲ್ಲಿ ನಿಂತಿತು. ಈ ತಗ್ಗು ಪ್ರದೇಶದಲ್ಲಿ ನಿಂತ ನೀರೇ ಸಮುದ್ರ ಎನಿಸಿಕೊಂಡಿತು.

ಭೂಮಿಯು ಹುಟ್ಟಿದ ಸುಮಾರು ನೂರು ಕೋಟಿ ವರ್ಷಗಳ ಕಾಲ ಭೂಮಿಯ ಮೇಲೆ ಜೀವದ ಸುಳಿವು ಇರಲಿಲ್ಲ. ಭೂಮಿಯ ಮೇಲಿನ ಆಗಿನ ವಾತಾವರಣ ಈಗಿನಂತೆ ಇರಲಿಲ್ಲ. ಭೀಕರ ಗುಡುಗು, ಸಿಡಿಲುಗಳ ಆರ್ಭಟ ಭೂಮಿಯನ್ನು ವಾತಾವರಣದಲ್ಲಿ ಎಲ್ಲೆಲ್ಲೂ ತುಂಬಿತ್ತು. ಇಂತಹ ಸನ್ನಿವೇಶದಲ್ಲಿ ಭೂಮಿ ಹುಟ್ಟಿದ ಸುಮಾರು ನೂರುಕೋಟಿ ವರ್ಷಗಳ ನಂತರ ಒಂದು ಮಹಾ ಆಕಸ್ಮಿಕವೊಂದು ಭೂಮಿಯ ಮೇಲೆ ಘಟಿಸಿತು.

ಗುಡುಗು, ಸಿಡಿಲು, ಮಿಂಚು, ಹರಿದಾಡುವ ಹೊತ್ತಿನಲ್ಲಿ, ಸೂರ್ಯನ ಬೆಳಕು, ಅತಿನೇರಳೇ ಕಿರಣಗಳು, ವಿಕಿರಣಗಳು ಹೊರಸೂಸುವ ಹೊತ್ತಲ್ಲಿ ಭೂಮಿಯ ಮೇಲಿನ ಇಂಗಾಲ, ಸಾರಜನಕ, ಆಮ್ಲಜನಕ, ಜಲಜನಕ ಇತ್ಯಾದಿ ರಾಸಾಯನಿಕ



ಸಮುದ್ರದಲ್ಲಿ ಜೀವಿಯ ಉಗಮದ ಕಲ್ಪನೆ

ವಸ್ತುಗಳು ಎಲ್ಲವೂ ಒಟ್ಟು ಸೇರಿ ವಿಶಿಷ್ಟ ಪರಿಸ್ಥಿತಿಯಲ್ಲಿ ವಿಶೇಷವೊಂದು ಘಟಿಸಿತು. ಅದುವೇ ಜೀವದ ಉಗಮ. 460 ಕೋಟಿ ವರ್ಷಗಳ ಹಿಂದೆ ಭೂಮಿ ಸೃಷ್ಟಿಯಾದರೆ, ಭೂಮಿಯ ಮೇಲೆ ಮೊದಲ ಶಿಲೆಗಳು ಸಮಾರು 430 ಕೋಟಿಗಳ ಹಿಂದೆ ಸೃಷ್ಟಿಯಾಗಿವೆ ಎನ್ನುವುದಕ್ಕೆ ಸಾಕ್ಷ್ಯಗಳು ಇವೆ. ವಿಜ್ಞಾನಿಗಳು ಆರ್ಕೇಯೆನ್ ಕಲ್ಪ ಎಂದು ಕರೆಯುವ ಸುಮಾರು 400 ಕೋಟಿ ವರ್ಷಗಳಿಂದ ಸು. 250 ಕೋಟಿ ವರ್ಷಗಳ ನಡುವಿನ ಅವಧಿಯಲ್ಲಿ ಭೂಮಿಯ ಮೇಲಿನ ಮೊತ್ತ ಮೊದಲ ಜೀವಿಗಳು ಸೃಷ್ಟಿಯಾಗಿವೆ ಎಂದು ಕೆಲವು ಅಧ್ಯಯನಗಳ ಮೂಲಕ ಅಂದಾಜು ಮಾಡಲಾಗಿದೆ. ಇವು ಮೊದಲ ಶೈಲವ ಅಥವಾ ಆಲ್ಗೈ(ಪಾಚಿ) ಮತ್ತು ಬ್ಯಾಕ್ಟೀರಿಯಾ ರೂಪದಲ್ಲಿದ್ದವು. ಇದು ವಿಜ್ಞಾನಿಗಳ ವಿವರಣೆ.

ತನ್ನಂತಹದ್ದೇ ಮತ್ತೊಂದು ಜೀವಿಗೆ ಜನ್ಮ ನೀಡುವಂತೆ ವಿಭಜನೆಗೊಳ್ಳುವುದು ಈ ಜೀವಿಗಳ ವಿಶಿಷ್ಟ ಲಕ್ಷಣ. ತನ್ನ ದೇಹದ ಜೈವಿಕ ರಾಸಾಯನಿಕ ಲಕ್ಷಣಗಳನ್ನು, ಕ್ರಿಯೆಗಳನ್ನು ಸಾಂಕೇತಿಕ ರೂಪದಲ್ಲಿ ದೇಹವು ಕಾಪಾಡಿಕೊಳ್ಳುತ್ತದೆ. ಅದಕ್ಕೆ ಜೀನ್ಸ್ ಅಥವಾ ವಂಶವಾಹಿಗಳು ಸಹಾಯ ಮಾಡುತ್ತವೆ. ಹೀಗೆ ಕೋಟ್ಯಂತರ ವರ್ಷಗಳಿಂದ ಜೀವದ ನಿರಂತರ ಹರಿವು ಜೀವದ ನಿರಂತರ ವಿಕಾಸ ಆಗುತ್ತಲೇ ಇದೆ.

ಜೀವ ವಿಕಾಸದ ಹಂತಗಳು

ಕೋಟ್ಯಾಂತರ ವರ್ಷಗಳ ಹಿಂದೆ ನೀರಿನಲ್ಲಿ ಮೊದಲಿಗೆ ಸರಳವಾದ ಜೈವಿಕ ರಚನೆ ಹೊಂದಿರುವ ಅಮೀಬಾದಂತಹ ಏಕಕೋಶ ಜೀವಿಗಳಿದ್ದವು.

ಈ ಸೂಕ್ಷ್ಮಜೀವಿಗಳ ಆ ನಂತರ ಕೋಟ್ಯಾಂತರ ವರ್ಷಗಳಲ್ಲಿ ಜೀವಿಗಳಲ್ಲಿ ಆದಿಮ ಜೀವಿಗಳು,

ಸ್ಪಂಜುಗಳು, ಸಂಧಿಪದಿಗಳು, ಬಸವನ ಹುಳುವಿನಂತಹ ಮೃದುವಾದ ದೇಹವನ್ನು ಹೊಂದಿರುವ ಮೃದ್ವಂಗಿಗಳು, ಆಮೇಲೆ ದೇಹದ ಹೊರಮೈಗೆ ಶಂಖ ಕಪ್ಪೆ ಚಿಪ್ಪು ಇತ್ಯಾದಿ ಕಠಿಣ ರಕ್ಷಣಾ ಕೋಟೆ ಹೊಂದಿರುವ ಜೀವಿಗಳು, ಮೈಮೇಲೆ ಮುಳ್ಳುಗಳಂತಹ ರಕ್ಷಣಾ ಕವಚ ಇರುವ ಕಂಟಕ ಜೀವಿಗಳು, ಸಂಧಿಪದಿಗಳು, ಬೆನ್ನು ಮೂಳೆ ಇರದ ಅಕಶೇರುಕಗಳು, ಆಮೇಲೆ ಬೆನ್ನಮೂಳೆ ಇರುವ ಕಶೇರುಕಗಳು, ಮೀನುಗಳು ಮುಂತಾದವು,

ನೀರಿನಲ್ಲಿ ಮತ್ತು ನೆಲದ ಮೇಲೆ ಎರಡೂ ಕಡೆ ವಾಸಿಸಬಲ್ಲ ಕಪ್ಪೆಯಂತಹ ಉಭಯವಾಸಿಗಳು, ಆನಂತರ ಹರಿದಾಡುವ ಪ್ರಾಣಿಗಳಾದ ಮೊಸಳೆಯಂತಹ ಹೊಟ್ಟೆ ಮೇಲೆ ಬಾರ ಹಾಕಿ ತೆವಳುವ 'ಸರಿಸೃಪ'ಗಳು ಅಥವಾ ಉರಗಗಳು, ಆಮೇಲೆ ಹಕ್ಕಿಗಳು,

ಆ ನಂತರ ಅದೇ ರೀತಿ ಮರಿಗಳನ್ನು ಮೊಲೆಯಿಂದ ಹಾಲು ಕುಡಿಸುವ ಮೂಲಕ ಸಲಹುವ ಸಸ್ತನಿಗಳಾಗಿ ವಿಕಾಸ ಹೊಂದಿವೆ ಎಂಬುದು ಈಗಾಗಲೇ ಸಾಕಷ್ಟು


ಸಂವಿಧಾನದ ಕಾಲಾಳು....

ಪುಟ 9 ರಿಂದ

ಎಂಬ ಆತಂಕ ವ್ಯಕ್ತಪಡಿಸಿದ್ದಾರೆ. ಜನರ ಮುಖದ ಮೇಲೆ ತಾಂಡವವಾಡುತ್ತಿದ್ದ ಭೀತಿ, ಅಸುರಕ್ಷತೆಯ ಭಾವದ ಬಗ್ಗೆ ಹೀಗೆ ಬರೆದಿದ್ದಾರೆ– 'ಬರ್ಬರ ಹಲ್ಲೆಗಳು ನಡೆದ ಪ್ರದೇಶಗಳಿಗೆ ಹಿಂದಿರುಗಿ, ಅಲ್ಲೇ ನೆಲೆಸಲು ಜನರು ನಿರಾಕರಿಸುವುದು ಸಹಜ. ಆದರೆ, ಅಂತಹ ಪ್ರದೇಶಗಳಲ್ಲಿ ಎಲ್ಲ ಅಗತ್ಯ ಕ್ರಮಗಳನ್ನು ಕೈಗೊಂಡು ಜನರು ತಮ್ಮ ಊರಿಗೆ ಭಯ ಭೀತಿ ಇಲ್ಲದೆ ಹಿಂದಿರುಗುವಂತೆ ಮಾಡುವ, ಸುರಕ್ಷತೆಯ ಭಾವನೆಯನ್ನು ಮೂಡಿಸುವ ಕೆಲ ಮಾಡಬೇಕು. ನರೋಡ ಪಟಿಯಾ, ಲುನಾವಾಡ ಮೊದಲಾದ ತೀವ್ರ ಗಲಭೆ ಪೀಡಿತ ಪ್ರದೇಶಗಳ ಜನರನ್ನು ಸ್ಥಳಾಂತರ ಮಾಡದೆ ಬೇರೆ ದಾರಿಯೇ ಇಲ್ಲ ಎನ್ನುವುದಾದರೆ, ಈ ಸ್ಥಳಾಂತರದ ಪ್ರಕ್ರಿಯೆಯನ್ನು ಎಚ್ಚರಿಕೆಯಿಂದ ನಿರ್ವಹಿಸಬೇಕು. ಇಲ್ಲವಾದರೆ ಸಮಾಜಘಾತುಕ ಶಕ್ತಿಗಳು ಈ ಸಂದರ್ಭದ ಲಾಭ ಪಡೆಯುವ ಸಾಧ್ಯತೆಗಳಿವೆ. ಆ ಶಕ್ತಿಗಳು ಈಗಾಗಲೇ ಸಂಕೀರ್ಣವಾಗಿರುವ ಪರಿಸ್ಥಿತಿಯನ್ನು ಮತ್ತಷ್ಟು ವಿಷಮಯ ಮಾಡುವ ಅಪಾಯವಿದೆ' ಎಂದಿದ್ದಾರೆ. ಗುಜರಾತಿನಲ್ಲಿ ನಡೆದಿದ್ದ ಹತ್ಯಾಕಾಂಡದಿಂದ ವಿಚಲಿತರಾಗಿದ್ದ ವಾಜಪೇಯಿ ಅವರು, ಬದುಕುಳಿದಿರುವ ಜನರ ಬದುಕುಗಳನ್ನು ಕಟ್ಟುವ ಬಗ್ಗೆ ನೈಜ ಕಾಳಜಿಯಿಂದ ಸ್ವತಃ ತಾವೇ ಬರೆದ ಪತ್ರ ಇದಾಗಿದೆ. ಹಾಗೂ ರಾಜ್ಯ ಸರ್ಕಾರವೊಂದು ತನ್ನ ಜವಾಬ್ದಾರಿ ನಿರ್ವಹಿಸದೆ ಇದ್ದಾಗ ಅನಿವಾರ್ಯವಾಗಿ ಮಧ್ಯ ಪ್ರವೇಶಿಸಿ, ಪರಿಹಾರ ಕೆಲಸಗಳನ್ನು ಹೇಗೆ ಮಾಡಬೇಕೆಂದು ಸೂಚನೆಗಳನ್ನು ನೀಡಿದ್ದಾರೆ. ಪ್ರಧಾನಿಯೊಬ್ಬರು ರಾಜ್ಯ ಸರ್ಕಾರಕ್ಕೆ ತನ್ನ ಕೆಲಸವನ್ನು ಹೇಗೆ ನಿರ್ವಹಿಸಬೇಕು ಎಂಬುದರ ಬಗ್ಗೆ ಸೂಚನೆ ನೀಡಿರುವುದು ಇದೇ ಮೊದಲ ಸಲವಾಗಿದೆ. ಆದರೆ, ಈ ಪತ್ರ, ಇದು ಸ್ಫುರಿಸುವ ಭಾವ ಹಾಗೂ ಇದರ ಮಹತ್ವವನ್ನು ಭಾರತ ಇಂದು ಮರೆತಿದೆ.

ಝಾಕಿಯಾ ಜಾಫ್ರಿ ಅವರ ಪ್ರಕರಣಕ್ಕೆ ಸಂಬಂಧಿಸಿದಂತೆ ಹೀಗೇ ದಾಖಲೆಗಳನ್ನು ಹುಡುಕುತ್ತಾ ಹೋದಂತೆ ಮತ್ತೊಂದು ಮಾಹಿತಿ ಎದ್ದು ಬಂದಿತು. ಗಲಭೆಗಳ ನಿಯಂತ್ರಣಕ್ಕೆಂದು ನಿಯೋಜಿಸಲಾಗಿದ್ದ ಸೇನೆಯ ಮುಖ್ಯಸ್ಥರು ಸಲ್ಲಿಸಿದ್ದ 'ಆಪರೇಷನ್ ಅಮನ್' ಎಂಬ ವರದಿಯಲ್ಲಿ ಮೋದಿ ಸರ್ಕಾರವನ್ನು ತೀವ್ರವಾಗಿ ತರಾಟೆಗೆ ತೆಗೆದುಕೊಳ್ಳಲಾಗಿದೆ. ಇದರ ಬೆನ್ನು ಹತ್ತಿ ಮತ್ತೊಂದು ಪಯಣಕ್ಕೆ ಹೊರಟೆವು. ಆದರೆ ಅದೀಗ ಮಾಹಿತಿ ಆಯೋಗದ ಆಯುಕ್ತರ ಕಚೇರಿಯಲ್ಲಿ ತಡೆಯಾಗಿದೆ. ಏನಾದರಾಗಲಿ ನಾನು ಈ ನನ್ನ ಹೋರಾಟವನ್ನು ಕೈಬಿಡುವುದಿಲ್ಲ ಎಂದು ಸ್ಪಷ್ಟಪಡಿಸಿದೆ. ಈ ನನ್ನ ನಿಲುವು ನನಗೆ ಅಪಾರ ಕಷ್ಟಗಳನ್ನು, ನನ್ನ ಕುಟುಂಬಕ್ಕೆ ಚಿಂತೆಯನ್ನೂ ತಂದೊಡ್ಡಿದೆ.

ಝಾಕಿಯಾ ಜಾಫ್ರಿ ಪ್ರಕರಣವು ಸಾಕ್ಷಿ–ಪುರಾವೆಗಳನ್ನು ಹುಡುಕಿ, ಸಂಗ್ರಹಿಸುವ ವಿಚಾರದಲ್ಲಿ ಒಂದು ಮೈಲಿಗಲ್ಲಾಗಿದೆ. ಗುಪ್ತಚರ ಇಲಾಖೆಯ ದಾಖಲೆಗಳು, ಪೊಲೀಸ್ ಕಂಟ್ರೋಲ್ ರೂಮಿನ ದಾಖಲೆಗಳು, ಅಗ್ನಿ ಶಾಮಕ ದಳದ ದಾಖಲೆಗಳೂ ಸೇರಿದಂತೆ 23,000 ಪುಟಗಳಷ್ಟಿರುವ ಪುರಾವೆಗಳು ಆಡಳಿತದ ಲೋಪಗಳನ್ನು ಮಾತ್ರವಲ್ಲದೆ, ಆಡಳಿತ ವ್ಯವಸ್ಥೆಯು ಹತ್ಯಾಕಾಂಡದಲ್ಲಿ ಶಾಮೀಲಾಗಿರುವುದನ್ನೂ ದೃಢಪಡಿಸುತ್ತವೆ.



ಭೂಮಿಯ ಮೇಲೆ ಜೀವಿಯ ಉಗಮ ಮತ್ತು ವಿಕಾಸದ ಕಾಲ್ಪನಿಕ ಚಿತ್ರ

➘ ಜನಪ್ರಿಯವಾಗಿರುವ ಜೀವವಿಕಾಸದ ಸಿದ್ಧಾಂತ.

ಬ್ರೂಣಾವಸ್ಥೆಯಲ್ಲಿ ಮನುಷ್ಯ ಜೀವಿಯ ಬ್ರೂಣ ಹಾಗೂ ನಾನಾ ಪಾಣಿಗಳ ಭ್ರೂಣಗಳ ನಡುವೆ ಸಾಕಷ್ಟು ಹೋಲಿಕೆ ಕಾಣಬಹುದು. ಚಿತ್ರದಲ್ಲಿ ಕಾಣುವಂತೆ ಮೀನು, ಓತಿಕ್ಯಾತ, ಆಮೆ, ಕೋಳಿ, ಮೊಲ, ಮನುಷ್ಯ ಮುಂತಾದ ಹಲವು ಪ್ರಾಣಿಗಳ ಭ್ರೂಣಗಳಲ್ಲಿ ಈಗಲೂ ಸಾಕಷ್ಟು ಹೋಲಿಕೆ ಕಂಡು ಬರುತ್ತದೆ. ಇದರ ಅರ್ಥ ಸ್ಪಷ್ಟ. ಈಗಿನ ಮನುಷ್ಯ ಜೀವಿಯು ಸೂಕ್ಷ್ಮ ಜೀವಿಯಿಂದ ಈ ಎಲ್ಲ ಪ್ರಾಣಿಗಳ ಪೂರ್ವಜರ ಹಂತವನ್ನು ದಾಟಿ ವಿಕಾಸವಾಗುತ್ತಾ ಬಂದಿದ್ದಾನೆ. ಅದರ ಗುರುತುಗಳು ಬ್ರೂಣದ ಹಂತದಲ್ಲಿ ಈಗಲೂ ಪುನರಾವರ್ತನೆ ಆಗುತ್ತಿವೆ.


ಆಕರ ಗ್ರಂಥಗಳು

1. ಇದು ಮುಗಿಯದ ಕತೆ– ಲೇ. ದೇವಿಪ್ರಸಾದ್ ಚಟ್ಟೋಪಾಧ್ಯಾಯ
2. ವಿಶ್ವದಲ್ಲಿ ಜೀವಾಂಕುರ ಎಂದು? ಎಂತು? – ಲೇ. ಎಂ.ಎಸ್. ಚಡ್ಡಾ ಮತ್ತು ಬಾಳ ಫೋಂಡ್ಕೆ
3. ಜೀವಿ ವೈವಿಧ್ಯ ಮತ್ತು ವಿಕಾಸ – ಡಾ. ಎನ್. ಎಸ್. ಲೀಲಾ

   ಮೂರು ಕೃತಿಗಳ ಪ್ರಕಾಶಕರು – 'ನವ ಕರ್ನಾಟಕ ಪ್ರಕಾಶನ'
4. ಭಾರತೀಯ ವಿಜ್ಞಾನದ ಹಾದಿ – ಲೇ. ಡಾ. ಜಿ ರಾಮಕೃಷ್ಣ.

   ಹಂಪಿ ಕನ್ನಡ ವಿಶ್ವ ವಿದ್ಯಾಲಯದ ಪ್ರಕಟಣೆ.

ಭ್ರೂಣಾವಸ್ಥೆಯಲ್ಲಿ ವಿವಿಧ ಪ್ರಾಣಿಗಳ ಭ್ರೂಣಗಳ ಸ್ವರೂಪದಲ್ಲಿ ಹೋಲಿಕೆ ಇರುವುದು.



ರಾಜ್ಯದ ಚಿಂತಕರ ಪ್ರತಿಕ್ರಿಯೆಗಳು

ಬೆಂಕಿಯಾರಿಸುವ ಹನಿಗಳು

ನಮಗೆ ಗೊತ್ತು ಎಂದುಕೊಂಡಿರುವ ತೀಸ್ತಾ ಸೆತಲ್ವಾಡ್ ಮತ್ತು ಗುಜರಾತ್ ಮಾದರಿ– ಈ ಎರಡರ ನೋಟಗಳ ಅಂದಾಜನ್ನು ಮೀರಿಸುತ್ತದೆ ಈ ಬರಹ. ಆಳದಾಳದ ಜಟಿಲ ಸಂಘರ್ಷದ ಎದುರು ನಿಲ್ಲಿಸುತ್ತದೆ. ಒಂದು ತಟಕು ಸಂವೇದನೆಯಿರುವ ಜೀವಗಳಿಗೆ –'ಹೇಳು, ನೀನೇನು ಮಾಡಬಲ್ಲೆ?' ಎಂದು ಕರುಳು ಜಗ್ಗಿಸಿ ಕೇಳುತ್ತದೆ. ಈ ಓದಿನಲ್ಲಿ ಮತ್ತೆ ಮತ್ತೆ ನೆನಪಾಗುತ್ತಿದ್ದುದು ಕಾಡಿಗೆ ಬೆಂಕಿ ಬಿದ್ದಾಗ ಹೊಳೆಯಲ್ಲಿ ಮುಳುಗಿ ಗರಿಯನ್ನು ತೋಯಿಸಿಕೊಂಡು ಬೆಂಕಿಯ ಮೇಲೆ ಕೊಡವಿ ಆರಿಸಲು ಶ್ರಮಿಸಿದ ಪುಟ್ಟ ಗುಬ್ಬಿಯ ಕಥೆ. ಕಡೆಗೂ ಗುಬ್ಬಚ್ಚಿಯ ಛಲ, ನಂಬಿಕೆಗಳಿಗೆ ಗೆಲುವಾಯಿತು. ತೀಸ್ತಾ ಸೆತಲ್ವಾಡ್ ಬರಹದಲ್ಲಿ ತೊಟ್ಟಿಕ್ಕುತ್ತಿರುವುದು, ಕೋಮುವಾದಿ ಬೆಂಕಿಯನ್ನು ಆರಿಸಲು, ಧ್ಯಾನಸ್ಥವಾಗಿ ಹೋರಾಡುತ್ತಿರುವ ಗುಬ್ಬಿಯ ರೆಕ್ಕೆಯಿಂದುದುರಿದ ಹನಿಗಳೇ.

–ವಿನಯಾ ಒಕ್ಕುಂದ, ಚಿಂತಕಿ ಮತ್ತು ಲೇಖಕಿ

ಸುರಂಗದ ಕೊನೆಯಲ್ಲೊಂದು ಬೆಳಕು

17 ವರ್ಷಗಳ ಹಿಂದೆ ನಡೆದಿರುವ ಗುಜರಾತ್ ಕೋಮುಗಲಭೆ ನಮಗೆ ನೆನಪಾಗುವುದು ಆಗಾಗ ಹೊರಬೀಳುತ್ತಿರುವ ನ್ಯಾಯಾಲಯದ ತೀರ್ಪುಗಳಿಂದ. ಇಲ್ಲವೇ, ಚುನಾವಣಾ ಭಾಷಣಗಳಲ್ಲಿ ಸಿಡಿಯುವ ನಂಜಿನ ಹನಿಗಳ ಮೂಲಕ ಮಾತ್ರ. ಆದರೆ ಒಂದಷ್ಟು ಜನಪರ ಜೀವಗಳು ಇಷ್ಟು ಕಾಲವೂ ಸಂತ್ರಸ್ತರ ಜತೆ ನಿಂತು ಪ್ರತಿರೋಧದ ಬೆಂಕಿ ಆರದಂತೆ ನೋಡಿಕೊಂಡಿದ್ದಾರೆ. ಇಂತಹದ್ದೊಂದು ಹೋರಾಟದ ಕಿಡಿ ತೀಸ್ತಾ ಸೆತಲ್ವಾಡ್. ಈಗಲೂ ನರೇಂದ್ರ ಮೋದಿಯವರ 56 ಇಂಚಿನ ಎದೆಯೊಳಗೆ ಇಣುಕಿ ನೋಡಿದರೆ ಅಲ್ಲಿ ಶತ್ರುಗಳ ಪಟ್ಟಿಯಲ್ಲಿ ಮೊದಲ ಹೆಸರು ತೀಸ್ತಾದ್ದೇ ಇರಬಹುದು. ನಿರಂತರವಾದ ಕಿರುಕುಳ, ಬೆದರಿಕೆ, ಸುಳ್ಳು ಮೊಕದ್ದಮೆಗಳು, ಹುನ್ನಾರಗಳು, ಆತಂಕ–ಅಸಹಾಯಕತೆ, ವಿಶ್ವಾಸದ್ರೋಹ ಇವೆಲ್ಲವುಗಳ ಹೊರತಾಗಿಯೂ ತೀಸ್ತಾ ತನ್ನ ದನಿ ಉಡುಗದಂತೆ ಕಾಯ್ದುಕೊಂಡು ಬಂದಿರುವುದು ಅಚ್ಚರಿಯೇ ಹೌದು. ಜತೆಗೆ ಸುರಂಗದ ಕೊನೆಯಲ್ಲೊಂದು ಬೆಳಕು ಕೂಡಾ ಕಾಣಿಸುತ್ತದೆ. ಸಮಾಜ ನಾವು ಆತಂಕಪಡುವಷ್ಟು ಕೆಟ್ಟದಾಗಿಲ್ಲ, ಒಳ್ಳೆಯ ಉದ್ದೇಶಗಳಿಗೆ ಕೈಜೋಡಿಸುವ ಸಜ್ಜನ ಧೈರ್ಯವಂತರೂ ಇದ್ದಾರೆ ಎಂಬ ಭರವಸೆ ಮೂಡಿಸುತ್ತದೆ. ಹೋರಾಟಕ್ಕೊಂದು ಸ್ಫೂರ್ತಿ ಕಾಣಿಸುತ್ತದೆ.

–ದಿನೇಶ್ ಅಮೀನ್ ಮಟ್ಟು, ಪತ್ರಕರ್ತರು ಮತ್ತು ಚಿಂತಕರು

ತೀಸ್ತಾ ಸೆತಲ್ವಾಡ್ ಸ್ವಗತ

......ತೀಸ್ತಾ ಈ ಕೃತಿಯ ಉದ್ದಕ್ಕೂ ಕೋಮುವಾದದ ಹಿಂಸೆಯ ವಿರುದ್ಧ ತಮ್ಮ ಹೋರಾಟವನ್ನು ಬಣ್ಣಿಸುವಾಗ ಎಲ್ಲಿಯೂ ಭಾವೋದ್ವೇಗಕ್ಕೆ ಒಳಗಾಗುವುದಿಲ್ಲ. ಹಿಂದು ಮುಸ್ಲಿಂ ಐಕ್ಯ, ಸೋದರತ್ವ, ಪರಮತ ಸಹಿಷ್ಣುತೆ ಇತ್ಯಾದಿ ಸದ್ಗುಣಗಳ ಬಗ್ಗೆ ಅವರು ಉಪದೇಶಿಸುವುದೂ ಇಲ್ಲ. ಸ್ವಾತಂತ್ರ್ಯ, ಸಮಾನತೆ, ನ್ಯಾಯ ಹಾಗೂ ಪ್ರಜಾಪ್ರಭುತ್ವದ ಹಕ್ಕುಗಳು ಕೇವಲ ಸಜ್ಜನರ ಸದ್ಗುಣಗಳು ಮತ್ತು ಸದಾಶಯಗಳಿಂದ ದೊರೆಯುವಂತಹದಲ್ಲ. ಈ ಮೌಲ್ಯಗಳು ಸಾಂಸ್ಥಿಕವಾಗಿರುವಂತಹವು. ಅವು ಯಾರ ಔದಾರ್ಯದ ಫಲವೂ ಅಲ್ಲ. ಪ್ರಜಾಪ್ರಭುತ್ವವೊಂದು ಸಾಂಸ್ಥಿಕವಾದ ನ್ಯಾಯವನ್ನು ಪಾಲಿಸದೆ ಇದ್ದಲ್ಲಿ ಸರಕಾರಗಳು ಬಹುಮತದ ದಬ್ಬಾಳಿಕೆಗಳಾಗಿ ಪರಿಣಮಿಸುತ್ತವೆ. ಈಗ ಈ ದೇಶವನ್ನು ಆಳುತ್ತಿರುವ ಸರಕಾರವೂ ಇಂತಹದೇ ಒಂದು ಬಹುಮತದ ದಬ್ಬಾಳಿಕೆಯ ಸರಕಾರ. ಈ ಸರಕಾರವನ್ನು ನಡೆಸುತ್ತಿರುವ ರಾಜಕೀಯ ಪಕ್ಷಕ್ಕೆ, ಸಂವಿಧಾನವು ಪ್ರಜೆಗಳಿಗೆ ನೀಡಿರುವ ಸ್ವಾತಂತ್ರ್ಯ, ಸಮಾನತೆ ಮತ್ತು ಸೋದರತ್ವದ ಮೌಲ್ಯಗಳ ಬಗ್ಗೆ ಗೌರವವಿಲ್ಲ. ಆ ಪಕ್ಷದ ಹಿರಿಯ ಆದರ್ಶವಾಗಿರುವ ಹಿಂದುರಾಷ್ಟ್ರ ನಿರ್ಮಾಣಕ್ಕೆ ಈ ಸಂವಿಧಾನ ಅವರಿಗೆ ಒಂದು ದೊಡ್ಡ ತೊಡಕು. ಆಳುವ ಪಕ್ಷದ ಕೋಮುವಾದಿ ಸಿದ್ಧಾಂತದ ವಿರುದ್ಧ ಹೋರಾಡುತ್ತಿರುವ ತೀಸ್ತಾ ತಾನು ಸಂವಿಧಾನದ ಕಾಲಾಳು ಎಂದು ಕರೆದುಕೊಂಡರೂ ವಾಸ್ತವವಾಗಿ ಅವರು ಈ ಹೋರಾಟದ ಓರ್ವ ಅಗ್ರಗಣ್ಯ ನಾಯಕಿಯಾಗಿದ್ದಾರೆ. ಪ್ರಭುತ್ವದ ಈ ಅನೈತಿಕತೆ ಮತ್ತು ಹೊಣೆಗೇಡಿತನಗಳನ್ನು ಪ್ರತಿಭಟಿಸುವದನ್ನೇ ತೀಸ್ತಾ ಈಗ ತನ್ನ ಪೂರ್ಣಾವಧಿ ವೃತ್ತಿ ಮಾಡಿಕೊಂಡಿದ್ದಾರೆ.

– ಜಿ. ರಾಜಶೇಖರ

‘ನ್ಯೂಸ್‌ನೇಶನ್’ ಸಂದರ್ಶನ: ‘ಅಚ್ಛೇ ದಿನ್’ಗೆ ತಕ್ಕ ಸಮಾರೋಪ!



ವೇದರಾಜ ಎನ್.ಕೆ.

ಮೇ 11 ರಂದು, ಈ ಬಾರಿಯ ಸಾರ್ವತ್ರಿಕ ಚುನಾವಣೆಗಳ 6ನೇ ಘಟ್ಟದಲ್ಲಿ ದೇಶದ ರಾಜಧಾನಿ ದಿಲ್ಲಿ ಮತ್ತು ಸುತ್ತಮುತ್ತಲಿನ ರಾಜ್ಯಗಳ ಮತದಾರರು ತಾವು ಮರುದಿನ ಯಾರಿಗೆ ಮತನೀಡಬೇಕು ಎಂದು ಯೋಚಿಸುತ್ತಿರುವ ಸಮಯದಲ್ಲಿ , ‘ನ್ಯೂಸ್ ನೇಶನ್’ ಎಂಬೊಂದು ಸುದ್ದಿ ವಾಹಿನಿ ಪ್ರಸಾರ ಮಾಡಿರುವ ಪ್ರಧಾನ ಮಂತ್ರಿಗಳ ಸಂದರ್ಶನ ಈಗ ಇಡೀ ದೇಶದ ಗಮನ ಸೆಳೆದಿದೆ–ಮುಖ್ಯವಾಗಿ ಬಾಲಾಕೋಟ್ ‘ವಾಯು ಪ್ರಹಾರ’ದ ಕೀರ್ತಿ ತನ್ನದಾಗಿಸಿಕೊಳ್ಳುವ ಭರದಲ್ಲಿ ಪ್ರಧಾನಿಗಳು ಪ್ರದರ್ಶಿಸಿದ ಮೋಡಗಳು ಮತ್ತು ರಾಡಾರ್ ಕುರಿತಂತೆ ‘ಪಂಡಿತರನ್ನು ಬೆರಗಾಗಿಸಿದ’ ತನ್ನ ‘ಕಚ್ಚಾ ಜಾಣ್ಮೆ’ಯಿಂದಾಗಿ.


ಆದರೆ ಈ ಸಂದರ್ಶನದ ಹೆಚ್ಚುಗಾರಿಕೆ ಅಷ್ಟೇ ಅಲ್ಲ, ಒಂದರ್ಥದಲ್ಲಿ, ಬಹಳ ಸಮಯದ ನಂತರ ಕೇಂದ್ರದಲ್ಲಿ, ಕೇವಲ 31% ಮತಗಳಿಂದಲೇ ಆದರೇನಂತೆ, ಸ್ಪಷ್ಟ ಬಹುಮತ ಪಡೆದ ಒಂದು ಪಕ್ಷದ ನೇತೃತ್ವದ ‘ಮಜಬೂತ್’ ಸರಕಾರದ ಐದು ವರ್ಷಗಳ ಆಳ್ವಿಕೆಯ ಒಂದು ಸಾರಾಂಶವನ್ನು ಈ ಸಂದರ್ಶನ ದೇಶದ ಮುಂದೆ ಇಟ್ಟಿದೆ ಎನ್ನಬಹುದು.

ರಾಡಾರ್‌ಗಳು ಮತ್ತು ಮೋಡಗಳು ಮಾತ್ರವೇ ಈ ‘ಐತಿಹಾಸಿಕ’ ಎನ್ನಬಹುದಾದ ಸಂದರ್ಶನದ ‘ಹೈಲೈಟ್’ ಅಲ್ಲ ಎಂಬುದು ಈಗ ಜನಜನಿತವಾಗಿದೆ. “ತಾವು ಹಣದ ಪರ್ಸ್ ಇಟ್ಟುಕೊಳ್ಳುತ್ತೀರಾ?” ಎಂಬ ಸಂದರ್ಶಕರುಗಳ ಅಮೋಘ ಪ್ರಶ್ನೆಯನ್ನು ಉತ್ತರಿಸುತ್ತ ಜೇಬಲ್ಲಿ ಹಣವೇ ಇಲ್ಲದಿರುವಾಗ ಪರ್ಸ್ ಏಕೆ ಎಂದರು. 2001ರಲ್ಲಿ ಗುಜರಾತಿನ ಮುಖ್ಯಮಂತ್ರಿಯಾಗಿ ಸರಕಾರವನ್ನು ಸೇರುವ ವರೆಗೆ, ಅಂದರೆ ಸುಮಾರು 50ವರ್ಷ ವಯಸ್ಸಿನ ವರೆಗೆ ಅವರಿಗೆ ಏನೇನೂ ಆದಾಯವಿರಲಿಲ್ಲವಂತೆ, ಸರಕಾರಕ್ಕೆ ಬಂದಾಗಲೇ ಅಧಿಕಾರಿಗಳು ಅವರ ಹೆಸರಲ್ಲಿ ಬ್ಯಾಂಕ್ ಖಾತೆ ತೆರೆದರಂತೆ.

ಹಾಗಿದ್ದರೆ ಅದುವರೆಗೆ ಆರೆಸ್ಸೆಸ್‌ನ ಸಂಘಟನಾ ಕೆಲಸ ಮಾಡುತ್ತಿದ್ದ ಅವರಿಗೆ ಸಂಘಟನೆ ಏನೂ ಕೊಡುತ್ತಿರಲಿಲ್ಲವೇ ಎಂದು ಹಲವರು ಮೂಗಿನ ಮೇಲೆ ಬೆರಳಿಟ್ಟುಕೊಂಡಿದ್ದಾರೆ.

1988ರಲ್ಲೇ ಅವರು ಡಿಜಿಟಲ್ ಕ್ಯಾಮರಾ ಬಳಸಿದ್ದರು, ಟಚ್ ಸ್ಕರೀನ್ ಟ್ಯಾಬ್ಲೆಟ್ ಬಳಸಿದ್ದರು, ಇ ಮೇಲ್ ಕೂಡ ಬಳಸುತ್ತಿದ್ದರು ಎಂಬ ಸಂಗತಿಗಳ ಮೇಲೆ ಸಂದರ್ಶನದ ವೇಳೆಯಲ್ಲಿ ಅವರು ಬೆಳಕು ಚೆಲ್ಲಿದರು. ಆ ವೇಳೆಗೆ ಇವೆಲ್ಲ ಭಾರತದಲ್ಲಿ ಬಳಕೆಗೇ ಬಂದಿರಲಿಲ್ಲ ಎಂದು ಕೆಲವು ಪರಿಣಿತರು ಹೇಳುತ್ತಿದ್ದಾರೆ. 1988ರಲ್ಲಿ ಡಿಜಿಟಲ್ ಕ್ಯಾಮರಾದ ತಂತ್ರಜ್ಞಾನ ರೂಪುಗೊಂಡಿತ್ತಷ್ಟೇ, ಅದ್ದರಿಂದ ಅಂತಹ ಕ್ಯಾಮರಾಗಳು ಎಲ್ಲೋ ಕೆಲವು ಇದ್ದು ದುಬಾರಿಯಾಗಿದ್ದವು.10–15 ಲಕ್ಷ ರೂ.ಗಳಷ್ಟು. ಇ ಮೇಲ್ ಬಳಕೆಗೆ ಬಂದದ್ದು 1990ರ ದಶಕದ ನಂತರವೇ. ಚಿಕ್ಕಾಸೂ ಜೇಬಿನಲ್ಲಿರದ ಇವರು ಅದನ್ನೆಲ್ಲ ಹೇಗೆ ಪಡೆದಿರಬಹುದು ಎಂದು ಇನ್ನು ಕೆಲವರು ಬೆರಗಾಗಿದ್ದಾರೆ.

ಬಹುಶಃ ಇವೆಲ್ಲದಕ್ಕೂ ಉತ್ತರದ ಹೊಳಹು ಸಿಕ್ಕಿದ್ದು ಸಂದರ್ಶಕರು ‘ತಾವು ಕಳೆದ ಐದು ವರ್ಷಗಳಲ್ಲಿ ಏನಾದರೂ ಬರೆದಿದ್ದೀರಾ’, ಅಂದರೆ ಕವನ ಬರೆದಿದ್ದೀರಾ ಎಂದು ಕೇಳಿದಾಗ. ಹೌದು, ಇವತ್ತಷ್ಟೇ ಒಂದು ಕವನವನ್ನು ಬರೆದಿದ್ದೇನೆ ಎಂದರು ಮಾನ್ಯ ಪ್ರಧಾನಿಗಳು. ಹಿಂದಿನ ಬಿಜೆಪಿ ಪ್ರಧಾನಿಗಳಂತೆ ಇವರೂ ಕವನ ಬರೆಯುತ್ತಾರೆ ಎಂಬುದು ಬಹಳಷ್ಟು ಮಂದಿಗೆ ಆಶ್ಚರ್ಯವಾದ್ದು ಆಗಲೇ. ಮತ್ತು ಈ ಸಂದರ್ಶನದ ನಿಜ



ಚಿತ್ರದ ಆ ಹೊಳಹು ಸಿಕ್ಕಿದ್ದು ಕೂಡ ಆಗಲೇ.

ಕವನ ಓದಿ ಎಂದು ಸಂದರ್ಶಕರು ಹೇಳಿದಾಗ ಪ್ರಧಾನಿಗಳು ಅಲ್ಲಿದ್ದ ಸೇವಕರಿಂದ ತನ್ನ ಫೈಲ್ ಕೇಳಿ ಪಡೆಯುತ್ತಾರೆ, ಒಂದು ಕಾಗದವನ್ನು ಎತ್ತಿಕೊಳ್ಳುತ್ತಾರೆ, ಅದನ್ನು ತೋರಿಸಿ ಎನ್ನುತ್ತಾರೆ ಸಂದರ್ಶಕರು, ಇಲ್ಲ ಅದು ಕೈಬರಹದಲ್ಲಿದೆ, ತನ್ನ ಕೈಬರಹ ಸೊಟ್ಟ–ಸೊಟ್ಟಗಾಗಿದೆ ಎನ್ನುತ್ತಾರೆ. ಈ ವೇಳೆಗೆ ಅವರು ನೋಡುತ್ತಿದ್ದ ಕಾಗದದ ದೃಶ್ಯ ಸಂದರ್ಶನ ನೋಡುತ್ತಿರುವವರಿಗೂ ಕಾಣುತ್ತದೆ. ಆದರೆ ಅಲ್ಲಿ ಕಾಣಿಸುವುದು ಕೈಬರಹದ ಕವನವಲ್ಲ, ಮುದ್ರಿತ ಕವನ, ಅಲ್ಲದೆ ಸಂದರ್ಶಕರು ಕೇಳಿದ ಪ್ರಶ್ನೆಯೂ ಅಲ್ಲಿ ಕಾಣುತ್ತದೆ. ಅದರ ಮುಂದೆ 27 ಎಂದಿದೆ. ಅಂದರೆ 27ನೇ ಪ್ರಶ್ನೆ.

ಈ ಐದು ವರ್ಷಗಳಲ್ಲಿ ಎಂದೂ ಪತ್ರಿಕಾ ಸಮ್ಮೇಳನ ನಡೆಸಿಯೇ ಇರದ ದಾಖಲೆ ನಿರ್ಮಿಸಿರುವ ಈ ಪ್ರಧಾನಿಗಳ ಸಂದರ್ಶನಗಳು ಅಲ್ಲೋ–ಇಲ್ಲೋ ನಡೆದಿವೆ. ಚುನಾವಣೆಗಳು ಹತ್ತಿರ ಬಂದ ಮೇಲೆ ತುಸು ಹೆಚ್ಚಾಗಿವೆ. ಆದರೆ ಇವೆಲ್ಲವೂ ಸಹಾನುಭೂತಿಪರ ಸಂದರ್ಶಕರು ನಡೆಸಿದ್ದು, ಅಂದರೆ ಪ್ರಧಾನ ಮಂತ್ರಿಗಳಿಗೆ ಇಷ್ಟವಾಗುವ ಪ್ರಶ್ನೆಗಳನ್ನು ಮಾತ್ರ ಕೇಳುವ ‘ಸಹೃದಯ’ ಪತ್ರಕರ್ತರದ್ದು. ಅವೆಲ್ಲವೂ ‘ಸ್ಕ್ರಿಪ್ಟೆಡ್’ ಸಂದರ್ಶನಗಳು ಎನ್ನಲಾಗುತ್ತಿತ್ತು. ಅಂದರೆ ಅವರು ಮೊದಲೇ ಪ್ರಶ್ನೆಗಳನ್ನು ಕಳಿಸುತ್ತಾರೆ, ಪ್ರಧಾನಿಗಳ ಕಚೇರಿ ಅವುಗಳಲ್ಲಿ ಉತ್ತರಿಸುವ ಪ್ರಶ್ನೆಗಳನ್ನು ಆಯ್ದು ಕಳಿಸುತ್ತದೆ, ಪತ್ರಕರ್ತರು ಅವನ್ನೇ ಕೇಳುತ್ತಾರೆ. ಆದರೆ ಇದು ಕೇವಲ ಊಹೆಯಾಗಿರುತ್ತಿತ್ತು, ಪ್ರಧಾನಿಗಳ ಬಗ್ಗೆ ಅಸೂಯೆ ಇರುವವರ ಅಪಪ್ರಚಾರ ಇರಬಹುದು ಎಂದೂ ಭಾವಿಸಲಾಗಿತ್ತು.

ಆದರೆ ಈ ಸಂದರ್ಶನ ಅದನ್ನು ದೃಢಪಡಿಸಿದೆ ಎಂದು ಬಹಳಷ್ಟು ರಾಜಕೀಯ ವೀಕ್ಷಕರು ಹೇಳುತ್ತಿದ್ದಾರೆ.

ಅದೇನೇ ಇರಲಿ, ಬಾಲಾಕೋಟ್ ವಿಮಾನ ದಾಳಿಯ ಬಗ್ಗೆ ಹೇಳಿದ್ದು ಚುನಾವಣೆಯ ಸಂದರ್ಭದಲ್ಲಿ ಅರ್ಥವಾಗುತ್ತದೆ, ಆದರೆ ಉಳಿದವುಗಳು–ಪರ್ಸ್ ಇಲ್ಲದಿರುವುದು, ಡಿಜಿಟಲ್ ಕ್ಯಾಮರಾ, ಇ–ಮೇಲ್, ಟ್ಯಾಬ್ಲೆಟ್ ಮತ್ತು ಈ ಮುದ್ರಿತ ಕವನ, ಈ ಮೇಲ್ನೋಟಕ್ಕೆ ಸುಳ್ಳಿರಬಹುದು ಎಂದೇ ಸಂದೇಹ ಮೂಡಿಸುವ ವಿಚಾರಗಳು ಯಾಕೆ ಬೇಕಿತ್ತು ಎಂಬ ಪ್ರಶ್ನೆ ಹಲವರಲ್ಲಿ ಎದ್ದಿದೆ.

ಆದರೆ ಕಳೆದ ಐದು ವರ್ಷಗಳಲ್ಲಿ ಒಂದೊಂದಾಗಿ ಆಶ್ವಾಸನೆಗಳು ಜುಮ್ಲಾಗಳಾಗಿ ಬಿಟ್ಟದ್ದು, ಮತ್ತು ನಡುನಡುವೆ ಸಮಾರಂಭಗಳಲ್ಲಿ, ಪ್ರತಿಪಕ್ಷಗಳನ್ನು ಟೀಕಿಸುವ ಸಂದರ್ಭಗಳಲ್ಲಿ, ವಿಶೇಷವಾಗಿ ಚುನಾವಣೆಗಳ ಸಂದರ್ಭದಲ್ಲಿ, ಹೊಮ್ಮಿ ಬಂದು ಆಮೇಲೆ ಶುದ್ಧ ಸುಳ್ಳುಗಳು ಒಂದು ದೃಢಪಟ್ಟಿದ್ದು(ಉದಾ: ಯಾವ ಕಾಂಗ್ರೆಸ್ ಮುಖಂಡರೂ ಭಗತ್ ಸಿಂಗ್‌ರನ್ನು ಜೈಲಿನಲ್ಲಿ ಭೇಟಿಯಾಗಿರಲಿಲ್ಲ!) ನೆನಪಿರುವವರಿಗೆ ಇದರಿಂದ ಆಶ್ಚರ್ಯವಾಗಲಿಕ್ಕಿಲ್ಲ.

ಆದರೂ, ಬಾಲಾಕೋಟ್ ವಾಯುದಾಳಿಗೆ ಆದೇಶ ನೀಡಿದ ಪರಿಯ ಬಗ್ಗೆ ಅವರು ಹೇಳಿರುವುದು ನಿಜವೇನು, ನಿಜವಾಗಿದ್ದರೆ ಪರಿಣಿತರಾರೂ ಅದು ತಪ್ಪು ಎಂದು ಹೇಳುವ ಧೈರ್ಯ ತೋರಲಿಲ್ಲವೇ, ದೇಶದ ಭದ್ರತೆಯಂತಹ ಗಹನವಾದ ಪ್ರಶ್ನೆಗಳಲ್ಲಿ ಇಂತಹ ‘ಕಚ್ಚಾ ಜಾಣ್ಮೆ’ ಮತ್ತು ಪರಿಣಿತರ ಮೌನ ಅಪಾಯಕಾರಿಯಲ್ಲವೇ ಎಂದು ಹಲವರಿಗೆ ಆತಂಕ ಉಂಟಾಗಿದೆ. ನೋಟುರದ್ಧತಿಯ ಅನುಭವ ನಮ್ಮ ಮುಂದಿದೆ ಎನ್ನುತ್ತಾರೆ ಅವರು. ಈ ಬಾಲಾಕೋಟ್ ವಾಯುದಾಳಿಯನ್ನು ಮಳೆ ಸುರಿಯುತ್ತಿದ್ದಾಗ ಮಾಡಿದ್ದರಿಂದಲೇ ನಮ್ಮ ಯುದ್ಧವಿಮಾನಗಳು ಹೊತ್ತಿದ್ದ ಒಂದು ಕ್ಷಿಪಣಿ ಕೆಲಸ ಮಾಡದೆ ಈ ದಾಳಿಯ ನಿಜವಾದ ಫಲಿತಾಂಶ ನಮಗೆ ತಿಳಿಯದಂತೆ ಆಗಿರಬಹುದೇ ಎಂದೂ ಕೆಲವು ರಕ್ಷಣಾ ಪರಿಣಿತರು ಊಹಿಸುತ್ತಿದ್ದಾರೆ ಎಂಬುದನ್ನು ಇಲ್ಲಿ ಗಮನಿಸಬಹುದು.

ಈ ಚುನಾವಣೆಗಳು ಈಗ ಮರು ಆಯ್ಕೆ ಕೇಳುತ್ತಿರುವವರ ಕಾರ್ಯನಿರ್ವಹಣೆಯನ್ನು ಮಾತ್ರವಲ್ಲ, ಚುನಾವಣಾ ಆಯೋಗದ ಕಾರ್ಯನಿರ್ವಹಣೆಯನ್ನೂ ಕೂಡ ತೀರ್ಮಾನಿಸುತ್ತದೆ ಎಂಬುದು ಅದಕ್ಕೆ ಗೊತ್ತಿರಬೇಕು –ಪ್ರೊ. ಗೋಪಾಲಕೃಷ್ಣ ಗಾಂಧಿ



ವ್ಯಂಗ್ಯಚಿತ್ರ: ಪಿ.ಮಹಮ್ಮದ್, ವಾರ್ತಾಭಾರತಿ

‘ಮುಂಜಾನೆ ಚಹಾ, ಸಂಜೆ ಪಕೋಡ, ರಾತ್ರಿ ಚೌಕೀದಾರಿ–ಇದೇ ತಾವು ಕೊಟ್ಟ ಕೆಲಸ’

ಒಡಿಶಾದ ಪುರಿ ಲೋಕಸಭಾ ಕ್ಷೇತ್ರದಲ್ಲಿ ಯುವಕನೊಬ್ಬ ಬಿಜೆಪಿ ಅಭ್ಯರ್ಥಿ ಮತ್ತು ಆ ಪಕ್ಷದ ಅಬ್ಬರದ ವಕ್ತಾರ ಸಂಬಿತ್ ಪಾತ್ರ ಗೆ ‘ಟಿವಿ9 ಭಾರತ್‌ವರ್ಷ್’ನಲ್ಲಿ ಪ್ರಸಾರವಾದ ಚರ್ಚೆಯಲ್ಲಿ ಕೇಳಿದ ಪ್ರಶ್ನೆ(ನ್ಯೂಸ್‌ಸೆಂಟ್ರಲ್, ಮೇ 15)

“ಸರ್, 40–43 ನಿಮಿಷಗಳ ಆಗಿ ಹೋಗಿವೆ, ನೀವು ಒಮ್ಮೆಯಾದರೂ ಶಿಕ್ಷಣ ಮತ್ತು ಆರೋಗ್ಯ ಸೇವೆಯ ಬಗ್ಗೆ ಮಾತೇ ಆಡಲಿಲ್ಲ, ನೀವು ನಮಗೆ ಕೊಟ್ಟಿರುವ ಕೆಲಸ–ಮುಂಜಾನೆ ಚಹಾ ಮಾರು, ಸಂಜೆ ಪಕೋಡ ಮಾರು ಮತ್ತು ರಾತ್ರಿ ಕಾವಲು ಕಾಯಿ.. ನಾವು ಈ ಬಾರಿ ಮತನೀಡಲು ಶೌಚಾಲಯಕ್ಕೆ ಹೋಗಬೇಕೇ? ಯಾಕೆಂದರೆ ನೀವು ಶಿಕ್ಷಣ ಮತ್ತು ಆರೋಗ್ಯದ ಬಗ್ಗೆ ಮಾತೇ ಆಡುವುದಿಲ್ಲ” ಎಂದು ಆತ ಹೇಳಿದಾಗ ಸಂಬಿತ್ ಪಾತ್ರ ಈ ಚುನಾವಣಾ ಪ್ರಚಾರದಾದ್ಯಂತ ಕಂಡು ಬಂದಿರುವಂತೆ ವಿಷಯಾಂತರ ಮಾಡಲು ಪ್ರಯತ್ನಿಸಿದರು.

“ಒಂದು ವಿಷಯ ನೆನಪಿಟ್ಕೊ, ಇಲ್ಲಿ ನೀನು ಪ್ರಶ್ನೆ ಕೇಳಬಹುದು, ನೀನು ಯುವಕ.. ಎಂದೂ ಮತ ನೀಡಲು ಬಾತ್‌ರೂಂಗೆ ಹೋಗುತ್ತೇನೆ ಎನ್ನಬೇಡ”. ಆದರೆ ಯುವಕ ಮತ್ತೆ ಶಿಕ್ಷಣ ಮತ್ತು ಆರೋಗ್ಯ ಬಗ್ಗೆ ಮಾತಾಡಿ ಎಂದು ಪಟ್ಟು ಹಿಡಿದ. ನಿರುದ್ಯೋಗ, ಉದ್ಯೋಗನಷ್ಟದ ಬಗ್ಗೆ ಕೇಳಿದ. ಪಾತ್ರ “ಮತದಾನ ನಿನ್ನ ಜನ್ಮಸಿದ್ಧ ಹಕ್ಕು, ನೀನು ಯಾರಿಗೆ ಬೇಕಾದರೂ ಕೊಡು, ಆದರೆ ಮತ ಹಾಕಲು ಹೋಗು” ಎಂದು ‘ಆಯುಷ್ಮಾನ್ ಭಾರತ’ದ ಗುಣಗಾನಕ್ಕೆ ತಿರುಗಿದರು.

“ದೇಶಕ್ಕೆ ಪ್ರಧಾನ ಮಂತ್ರಿ ಬೇಕು, ಚೌಕೀದಾರನಲ್ಲ”

ಇದು ಚುನಾವಣಾ ಪ್ರಚಾರದ ಆರಂಭದಲ್ಲೇ (ಮಾರ್ಚ್ 18) ಯುವಕನೊಬ್ಬ ‘ಅಜ್ ತಕ್’ ಹಿಂದಿ ಸುದ್ದಿವಾಹಿನಿಯ ಚರ್ಚೆಯಲ್ಲಿ ಬಿಜೆಪಿ ವಕ್ತಾರನಿಗೆ ನೀಡಿದ ಸಲಹೆ. “ಒಮ್ಮೆ ನೀವು ಯುವಜನರಿಗೆ ಪಕೋಡ ಮಾರಲು ಹೇಳುತ್ತೀರಾ, ಮತ್ತೊಮ್ಮೆ ‘ಚೌಕೀದಾರ’ನ ಬಗ್ಗೆ ಮಾತಾಡುತ್ತೀರಾ, ದೇಶಕ್ಕೆ ಬೇಕಾಗಿರುವುದು ಒಬ್ಬ ಪರಿಣಾಮಕಾರಿ ಪ್ರಧಾನ ಮಂತ್ರಿ, ಚೌಕೀದಾರನಲ್ಲ”.

‘ಭಾರತ್ ಮಾತಾಕೀ ಜೈ’

ಇದು ಪ್ರಖ್ಯಾತ ಚಿತ್ರನಟ ಅನುಪಮ್ ಖೇರ್ ಯುವಕನೊಬ್ಬನ ಪ್ರಶ್ನೆಗೆ ಕೊಟ್ಟ ಉತ್ತರ. ಬಿಜೆಪಿ ಅಭ್ಯರ್ಥಿಯಾಗಿರುವ ಪತ್ನಿ ಕಿರಣ್ ಖೇರ್ ಪರವಾಗಿ ಅವರು ಪ್ರಚಾರ ಮಾಡುತ್ತಿದ್ದಾಗ ಅವರ ಸಾಧನೆಯೇನು ಎಂದು ಕೇಳಿದಾಗ ತನಗೆ ಗೊತ್ತಿದ್ದ ಒಂದೇ ‘ಉತ್ತರ’ವನ್ನು ಕೊಟ್ಟು ಮುಂದೆ ನಡೆದರಂತೆ.

ಈ ಸಂಚಿಕೆ ಪ್ರಕಟವಾಗುವ ವೇಳೆಗೆ 10 ವಾರಗಳ ಕಾಲ ನಡೆದಿರುವ ಸಾರ್ವತ್ರಿಕ ಚುನಾವಣೆಗಳ ಏಳೂ ಘಟ್ಟಗಳು ಮುಗಿದಿರುತ್ತವೆ. ಜನಗಳು ಮೇ 23 ರ ಫಲಿತಾಂಶಕ್ಕೆ ಕಾಯುತ್ತಿರುತ್ತಾರೆ.

ಈ 10 ವಾರಗಳಲ್ಲಿ ಜನಗಳ ನಿಜವಾದ ಪ್ರಶ್ನೆಗಳಿಂದ ಅವರ ಗಮನವನ್ನು ಬೇರೆಡೆಗೆ ತಿರುಗಿಸುವ, ನಿರ್ಲಕ್ಷಿಸುವ ಇಂತಹ ಪ್ರಯತ್ನಗಳು ಸಫಲವಾಗುತ್ತವೆಯೇ, ದೇಶದ ಗೃಹಮಂತ್ರಿಗಳು ಮತ್ತು ಆಳುವ ಪಕ್ಷದ ಅಧ್ಯಕ್ಷರು ಹೇಳಿದಂತೆ ಆಳುವ ಪಕ್ಷ 2014ಕ್ಕಿಂತಲೂ ಹೆಚ್ಚಿನ ಸ್ಥಾನಗಳನ್ನು ಪಡೆಯುತ್ತದೆಯೇ ಕಾದು ನೀಡಬೇಕು. ಒಬ್ಬ ಪ್ರಖ್ಯಾತ ವ್ಯಂಗ್ಯಚಿತ್ರಕಾರರು ಆಳುವ ಪಕ್ಷದ ಅಧ್ಯಕ್ಷರು ವೈದಿಕ ಗಣಿತದ ಯಾವ ಸೂತ್ರದಿಂದ ಈ ಫಲಿತಾಂಶ ಪಡೆದಿದ್ದಾರೆ ಎಂದೂ ವ್ಯಂಗ್ಯವಾಡಿದ್ದಾರೆ.

ಮೇ14ರಂದು ವಿಧ್ವಂಸಕ ಕೃತ್ಯಗಳಲ್ಲಿ ಧ್ವಂಸವಾದ ಪಂಡಿತ ಈಶ್ವರಚಂದ್ರ ವಿದ್ಯಾಸಾಗರರವರ ಪ್ರತಿಮೆಯಿದ್ದ ಜಾಗದಲ್ಲಿ ಅವರ ಒಂದು ಭವ್ಯ ಪ್ರತಿಮೆಯನ್ನು ನಿರ್ಮಿಸುವುದಾಗಿ ಪ್ರಧಾನಿಗಳ ಆಶ್ವಾಸನೆ–ಸುದ್ದಿ 1

ಗಾಂಧೀಜಿ ಹಂತಕ ಗೋಡ್ಸೆ ದೇಶಭಕ್ತ ಎಂದು ಬಿಜೆಪಿಯ ಭೋಪಾಲ್ ಅಭ್ಯರ್ಥಿ ಪ್ರಶಂಸೆ–ಸುದ್ದಿ 2



ವ್ಯಂಗ್ಯಚಿತ್ರ: ಸತೀಶ್ ಆಚಾರ್ಯ, ಸಿಫಿ.ಕಾಂ

ನವ–ಉದಾರವಾದದ ಅಡಿಯಲ್ಲಿನ ಒಂದು ಆರ್ಥಿಕ ವಿಪರ್ಯಾಸ



ಜಿಡಿಪಿ ಬೆಳವಣಿಗೆ ದರ ದ್ವಿಗುಣಗೊಂಡಿದೆ, ಆಹಾರಧಾನ್ಯಗಳ ಉತ್ಪಾದನೆಯ ಬೆಳವಣಿಗೆ ದರ ಇಳಿದಿದೆ, ಅದರಿಂದಾಗಿ ಆಹಾರ ಧಾನ್ಯಗಳ ಕೊರತೆಯ ಪ್ರಮಾಣವು ಅಗಾಧವಾಗಿರಬೇಕಿತ್ತು. ಅದಕ್ಕೆ ಬದಲಾಗಿ, ರಫ್ತು ಮಾಡಿದ ನಂತರವೂ ಸಾಕಾಗುವಷ್ಟು ಆಹಾರ ಧಾನ್ಯಗಳ ದಾಸ್ತಾನು ನಮ್ಮಲ್ಲಿ ಉಳಿದದ್ದು ಹೇಗೆ? ಇದೊಂದು ಆರ್ಥಿಕ ವಿಪರ್ಯಾಸ. ಇದಕ್ಕೆ ವರಮಾನಗಳ ಅಸಮತೆ ಹೆಚ್ಚುತ್ತಿದೆ ಎನ್ನುವ ಕಾರಣವಷ್ಟೇ ಸಮಾಧಾನಕರ ವಿವರಣೆಯಾಗುವುದಿಲ್ಲ. ಇಂತಹ ಸ್ಥಿತಿ ಏರ್ಪಡುವುದು ನವ–ಉದಾರ ಬಂಡವಾಳಶಾಹಿಯ ಅಡಿಯಲ್ಲಿ ಸರಕಾರದ ಧೋರಣೆಗಳ ವರ್ಗ ಸ್ವರೂಪದಿಂದಾಗಿಯೇ. ರೈತ ಕೃಷಿಯನ್ನು ಹಿಂಡಿ–ಹಿಪ್ಪೆ ಮಾಡುವ ಧೋರಣೆಯು ಅರ್ಥವ್ಯವಸ್ಥೆಯ ಪೂರೈಕೆ ಮತ್ತು ಬೇಡಿಕೆ ಈ ಎರಡೂ ವಿಭಾಗಗಳನ್ನೂ ತಟ್ಟಿದೆ.

ಪ್ರೊ.ಪ್ರಭಾತ್ ಪಟ್ನಾಯಕ್ ಅನು: ಕೆ.ಎಂ. ನಾಗರಾಜ್

ಆರ್ಥಿಕ ನೀತಿಗಳನ್ನು ಸರ್ಕಾರವೇ ನಿರ್ಧರಿಸುತ್ತಿದ್ದ 1991ರ ಮೊದಲಿನ ಅವಧಿಗೆ ಹೋಲಿಸಿದರೆ, ನವ ಉದಾರ ಆರ್ಥಿಕ ನೀತಿಗಳ ಅವಧಿಯಲ್ಲಿ (1991ರ ನಂತರ) ಜಿಡಿಪಿಯ ಬೆಳವಣಿಗೆಯ ದರವು ಸುಮಾರು ಎರಡು ಪಟ್ಟು ಹೆಚ್ಚಾಗಿತ್ತು ಎಂಬುದನ್ನು ಅಂಕಿ ಅಂಶಗಳು ತೋರಿಸುತ್ತವೆ. 1991ರ ನಂತರ ಕೃಷಿಯ ಬೆಳವಣಿಗೆಯ ದರವು, ಅದರಲ್ಲೂ ವಿಶೇಷವಾಗಿ ಆಹಾರ ಧಾನ್ಯಗಳ ಉತ್ಪಾದನೆಯ ಬೆಳವಣಿಗೆಯ ದರವು, 1991ರ ಹಿಂದಿನ ಅವಧಿಗೆ ಹೋಲಿಸಿದರೆ, ನಿಶ್ಚಿತವಾಗಿ ಕೆಳ ಮಟ್ಟದಲ್ಲಿತ್ತು ಎಂಬುದನ್ನೂ ಈ ಅಂಕಿ ಅಂಶಗಳು ತೋರಿಸುತ್ತವೆ.

ತಲಾವಾರು ಲೆಕ್ಕದಲ್ಲಿ ಹೇಳುವುದಾದರೆ, ಜಿಡಿಪಿಯ ಬೆಳವಣಿಗೆಯ ದರ ಮತ್ತು ಆಹಾರ ಧಾನ್ಯಗಳ ಬೆಳವಣಿಗೆಯ ದರಗಳನ್ನು ಅಕ್ಕಪಕ್ಕದಲ್ಲಿಟ್ಟು ಹೋಲಿಸಿದಾಗ ಅವುಗಳ ನಡುವಿನ ವ್ಯತ್ಯಾಸವು ಇನ್ನೂ ಹೆಚ್ಚು ಸ್ಪುಟವಾಗಿದೆ.

ನವ ಉದಾರ ಆರ್ಥಿಕ ನೀತಿಗಳ ಅವಧಿಯಲ್ಲಿ (1991ರ ನಂತರ) ಜಿಡಿಪಿಯ ಬೆಳವಣಿಗೆಯ ದರವು 1991ರ ಹಿಂದಿನ ಅವಧಿಗೆ ಹೋಲಿಸಿದರೆ, ಸುಮಾರು ಎರಡು ಪಟ್ಟು ಹೆಚ್ಚಾಗಿತ್ತು. ಹೋಲಿಕೆಯ ಇದೇ ಅವಧಿಯಲ್ಲಿ, ಆಹಾರ ಧಾನ್ಯಗಳ ತಲಾ ಉತ್ಪತ್ತಿಯ ಬೆಳವಣಿಗೆಯ ದರವು, 1991ರ ನಂತರ ಶೂನ್ಯದ ಸಮೀಪದಲ್ಲಿದ್ದರೆ, 1991ರ ಹಿಂದಿನ ಅವಧಿಯಲ್ಲಿ ಶೇ.0.5 ಮತ್ತು ಶೇ.1ರ ನಡುವೆ ತುಸು ಆಚೆ ಈಚೆ ಇತ್ತು.

ಆಹಾರ ಧಾನ್ಯಗಳ ವಲಯ ಮತ್ತು ಆಹಾರೇತರ ವಲಯಗಳ ನಡುವಿನ ಬೆಳವಣಿಗೆಯ ದರದಲ್ಲಿನ ಏರು ಪೇರುಗಳಿಂದಾಗಿ, ನವ ಉದಾರ ಆರ್ಥಿಕ ನೀತಿಗಳ ಅವಧಿಯಲ್ಲಿ, ಆಹಾರ ಧಾನ್ಯಗಳಿಗೆ ಬೇಡಿಕೆ ಏರುತ್ತಾ ಹೋಗುವ ಮತ್ತು ಅದರಿಂದಾಗಿ ಆಹಾರ ಧಾನ್ಯಗಳ ಬೆಲೆಗಳ ಏರಿಕೆಯಾಗುವ ಅಥವಾ ಬೆಲೆ ಏರಿಕೆ ತಡೆಯಲು ಆಹಾರ ಧಾನ್ಯಗಳ ಆಮದು ಮಾಡಿಕೊಳ್ಳುವ ಪರಿಸ್ಥಿತಿ ಏರ್ಪಡುವ ಸಾಧ್ಯತೆ ಇತ್ತು. ಆದರೆ, ನಾವು ಕಂಡದ್ದೇನೆಂದರೆ ಅದಕ್ಕೆ ತದ್ವಿರುದ್ಧವಾದ ಪರಿಸ್ಥಿತಿ. ಆಹಾರ ಧಾನ್ಯಗಳ ಆಮದುಗಳ ಅವಶ್ಯಕತೆ ದೊಡ್ಡ ಪ್ರಮಾಣದಲ್ಲಿ ಇರಬಹುದಾದ ಪರಿಸ್ಥಿತಿಗೆ ಬದಲಾಗಿ, ದೇಶವು ಆಹಾರ ಧಾನ್ಯಗಳನ್ನು ದೊಡ್ಡ ಪ್ರಮಾಣದಲ್ಲಿ ರಫ್ತು ಮಾಡುತ್ತಿದ್ದುದೇ ವಾಡಿಕೆಯಾಗಿತ್ತು. 1991ರ ಹಿಂದೆ, ಆಹಾರ ಧಾನ್ಯಗಳ ಬೆಲೆಗಳು ಪದೇ ಪದೇ ಏರುತ್ತಿದ್ದುದೇ ಒಂದು ಸಾಮಾನ್ಯ ಲಕ್ಷಣ ಎನ್ನುವಂತಿದ್ದರೆ, 1991ರ ನಂತರದ ಅವಧಿಯಲ್ಲಿ ಆಹಾರ ಧಾನ್ಯಗಳ ಬೆಲೆಗಳು ಏರಿದ ಸಂದರ್ಭಗಳು ಸಾಮಾನ್ಯವಾಗಿ ಕಡಿಮೆಯೇ. ಒಂದೆರಡು ಸಂದರ್ಭಗಳನ್ನು ಹೊರತುಪಡಿಸಿದರೆ, ಸರ್ಕಾರದ ಬಳಿ ಇದ್ದ ಆಹಾರ ಧಾನ್ಯಗಳ ದಾಸ್ತಾನು "ರೂಢಿ"ಯ ಮಟ್ಟಕ್ಕಿಂತಲೂ ಯಾವತ್ತೂ ಮೇಲಿತ್ತು.

ಆಹಾರ ಧಾನ್ಯಗಳ ತಲಾ ಉತ್ಪತ್ತಿಯ ಬೆಳವಣಿಗೆ ದರ ಇಳಿಯುತ್ತಿರುವ ಪರಿಸ್ಥಿತಿಯಲ್ಲಿ ಮತ್ತು ಅದೇ ಸಮಯದಲ್ಲಿ ಆಹಾರೇತರ ವಲಯಗಳಲ್ಲಿ ತಲಾ ಉತ್ಪತ್ತಿಯ ಬೆಳವಣಿಗೆಯ ದರ ಏರುತ್ತಿರುವ ಒಂದು ಏರುಪೇರಿನ ಪರಿಸ್ಥಿತಿಯು ಆಹಾರ ಧಾನ್ಯಗಳ ಮೇಲಿನ ಬೇಡಿಕೆಯ ಹೆಚ್ಚಳಕ್ಕೆ ಕಾರಣವಾಗುವುದರ ಬದಲು, ವಾಸ್ತವವಾಗಿ ಆಹಾರ ಧಾನ್ಯಗಳ ಪೂರೈಕೆಯೇ ಹೇರಳವಾಗಿರುವುದಾದರೂ ಹೇಗೆ? ಸಂಪೂರ್ಣವಾಗಿಯೂ ಇದೊಂದು ತದ್ವಿರುದ್ಧ ಪರಿಸ್ಥಿತಿ. ಇದು ಸಾಧ್ಯವಾಗುವುದು ಹೇಗೆ? ಇದೇ ವಿಷಯವನ್ನು ಬೇರೆ ರೀತಿಯಲ್ಲಿ ಹೇಳುವುದಾದರೆ, ಅರ್ಥಶಾಸ್ತ್ರಜ್ಞರು "ಬೇಡಿಕೆಯ ವರಮಾನ ಸ್ಥಿತಿಸ್ಥಾಪಕತ್ವ"ವು (income elasticity of demand) ಅಂದರೆ, ನಿಜ ತಲಾ ವರಮಾನವು ಶೇ.1ರಷ್ಟು ಹೆಚ್ಚಿದರೆ, ಆಹಾರ ಧಾನ್ಯಗಳ ತಲಾ ಬೇಡಿಕೆಯಲ್ಲಿನ ಶೇಕಡಾ ಬದಲಾವಣೆ ಧನಾತ್ಮಕವಾಗಿರುತ್ತದೆ ಎನ್ನುತ್ತಾರೆ, ಅರ್ಥಾತ್ ತಲಾ ಬೇಡಿಕೆಯೂ ಹೆಚ್ಚಬೇಕು. ಹಾಗಾಗಿ, ನವ ಉದಾರ ಅವಧಿಯಲ್ಲಿ, ಆಹಾರ ಧಾನ್ಯಗಳ ಕೊರತೆಯ ಪ್ರಮಾಣವು ಅಗಾಧವಾಗಿರಬೇಕಿತ್ತು. ಅದಕ್ಕೆ ಬದಲಾಗಿ, ರಫ್ತು ಮಾಡಿದ ನಂತರವೂ ಸಾಕಾಗುವಷ್ಟು ಆಹಾರ ಧಾನ್ಯಗಳ ದಾಸ್ತಾನು ನಮ್ಮಲ್ಲಿ ಉಳಿದದ್ದು ಹೇಗೆ? ಇದೊಂದು ವಿಪರ್ಯಾಸ.

ಈ ವಿಪರ್ಯಾಸವನ್ನು ವಿವರಿಸಲು, ವರಮಾನಗಳ ಅಸಮತೆ ಹೆಚ್ಚುತ್ತಿದೆ ಎನ್ನುವ ಕಾರಣವಷ್ಟೇ ಸಮಾಧಾನಕರ ವಿವರಣೆಯಾಗುವುದಿಲ್ಲ. "ಬೇಡಿಕೆಯ ವರಮಾನ ಸ್ಥಿತಿಸ್ಥಾಪಕತ್ವ"ವು ವರಮಾನ ಹಂಚಿಕೆಯ ಮೇಲೆ ನಿಂತಿದೆ ಎಂಬುದು ನಿಜ. ಈ ವರಮಾನ ಹಂಚಿಕೆಯು ಹೆಚ್ಚು ಅಸಮತೆಯಿಂದ ಕೂಡಿದ್ದರೆ, ಈ ಸ್ಥಿತಿಸ್ಥಾಪಕತ್ವ ಇಳಿಯುತ್ತದೆ. ಏಕೆಂದರೆ, ಸರಾಸರಿ ಲೆಕ್ಕದಲ್ಲಿ ಶ್ರೀಮಂತರು ನೇರವಾಗಿ ಮತ್ತು ಪರೋಕ್ಷವಾಗಿ ಬಡವರಿಗಿಂತಲೂ ಹೆಚ್ಚಿನ ತಲಾ ಪ್ರಮಾಣದ ಆಹಾರ ಬಳಸಿದರೂ ಸಹ, ಅಂಚಿನಲ್ಲಿ, ಬಡವರಿಂದ ಒಂದು ರೂಪಾಯಿ ಶ್ರೀಮಂತರಿಗೆ ವರ್ಗಾಯಿಸಿದರೂ ಆಹಾರ ಧಾನ್ಯಗಳ ಮೇಲಿನ ಬೇಡಿಕೆ ಇಳಿಯುತ್ತದೆ. ಆದರೆ, ವರಮಾನ ಹಂಚಿಕೆ ಹದಗೆಡುತ್ತಿದೆ ಎಂಬ ವಿವರಣೆಯೂ ಸಾಕಾಗುವುದಿಲ್ಲ. ಏಕೆಂದರೆ, ನಾವು ಇಲ್ಲಿ ಚರ್ಚಿಸುತ್ತಿರುವುದು ಈ ಸ್ಥಿತಿಸ್ಥಾಪಕತ್ವ ಇಳಿಯುತ್ತಿದೆ ಎಂಬುದಷ್ಟೇ ಅಲ್ಲ, ಧನಾತ್ಮಕವಾಗಿರಬೇಕಾದ ಬದಲು ಋಣಾತ್ಮಕವಾಗಿದೆ ಎಂಬುದನ್ನು. ಇಂತಹ ಋಣಾತ್ಮಕ ಪರಿಸ್ಥಿತಿ ಸಾಧ್ಯವಾಗುವುದು ಗಣನೀಯ ಪ್ರಮಾಣದ ಜನತೆಯ ಜೀವನ ಸಂಪೂರ್ಣವಾಗಿ ಹದಗೆಡುತ್ತಿರುವ ಪರಿಸ್ಥಿತಿಯಲ್ಲಿ ಮಾತ್ರ.

ಇಂತಹ ಪರಿಸ್ಥಿತಿ ಸಂಭವಿಸಿರಲೇಬೇಕು. ಏಕೆಂದರೆ, ಈ ವಿಪರ್ಯಾಸವನ್ನು ವಿವರಿಸಲು ಬೇರೆ ಯಾವ ವಿವರಣೆಯೂ ಶಕ್ಯವಿಲ್ಲ. ಆದರೆ ಈ ವಿವರಣೆಯತ್ತ ಸುಮ್ಮನೆ ಬೆರಳು ತೋರಿಸಿದರೂ ಸಾಲದು. ಇದು ಸಂಭವಿಸಿದ್ದಾದರೂ ಹೇಗೆ ಎಂಬ ಪ್ರಶ್ನೆಯನ್ನೂ ನಾವು ಕೇಳಬೇಕಾಗಿದೆ. ಒಂದು ದೃಷ್ಟಾಂತವಾಗಿ ಹೇಳುವುದಾದರೆ, ಜನರ ಮೂಲ ಹಣ ವರಮಾನಕ್ಕೆ ಹೋಲಿಸಿದರೆ, ಬೆಲೆಗಳಲ್ಲಿ ಏರಿಕೆಯಾದರೆ, ಗಣನೀಯ ಪ್ರಮಾಣದ ಜನತೆಯ ಜೀವನ ಸಂಪೂರ್ಣವಾಗಿ ಹದಗೆಡಬಹುದು(ಈ ಅಂಶವನ್ನು ಇಂಗ್ಲೆಂಡಿನ ಅರ್ಥಶಾಸ್ತ್ರಜ್ಞ ಕೀನ್ಸ್ profit inflation ಅಂದರೆ, "ಲಾಭದ ಹಣದುಬ್ಬರ" ಎಂದು ಕರೆದಿದ್ದರು). ಆದರೆ, ನವ ಉದಾರ ಅವಧಿಯಲ್ಲಿ ಆಹಾರದ ಬೆಲೆಗಳ ಉಬ್ಬರದ ಹಾವಳಿ ಇರಲಿಲ್ಲ. ಆದ್ದರಿಂದ, ಕೊಳ್ಳುವ ಶಕ್ತಿ ಕುಂದಿದ ಪರಿಣಾಮವಾಗಿಯೇ ಗಣನೀಯ ಸಂಖ್ಯೆಯ ಜನತೆಯ ಜೀವನ ಸಂಪೂರ್ಣವಾಗಿ ಹದಗೆಟ್ಟಿದೆ.

ಈ ವಿವರಣೆಯೂ ಸಮಾಧಾನಕರವಲ್ಲ. ಜನತೆಯ ಕೊಳ್ಳುವ ಶಕ್ತಿ ತಗ್ಗಿದ್ದು ಹೇಗೆ? ಸ್ಪಷ್ಟವಾಗಿ ಗೋಚರಿಸುವ ಒಂದು ಉತ್ತರವೆಂದರೆ ಆಹಾರ ಧಾನ್ಯಗಳೂ ಸೇರಿದಂತೆ ಕೃಷಿ ಉತ್ಪಾದನೆಯ ವೇಗದ ತಗ್ಗಿಕೆ. ಉತ್ಪಾದನೆ ಕಡಿಮೆ ಇದ್ದಾಗ, ಕೃಷಿಕರ ಕೈಯಲ್ಲಿ ಕೊಳ್ಳುವ ಶಕ್ತಿಯೂ ಕಡಿಮೆಯಾಗುತ್ತದೆ. ಉತ್ಪಾದನೆ ಕಡಿಮೆಯಾದ ಪರಿಣಾಮವಾಗಿ ಈ ಉತ್ಪಾದಕರ ಬೇಡಿಕೆ ತಗ್ಗುತ್ತದೆ. ಆದರೆ, ಈ ಒಂದು ಅಂಶವೇ ತೃಪ್ತಿಕರ ವಿವರಣೆಯಾಗುವುದಿಲ್ಲ.

ಒಂದು ವೇಳೆ ಆಹಾರ ಧಾನ್ಯಗಳ ಉತ್ಪತ್ತಿ ಒಂದು ಯೂನಿಟ್‌ನಷ್ಟು ಕಡಿಮೆಯಾದರೆ, ಆಹಾರ ಧಾನ್ಯಗಳ ಮೇಲೆ ಉತ್ಪಾದಕರ (ಅಂದರೆ, ರೈತರು ಮತ್ತು ಕೂಲಿಕಾರರು) ಬೇಡಿಕೆ ತಗ್ಗುತ್ತದೆ. ಆಗ ಅವರ ಆಹಾರ ಧಾನ್ಯಗಳ ಸೇವನೆ ಕಡಿಮೆಯಾಗುತ್ತದೆ. ಇತರ ಸರಕು–ಪದಾರ್ಥಗಳ ಮೇಲೂ ಅವರ ಬೇಡಿಕೆ ತಗ್ಗುತ್ತದೆ. ಪರಿಣಾಮವಾಗಿ, ಆಹಾರ ಧಾನ್ಯಗಳ ಮೇಲೆ ಈ ಸರಕು ಉತ್ಪಾದಕರ ಬೇಡಿಕೆ ತಗ್ಗುತ್ತದೆ.

ಆದರೆ, ಒಂದು ಯೂನಿಟ್‌ನಷ್ಟು ಆಹಾರ ಧಾನ್ಯಗಳ ಉತ್ಪಾದನೆ ಕಡಿಮೆಯಾದರೆ, ವಾಸ್ತವವಾಗಿ ಆಹಾರ ಧಾನ್ಯಗಳ ಬೇಡಿಕೆಯನ್ನು ಅದು ಈ ರೀತಿಯಲ್ಲಿ ಒಂದು ಯೂನಿಟ್‌ಗಿಂತ ಹೆಚ್ಚಾಗಿ ತಗ್ಗಿಸಲಾರದು. ಆದ್ದರಿಂದ, ಆಹಾರ ಧಾನ್ಯಗಳ ಉತ್ಪಾದನೆ ಕಡಿಮೆಯಾದರೆ ಅದು ಅಧಿಕ ಬೇಡಿಕೆ ಉಂಟುಮಾಡಲೇ ಬೇಕು. ಒಂದು ವೇಳೆ ಉತ್ಪಾದನೆಯು 100 ಯೂನಿಟ್‌ನಿಂದ 99 ಯೂನಿಟ್‌ಗೆ ಇಳಿದರೆ, ಆಗ ಬೇಡಿಕೆಯ ಇಳಿಕೆ ಒಂದು ಯೂನಿಟ್‌ಗಿಂತ ಕಡಿಮೆಯಿರಬೇಕು. ಅದು 99.5ಕ್ಕೆ ಇಳಿಯುತ್ತದೆ ಎಂದುಕೊಳ್ಳೋಣ. ಆಗ, ಉತ್ಪಾದನೆಗಿಂತ ಬೇಡಿಕೆ 0.5 ಯೂನಿಟ್‌ನಷ್ಟು ಹೆಚ್ಚು ಆಗುತ್ತದೆ.

ಆದ್ದರಿಂದ, ನವ ಉದಾರ ಅವಧಿಯಲ್ಲಿ ಆಹಾರ ಧಾನ್ಯಗಳ ಹೇರಳ ಪೂರೈಕೆಯ ಅಂಶವನ್ನು ವಿವರಿಸಲು ಆಹಾರ ಧಾನ್ಯಗಳ ತಲಾ ಉತ್ಪಾದನೆಯ ಬೆಳವಣಿಗೆ ದರ ಇಳಿದಿದೆ ಎಂಬುದರತ್ತ ಬೊಟ್ಟು ಮಾಡುವುದೂ ಸಹ ಸಮಾಧಾನ ತರುವುದಿಲ್ಲ. ಯಾವುದೋ ಒಂದು ಅಂಶ ಅದರಲ್ಲಿ ತೊಡಗಿಕೊಂಡಿದೆ ಎಂಬುದರಲ್ಲಿ ಅನುಮಾನವಿಲ್ಲ. ಅದು ಏನು ಎಂದು ತಿಳಿಯಲು ಒಂದು ಭಿನ್ನತೆಯನ್ನು ಗುರುತಿಸಿಕೊಳ್ಳಬೇಕಾಗುತ್ತದೆ. ಆದ್ದರಿಂದ, ನಮ್ಮ ಗಮನವು ಈ ಸಂದರ್ಭದಲ್ಲಿ ಕೃಷಿ ಅವಲಂಬಿತ ಜನತೆಯ ಮೇಲೆ ಕೇಂದ್ರೀಕೃತವಾಗಿದೆ. ಅವರ ವಾಸ್ತವಿಕ ಕೊಳ್ಳುವ ಶಕ್ತಿಯು ಎರಡು ಅಂಶಗಳ ಮೇಲೆ ನಿಂತಿದೆ: ಅವರು ಉಂಟುಮಾಡಿದ ಉತ್ಪಾದನೆ ಮತ್ತು ಆ ಉತ್ಪಾದನೆಯ ಪ್ರತಿ ಯೂನಿಟ್‌ನ ವಾಸ್ತವಿಕ ಕೊಳ್ಳುವ ಶಕ್ತಿ.

ಇವೆರಡೂ ಸ್ಪಷ್ಟವಾಗಿ ಬೇರೆ ಬೇರೆಯ ಎರಡು ವಿಷಯಗಳು. ಹಲವಾರು ರೈತರು ಬೆಳೆದದ್ದು ಒಂದೇ ಧಾನ್ಯವಾದರೂ ಒಬ್ಬೊಬ್ಬ ರೈತನ ವಾಸ್ತವಿಕ ಕೊಳ್ಳುವ ಶಕ್ತಿ ಅಥವಾ ವರಮಾನ ಬೇರೆ ಬೇರೆಯೇ ಇರುತ್ತದೆ. ಅದು, ಅವರು ಲಾಗುವಾಡುಗಳಿಗೆ ಕೊಟ್ಟ ಬೆಲೆ, ಮಾರುಕಟ್ಟೆಯಲ್ಲಿ ಅವರ ಉತ್ಪಾದನೆಗೆ ಸಿಕ್ಕಿದ ಬೆಲೆ ಮತ್ತು ಅವರು ಕೊಳ್ಳುವ ಸರಕುಗಳ ಬೆಲೆ ಇವುಗಳನ್ನು ಅವಲಂಬಿಸಿದೆ.

ಭಾರತದಲ್ಲಿ ನವ ಉದಾರ ಅವಧಿಯಲ್ಲಿ, ಕೃಷಿ ಉತ್ಪಾದಕರ(ರೈತರು ಮತ್ತು ಕೃಷಿ ಕೂಲಿಕಾರರು) ನಿಜ ವರಮಾನಗಳನ್ನು ಹಿಂಡಲಾಗಿದೆ. ಆಹಾರ ಧಾನ್ಯಗಳ ಉತ್ಪಾದನಾ ಬೆಳವಣಿಗೆಯ ಇಳಿಕೆ ಮತ್ತು ಆ ಉತ್ಪಾದನೆಯ ಪ್ರತಿ ಯೂನಿಟ್‌ನಿಂದ ಬರುವ ನಿಜ ವರಮಾನ ಈ ಎರಡೂ ಅಂಶಗಳು ಹಿಂಡಿಕೆಗೆ ಕಾರಣವಾಗಿವೆ. ತುಲನಾತ್ಮಕವಾಗಿ, ಲಾಗುವಾಡುಗಳ ಬೆಲೆಗಳು ಏರಿಕೆಯಾಗಿವೆ ಮತ್ತು ಅವರ ಉತ್ಪಾದನೆಗೆ ಮಾರುಕಟ್ಟೆಯಲ್ಲಿ ದೊರೆಯುವ ಬೆಲೆಗಳು ಇಳಿಕೆ ಕಂಡಿದೆ (ಉದಾ: ಧಾನ್ಯ ಸಂಗ್ರಹ ಬೆಲೆಗಳ ಮೇಲಿನ ಮಿತಿ). ಮಿಗಿಲಾಗಿ, ಅವರು ಕೊಳ್ಳುವ ಬೇರೆ ಬೇರೆ ಸೇವೆಗಳ (ಉದಾ: ಶಿಕ್ಷಣ, ಆರೋಗ್ಯ ಮತ್ತಿತರ ಸೇವೆಗಳು) ಬೆಲೆಗಳ ಏರಿಕೆ ವಿಪರೀತವಾಗಿದೆ.

ಕೃಷಿ ಮತ್ತು ತಯಾರಿಕೆಗಳ ನಡುವಿನ ವ್ಯಾಪಾರದ ಶರತ್ತುಗಳ ಬಗ್ಗೆ ಮಾತ್ರವೇ ಚರ್ಚೆಯಾಗುತ್ತದೆ. ಈ ಚರ್ಚೆಗಳಲ್ಲಿ ರೈತರು ಮತ್ತು ಕೃಷಿ ಕೂಲಿಕಾರರ ಜೀವನ ನಿರ್ವಹಣೆಯ ಖರ್ಚುಗಳು ಕಣ್ಣಿಗೆ ಬೀಳುವುದೇ ಇಲ್ಲ. ಇಂತಹ ವ್ಯಾಪಾರದ ಶರತ್ತುಗಳ ಚಲನೆಯನ್ನು ದಾಖಲಿಸುವಾಗ ಶಿಕ್ಷಣ ಮತ್ತು ಆರೋಗ್ಯದಂತಹ ಅಗತ್ಯ ಸೇವೆಗಳ ಖಾಸಗೀಕರಣದಿಂದಾಗಿ ಅವುಗಳ ಬೆಲೆಗಳು ಗಗನಮುಖಿಯಾಗಿ ಏರುವ ಅಂಶವನ್ನು ಪರಿಗಣಿಸುವುದೇ ಇಲ್ಲ.

ಒಂದು ವೇಳೆ ಉತ್ಪಾದನೆಯ ಪ್ರತಿ ಯೂನಿಟ್‌ನಿಂದ ಬರುವ ನಿಜ ವರಮಾನದ ಕೊಳ್ಳುವ ಶಕ್ತಿ ಬದಲಾಗದೆ ಉಳಿದರೆ, ಆಗ ಆಹಾರ ಧಾನ್ಯಗಳ ಉತ್ಪಾದನೆ ಇಳಿಕೆಯ ಒಂದೇ ಒಂದು ಅಂಶವು ಆಹಾರ ಧಾನ್ಯಗಳ ಹೇರಳ ಪೂರೈಕೆಯ ಒಂದು ವಿಪರ್ಯಾಸದ ವಿವರಣೆಯಾಗುವುದಿಲ್ಲ ಎಂಬುದನ್ನು ಈಗಾಗಲೇ ಗಮನಿಸಿದ್ದೇವೆ. ಆದರೆ, ಆಹಾರ ಧಾನ್ಯಗಳ ಬೆಳವಣಿಗೆ ದರ ಇಳಿಕೆಯ ಜೊತೆಯಲ್ಲಿ ಉತ್ಪಾದಕರು ಉಂಟುಮಾಡಿದ ಉತ್ಪಾದನೆಯ ಪ್ರತಿ ಯೂನಿಟ್‌ನ ನಿಜ ಕೊಳ್ಳುವ ಶಕ್ತಿ ಕುಂದಿದರೆ, ಆಗ ಆಹಾರ ಧಾನ್ಯಗಳ ಹೇರಳ ಪೂರೈಕೆಯ ಪರಿಸ್ಥಿತಿ ಉಂಟಾಗಬಹುದು. ಅದನ್ನು ಆಹಾರೇತರ ವಲಯವು ವೇಗದ ಬೆಳವಣಿಗೆಯ ಮೂಲಕವೂ ಬಳಕೆಮಾಡಿಕೊಳ್ಳಲಾರದು.

ಆಹಾರೇತರ ವಲಯದಲ್ಲಿ ಕಾಲಕ್ರಮದಲ್ಲಿ ಎಷ್ಟು ಉನ್ನತ ಮಟ್ಟದ ತಂತ್ರಜ್ಞಾನಿಕ ಪ್ರಗತಿ ಘಟಿಸುತ್ತದೆಯೋ ಅದರ ಪ್ರಕಾರವಾಗಿ ದುಡಿಮೆಗಾರರ ಉತ್ಪಾದಕತೆಯ ಬೆಳವಣಿಗೆ ದರ ವೃದ್ಧಿಸುತ್ತದೆ ಮತ್ತು ಅದರಿಂದಾಗಿ ಉದ್ಯೋಗಾವಕಾಶಗಳು ಕಡಿಮೆಯಾಗುತ್ತವೆ. ಮತ್ತು, ಈ ವಿದ್ಯಮಾನವು ಆಹಾರದ ಮೇಲಿನ ಬೇಡಿಕೆ, ಆಹಾರದ ಪ್ರತಿ ಯೂನಿಟ್ ಉತ್ಪಾದನೆ, ಮಾರುಕಟ್ಟೆಯಲ್ಲಿ ಆಹಾರ ಧಾನ್ಯಗಳ ಹೇರಳ ಪೂರೈಕೆಯ ಪರಿಸ್ಥಿತಿ ಇವುಗಳ ಮೇಲೆ ಬೀರುವ ಪರಿಣಾಮವು ಹೆಚ್ಚುತ್ತಾ ಹೋಗುತ್ತದೆ.

ಈ ವಿಷಯವನ್ನು ಸೂಕ್ಷ್ಮವಾಗಿ ಅವಲೋಕಿಸಿದರೆ, ಆಹಾರ ಧಾನ್ಯಗಳ ಉತ್ಪಾದನೆಯ ಪ್ರತಿ ಯೂನಿಟ್‌ನ ನಿಜ ಕೊಳ್ಳುವ ಶಕ್ತಿ ಕುಂದಿದ ಪರಿಣಾಮವಾಗಿಯೇ ಆಹಾರ ಧಾನ್ಯಗಳ ತಲಾವಾರು ಬೆಳವಣಿಗೆಯ ದರ ಇಳಿದಿರುವುದು, ಅದರಿಂದಾಗಿ ಆಹಾರ ಧಾನ್ಯಗಳ ಉತ್ಪಾದಕರ ಕೊಳ್ಳುವ ಶಕ್ತಿ ಇಳಿದಿದೆ ಎಂಬುದು ಸ್ಪಷ್ಟವಾಗುತ್ತದೆ. ಧಾನ್ಯಗಳ ಉತ್ಪಾದಕರಿಗೆ ಈ ಪರಿಸ್ಥಿತಿ ಉಂಟಾಗಲು ಲಾಗುವಾಡುಗಳ ಬೆಲೆಗಳ ಹೆಚ್ಚಳ, ಧಾನ್ಯ ಸಂಗ್ರಹ ಬೆಲೆಳ ಮೇಲಿನ ಮಿತಿ, ರೈತರು ಮತ್ತು ಕೃಷಿ ಕೂಲಿಕಾರರ ಜೀವನ ನಿರ್ವಹಣೆಯ ಖರ್ಚುಗಳ ಹೆಚ್ಚಳ, ಇವುಗಳು ಕಾರಣವಾಗಿವೆ. ಈ ಎಲ್ಲವುಗಳಿಂದಾಗಿ ಬಹಳಷ್ಟು ಮಂದಿ ರೈತರು ಮತ್ತು ಕೃಷಿ ಕೂಲಿಕಾರರಿಗೆ "ಸರಳ ಪುನರುತ್ಪತ್ತಿ" ಕ್ರಿಯೆಯೂ ಒಂದು ಹೊರಲಾರದ ಹೊರೆಯಂತಾಗಿದೆ.

ರೈತ ಕೃಷಿಯನ್ನು ಈ ರೀತಿಯಲ್ಲಿ ಹಿಂಡಿದ ಪರಿಣಾಮವು ಅರ್ಥವ್ಯವಸ್ಥೆಯ ಪೂರೈಕೆ ಮತ್ತು ಬೇಡಿಕೆ ಈ ಎರಡೂ ವಿಭಾಗಗಳಿಗೂ ತಾಕಿದೆ. ತಲಾವಾರು ಬೆಳವಣಿಗೆ ದರ ಇಳಿದ ಪರಿಣಾಮವಾಗಿ ಆಹಾರ ಧಾನ್ಯಗಳ ಉತ್ಪಾದನೆಯ ಇಳಿಕೆಯು ಪೂರೈಕೆಯ ಮಗ್ಗಲನ್ನು ತಟ್ಟಿದೆ. ಆಹಾರ ಧಾನ್ಯಗಳ ಉತ್ಪಾದನಾ ದರ ಇಳಿಕೆ ಮತ್ತು ಪ್ರಥಮವಾಗಿ ಅದಕ್ಕೆ ಕಾರಣವಾದ ಉತ್ಪಾದನೆಯ ಪ್ರತಿ ಯೂನಿಟ್‌ನ ನಿಜ ಕೊಳ್ಳುವ ಶಕ್ತಿಯ ಇಳಿಕೆ ಈ ಎರಡೂ ಅಂಶಗಳು ಬೇಡಿಕೆಯ ಮಗ್ಗಲನ್ನು ತಟ್ಟಿವೆ. ಪೂರೈಕೆಯ ಮಗ್ಗಲಿನ ಪರಿಣಾಮಗಳಿಗಿಂತಲೂ ಬೇಡಿಕೆಯ ಮಗ್ಗಲಿನ ಪರಿಣಾಮಗಳು ಹೆಚ್ಚು ಪ್ರಭಾವಶಾಲಿಯಾಗಿವೆ. ಹಾಗಾಗಿಯೇ ನವ ಉದಾರ ಅವಧಿಯಲ್ಲಿ ಜಿಡಿಪಿಯ ಬೆಳವಣಿಗೆಯ ದರವು ಅದರ ಹಿಂದಿನ ಅವಧಿಗಿಂತಲೂ ಸುಮಾರು ಎರಡು ಪಟ್ಟು ಹೆಚ್ಚು ಮತ್ತು ಆಹಾರಧಾನ್ಯಗಳ ಬೆಳವಣಿಗೆ ದರದಲ್ಲಿ ಇಳಿಕೆಯಾದರೂ ಸಹ, ಆಹಾರ ಧಾನ್ಯಗಳ ಪೂರೈಕೆ ಅಧಿಕವಾಗಿರುವ ಪರಿಸ್ಥಿತಿಯನ್ನು ಕಾಣುತ್ತಿದ್ದೇವೆ. ಬೇರೆ ಮಾತುಗಳಲ್ಲಿ ಹೇಳುವುದಾದರೆ, ಈ ರೀತಿ ನವ ಉದಾರ ನೀತಿಗಳಡಿಯಲ್ಲಿ ಇಂತಹ ಅಧಿಕ ಪೂರೈಕೆಯ ಸ್ಥಿತಿ ಏರ್ಪಡುವುದು ನವ–ಉದಾರ ಬಂಡವಾಳಶಾಹಿಯ ಅಡಿಯಲ್ಲಿ ಧೋರಣೆಗಳ ವರ್ಗ ಸ್ವರೂಪದಿಂದಾಗಿ. ●

ಪ್ರಜಾಪ್ರಭುತ್ವದ ಉಳಿವಿಗಾಗಿನ ಸಂಘರ್ಷದ ಅನುಭವದ ಕಣಜ

ಪ್ರಜಾಪ್ರಭುತ್ವದ ಉಳಿವಿಗಾಗಿ, ಅನ್ಯಾಯಗಳ ವಿರುದ್ಧ ಈ ದೇಶದಲ್ಲಿ ಹಲವು ತೆರನ ಹೋರಾಟಗಳು, ಹಲವು ವರ್ಷಗಳಿಂದ ನಿರಂತರವಾಗಿ ನಡೆಯುತ್ತಲೇ ಇದೆ. ಎಲ್ಲರನ್ನೂ ಸಮಾನವಾಗಿ ಕಾಣಬೇಕೆನ್ನುವ, ಎಲ್ಲರಿಗೂ ಸಮಪಾಲು ಸಿಗಬೇಕೆನ್ನುವ ಸಮಾನತೆಯ ಅಡಿಪಾಯದ ಮೇಲೆ ಈ ಸಮಾಜವನ್ನು ನಿರ್ಮಿಸುವ ಆಶಯದೊಂದಿಗೆ ಚಾಲ್ತಿಯಲ್ಲಿರುವ ಸಂವಿಧಾನವೇ ಅಪಾಯವನ್ನೆದುರಿಸುತ್ತಿರುವ ಸಂಧರ್ಭವಿದು. ಈ ಹೊತ್ತಿನಲ್ಲಿ ಪತ್ರಕರ್ತೆಯಾಗಿ, ಕೋಮುಹಿಂಸಾಚಾರಕ್ಕೆ ಬಲಿಯಾದವರ ಪರ ಹೋರಾಟ ಮಾಡುತ್ತ, ಸ್ವತಃ ಹಲವು ರೀತಿಯ ಅಪಾಯಗಳನ್ನೆದುರಿಸುತ್ತಿದ್ದರೂ ಎದೆಗುಂದದೇ ನೊಂದವರ ಬಾಳಿನ ಆಶಾಕಿರಣದಂತೆ ಕೆಲಸ ಮಾಡುತ್ತಿರುವ ತೀಸ್ತಾ ಸೆತಲ್‌ವಾಡ ರವರ ಬದುಕಿನ ಪುಟಗಳು, ನೆನಪಿನ ಬುಟ್ಟಿಯಿಂದ ಅಕ್ಷರಕ್ಕಿಳಿದ ಅನುಭವ ಕಥನ 'ಫುಟ್ ಸೋಲ್ಜರ್ ಆಫ್ ದಿ ಕಾನ್ಸ್ಟಿಟ್ಯೂಷನ್" ಇಂಗ್ಲೀಷ್ ಪುಸ್ತಕದ ಅನುವಾದ–'ಸಂವಿಧಾನದ ಕಾಲಾಳು' ಹೆಸರಿನಲ್ಲಿ ಎಸ್. ಸತ್ಯಾ ರವರಿಂದ ಅನುವಾದಗೊಂಡು ಬಿಡುಗಡೆಯಾಗುತ್ತಿದೆ.

ಇದನ್ನು ತೀಸ್ತಾರವರ ಬದುಕಿನ ಪುಟಗಳು ಎನ್ನುವುದಕ್ಕಿಂತ ಪ್ರಜಾಪ್ರಭುತ್ವ ಮತ್ತು ನ್ಯಾಯದ ಉಳಿವಿಗಾಗಿ ನಡೆಸುತ್ತಿರುವ ಹೋರಾಟಗಳ ಒಂದು ಅತ್ಯುತ್ತಮ ದಾಖಲೆ ಎನ್ನಬೇಕು. ಅವರ ಈ ಅನುಭವ ಕಥಾನಕದಲ್ಲಿ ಪತ್ರಕರ್ತೆಯಾಗಿ, ಸಾಮಾಜಿಕ ಕಳಕಳಿಯ ಹೋರಾಟಗಾರ್ತಿಯಾಗಿ ತಾನು ಕಣ್ಣಾರೆ ಕಂಡ ಸತ್ಯಗಳನ್ನು, ಭಯಂಕರವಾದ ಸನ್ನಿವೇಶಗಳನ್ನು ದಾಖಲಿಸುತ್ತಲೇ ನಮ್ಮ ಸುತ್ತಲಿನ ಜಗತ್ತಿಗೆ ಎಲ್ಲರೂ ಮನುಷ್ಯರಾಗಿ ಬದುಕುವ ಅಗತ್ಯವನ್ನು ತಿಳಿಸುತ್ತಾರೆ.

ಇಷ್ಟೊತ್ತಿಗಾಗಲೇ ಹಲವರ ನೆನಪಿನಿಂದ ಮಾಸಿ ಹೋಗಿರಬಹುದಾದ 1984ರ ಭೀವಂಡಿ ಕೋಮುಗಲಭೆ ತನ್ನ ಮೇಲೆ ಎಂದಿಗೂ ಮರೆಯಲಾರದ ಪರಿಣಾಮ ಬೀರಿದ್ದನ್ನು ನೆನಸಿಕೊಳ್ಳುತ್ತಲೇ ಅದು ಹೇಗೆ ತನ್ನನ್ನು ಒಬ್ಬ ಪತ್ರಕರ್ತೆಯನ್ನಾಗಿ ರೂಪಿಸಿತು ಎಂಬುದರ ಮೂಲಕ ಈ ನೆನಪುಗಳನ್ನು ನಮ್ಮೆದುರಿಗೆ ಹಂಚಿ ಕೊಳ್ಳುತ್ತಾರೆ ತೀಸ್ತಾ.

ರಾಜಕೀಯ ಪಕ್ಷವೊಂದರ ಧ್ಯೇಯ ಧೋರಣೆಗಳು ದೇಶದ ಜನರ ಹಿತಕ್ಕಿಂತ ಬೇರೆಯಾಗಿರಲು ಸಾಧ್ಯವಿಲ್ಲ, ಅದರಲ್ಲಿಯೂ ಭಾರತದಂಥಹ ದೇಶದಲ್ಲಿ ಯಾವ ರಾಜಕೀಯ ಪಕ್ಷವೇ ಅಧಿಕಾರಕ್ಕೆ ಬಂದರೂ ಇಲ್ಲಿನ ಬಹುತ್ವದ ನೆಲೆಯಲ್ಲಿ ಎಲ್ಲರೂ ಒಟ್ಟಿಗೆ ಬದುಕಿ ಬಾಳಿ ನಿರ್ಮಿಸಿದ ಇತಿಹಾಸವನ್ನು ಬದಿಗೊತ್ತಿ, ತನ್ನ ಅಧಿಕಾರದ ಬಲದ ಮೇಲೆ ಒಂದು ಧರ್ಮದವರು ತಮ್ಮ ಸಂಖ್ಯಾಬಲದ ಆಧಾರದಲ್ಲಿ ಇನ್ನೊಂದು ಧರ್ಮದವರನ್ನು ತಮ್ಮ ಅಧೀನರಂತೆ ಬದುಕಬೇಕೆನ್ನುವ ಹುಕುಮತ್ ಹೊರಡಿಸುವಂಥಹ ನಿಯಮಗಳನ್ನು ಹೊರಿಸಲು ಸಾಧ್ಯವಿಲ್ಲ. ಇದು ಈ ದೇಶದ ಮೂಲ ಆಶಯ. ಆದರೆ 1984ರ ಬಿವಂಡಿ ಕೋಮು ಗಲಭೆಗಳು, 92–93 ಮುಂಬೈ ಗಲಭೆಗಳು, 2002ರ ಗುಜರಾತ್ ಗಲಭೆಗಳು, ಮತ್ತು ಮುಂದುವರೆದ ಹೃದಯ ತಲ್ಲಣಿಸುವ ಬದಲಾವಣೆಗಳನ್ನು ದಾಖಲಿಸುತ್ತ ಈ ನೆಲದ ಈ ಮೂಲ ಆಶಯ ತಪ್ಪಿದ ದಾರಿಯ ಜಾಡನ್ನು ಓದುಗರಿಗೆ ತೋರಿಸುತ್ತಾರೆ. ಅಧಿಕಾರದಲ್ಲಿರುವವರು ಬಯಸಿದರೆ ಎಂಥಹ ಹೀನ ಕ್ರೌರ್ಯವೂ ದಾಖಲೆಯೇ ಇಲ್ಲದೇ ಮುಚ್ಚಿಹೋಗಿ ಬಿಡಬಹುದೆನ್ನುವುದನ್ನು 1983ರ ಫೆಬ್ರುವರಿಯಲ್ಲಿ ಅಸ್ಸಾಂನ ನೆಲ್ಲಿಯಲ್ಲಿ ಕೋಮು ಗಲಭೆಗೆ ಬಲಿಯಾದವರ ಅಂಕಿ ಸಂಖ್ಯೆಗಳು ದಾಖಲೆಗೇ ಸಿಗದಂತೆ ಕಾಣೆಯಾಗಿರುವುದನ್ನು ಉಲ್ಲೇಖಿಸುತ್ತಾರೆ.

ಗುಜರಾತ್ ರಾಜ್ಯದ ಜನಸಂಖ್ಯೆಯಲ್ಲಿ ಶೇಕಡಾ 10% ಇರುವ ಮುಸಲ್ಮಾನರು ಹೇಗೆ ಪರಿಸ್ಥಿತಿಯ ಕೈಗೊಂಬೆಗಳಾಗಿ ಬದುಕುವ ಹಂತಕ್ಕೆ ತಲುಪಿದ್ದಾರೆ ಮತ್ತು ವಿಚಿತ್ರವಾದ ನಿಯಂತ್ರಿತ ಅಸ್ತಿತ್ವ ದಲ್ಲಿ ಬದುಕುತ್ತಿದ್ದಾರೆ ಎಂಬುದನ್ನು ಎಳೆ ಎಳೆಯಾಗಿ ಬಿಡಿಸಿಡುತ್ತಾರೆ.

ಅದರ ಜೊತೆಯೇ ಈ ನೆಲದಲ್ಲಿ ಹುಟ್ಟಿದ, ನೆಲವನ್ನು ನೆಲದ ಮೂಲ ಆಶಯದೊಂದಿಗೆ ಪ್ರೀತಿಸುವವರಿಗೆ ಇನ್ನೂ ಇಲ್ಲಿ ಉಳಿದಿರುವ ಭರವಸೆಯ ಬೆಳಕಿರಣಗಳನ್ನು ತೋರಿಸಲು ಮರೆಯುವುದಿಲ್ಲ. ಅಂಥಹುದರಲ್ಲಿ ಒಂದು '2006ರ ಮಾರ್ಚ್ 7ರಂದು ಹೋಳಿ ಹಬ್ಬದ ಒಂದು ವಾರ ಮೊದಲು ಗಂಗಾನದಿಯ ತೀರದ ಕಾಶೀ ನಗರದಲ್ಲಿ ಎರಡು ಕಡೆ ಬಾಂಬ್ ಸ್ಫೋಟವಾಗಿತ್ತು. ಇಡೀ ದೇಶ ಬೆಚ್ಚಿ ಬಿದ್ದಿತ್ತು.23 ಜನರು ಬಾಂಬ್ ಸ್ಫೋಟಕ್ಕೆ ಬಲಿಯಾದರು. ಮುಂದಾಗುವುದನ್ನು ನೆನೆದು ತತ್ತರಿಸಿತ್ತು. ಆದರೆ ಸಂಗೀತ, ಕಾವ್ಯ ಭಕ್ತಿ ಮತ್ತು ಧಾರ್ಮಿಕತೆಗೆ ಪ್ರಸಿದ್ಧವಾದ ಕಾಶಿಯಲ್ಲಿ ಪ್ರತೀಕಾರ ಭೂಗಿಲೇಳಲಿಲ್ಲ. ಬಾಂಬ್ ಸ್ಫೋಟವಾದ 40 ನಿಮಿಷಗಳಲ್ಲಿ ಅದೇ ಸಂಕಟ್ ವಿಮೋಚನ ದೇವಾಲಯದಲ್ಲಿ ತಮ್ಮ ದೇವರ ದರ್ಶನವನ್ನು ಮುಂದುವರೆಸಿದರು. ದೇವಾಲಯದ ಮಹಂತರು ಸಮಚಿತ್ತದಿಂದ, ಶಾಂತರೀತಿಯಲ್ಲಿ ದೇವಾಲಯದ ನಿತ್ಯ ಕೆಲಸಗಳನ್ನು ಮುಂದುವರೆಸಿ ಜಾತಿ ಧರ್ಮದ ಬೇಧವಿಲ್ಲದೇ ಎಲ್ಲ ಭಕ್ತರಿಗೂ ದರ್ಶನಕ್ಕೆ ಅವಕಾಶ ಕಲ್ಪಿಸಿದರು. ಬಾಂಬ್ ಸ್ಫೋಟದ ಹಿಂದಿನ ಉದ್ದೇಶವನ್ನು ವಿಫಲಗೊಳಿಸಿದರು. ಆ ಸಂದರ್ಭದಲ್ಲಿ ದೇವಸ್ಥಾನಕ್ಕೆ ಬರಲು ಪ್ರಯತ್ನಿಸಿದ ಧಾರ್ಮಿಕ ಮತ್ತು ರಾಜಕೀಯ ನಾಯಕರನ್ನು ದೂರ ಇರಿಸಿದರು.ಶಾಂತಿಮತ್ತು ಸಮಾಧಾನ ಕಾಯ್ದುಕೊಳ್ಳುವಂತೆ ಮಹಂತರು ನೀಡಿದ ಕರೆಯು ಇಡೀ ದೇಶದಲ್ಲಿ ಉಬ್ಬರವನ್ನು ಇಳಿಸಿಬಿಟ್ಟಿತು. ಕಾಶಿ ಬಾಂಬ್ ಸ್ಫೋಟದ ನಂತರ ಸಿಟಿಝುನ್ಸ್ ಫಾರ್ ಜಸ್ಟೀಸ್ ಸಂಸ್ಥೆಯು ಮಹಂತರನ್ನು ಮುಂಬೈಗೆ ಆಹ್ವಾನಿಸಿತ್ತು. ಅಲ್ಲಿ ಅವರು ಮತ್ತು ಪಂಜಾಬಿನ ಮುಫ್ತಿ ಅವರು ಜಂಟಿಯಾಗಿ 'ಬಾಂಬ್ ಸ್ಫೋಟ, ಗುಂಪು ಗಲಭೆ ಮತ್ತು ದ್ವೇಷಪೂರಿತ ಹಿಂಸಾಚಾರವನ್ನು ಕೊನೆಗೊಳಿಸುವಂತೆ; ಗಟ್ಟಿ ಸ್ವರದಲ್ಲಿ ಕರೆ ನೀಡಿದ್ದರು. ಒಂದು ದೇಶದ ಪ್ರಜೆಯಾಗುವುದು ಎಂದರೆ ಇದೇ, ಸಂವಿಧಾನದ ಅನುಸಾರವೇ ಆಡಳಿತ ನಡೆಯುವಂತೆ ಎಚ್ಚರ ವಹಿಸುವುದು ಆಗ್ರಹಿಸುವುದು ಹಾಗೂ ಅದಕ್ಕೆ ಬೇಕಾದ ಚಟುವಟಿಕೆಗಳಲ್ಲಿ ಕ್ರಿಯಾಶೀಲವಾಗಿ ತೊಡಗಿಸಿಕೊಳ್ಳುವುದು' ಈ ಘಟನೆಯನ್ನು ತಮ್ಮ ಪುಸ್ತಕದಲ್ಲಿ ತೀಸ್ತಾ ದಾಖಲಿಸುತ್ತಾರೆ. ಮತ್ತು ನಮ್ಮೆದೆಯೊಳಗೆ ಭರವಸೆಯ ಬೆಳಕು ನಂದದಂತೆ ಕಂದೀಲು ಹಚ್ಚುತ್ತಾರೆ.

ಗಾಂಧಿ ಹುಟ್ಟಿದ ನಾಡಿನಲ್ಲಿ ಹಿಂಸೆ ವಿಜ್ರಂಭಿಸಿದ ವಿಷಯ ಅಚಾನಕ್ ಸಂಭವಿಸಿದ್ದುದಲ್ಲ ಎಂಬುದನ್ನು ಅದನ್ನು ಸೂಕ್ಷ್ಮವಾಗಿ ಗಮನಿಸಿದವರು ಅರ್ಥ ಮಾಡಿಕೊಳ್ಳಬಲ್ಲರು. ಹಾಗೆ ಅರ್ಥ ಮಾಡಿಕೊಂಡ ಮತ್ತು ಪ್ರಭುತ್ವವೇ ಪ್ರಾಯೋಜಿಸಿದ ಹಿಂಸಾಕಾಂಡಕ್ಕೆ ಬಲಿಯಾದವರನ್ನು ಪ್ರತ್ಯಕ್ಷ ಕಂಡದ್ದನ್ನು ಕಂಡ ಹಾಗೆ ವರದಿ ಮಾಡಿದ್ದಷ್ಟೇ ಅಲ್ಲದೇ ಸಾಮೂಹಿಕ ಹತ್ಯಾಕಾಂಡಕ್ಕೆ ನ್ಯಾಯ ಒದಗಿಸಲು ಕಡು ಕಷ್ಟಗಳ ಮಧ್ಯೆಯೇ ಹೆಣಗುತ್ತಿರುವ ತೀಸ್ತಾ ನಮ್ಮೆದುರಿನ ಭರವಸೆಯ ಬೆಳಕು. ನಾನೊಬ್ಬಳು ಪತ್ರಕರ್ತೆ ನನ್ನ ಕೆಲಸ ವರದಿ ಮಾಡುವುದಷ್ಟೆ, ಅಲ್ಲಿಯೂ ಅಪರಾಧ ಮಾಡಿದವರಿಗೆ ಹೆಚ್ಚು ಮುಜುಗರವಾಗದಂತೆ ತೆಳುವಾಗಿ ಒಂದಿಷ್ಟು ದಾಖಲಿಸಿದರಾಯಿತೆನ್ನುವ ಹಗುರ ಧೋರಣೆಯನ್ನು ಎಲ್ಲಿಯೂ ಅನುಸರಿಸದೇ, ವಸ್ತುನಿಷ್ಟ ಮತ್ತು



ಸತ್ಯನಿಷ್ಟ ವರದಿಗಾರಿಕೆಯನ್ನು ಮಾಡಿದ್ದಷ್ಟೇ ಅಲ್ಲದೇ ತಾವೇ ಹೊರತಂದ ಕಮ್ಯುನಲಿಸಂ ಕೊಂಬ್ಯಾಟ್ ನಿಯತಕಾಲಿಕದ ಮೂಲಕ ಹಿಂಸಾಕಾಂಡದ ಬೇರುಗಳನ್ನೇ ಜಗತ್ತಿನ ಮುಂದಿಟ್ಟರು. ಇದರಿಂದಾಗಿ ಜೀವ ಬೆದರಿಕೆಯೂ ಸೇರಿದಂತೆ ಹಲವು ರೀತಿಯ ಕಿರುಕುಳಗಳನ್ನು ಎದುರಿಸುತ್ತಲೇ ಮುನ್ನುಗ್ಗುತ್ತಿದ್ದಾರೆ. ಈ ಕೃತಿ ಹೊರಬರುವ ಹೊತ್ತಿನಲ್ಲಿಯೆ ಗುಜರಾತ್ ಕೋಮುಗಲಭೆಗಳ ದಿನಗಳಲ್ಲಿ ಸಾಮೂಹಿಕ ಅತ್ಯಾಚಾರಕ್ಕೀಡಾಗಿದ್ದ ಬಿಲ್ಕಿಸ್ ಬಾನು ಎಂಬ ಮಹಿಳೆಗೆ 50 ಲಕ್ಷ ರೂಪಾಯಿಗಳ ಪರಿಹಾರ ಮತ್ತು ವಾಸಕ್ಕೆ ಅವಳ ಆಯ್ಕೆಯ ಪ್ರದೇಶದಲ್ಲಿ ಅನುಕೂಲ ಕಲ್ಪಿಸಿ ಕೊಡಲು ಗುಜರಾತ್ ಸರ್ಕಾರಕ್ಕೆ ಸರ್ವೋಚ್ಚ ನ್ಯಾಯಾಲಯದ ಆದೇಶ ಹೊರ ಬಿದ್ದಿದೆ. ಇದೂ ಒಂದು ಸಣ್ಣ ಸಮಾಧಾನ ನೀಡುವ ಸಂಗತಿಯೇ.

ಈ ಕಥಾನಕವನ್ನು ಪ್ರಜಾಪ್ರಭುತ್ವದ ಉಳಿವಿಗಾಗಿನ ಸಂಘರ್ಷದ ದಾಖಲೆಯೆನ್ನಬೇಕು. ಅಂಥಹ ಒಂದು ಅನುಭವದ ಕಣಜ ತೀಸ್ತಾ ಸೆತಲ್‌ವಾಡ ರವರ 'ಫುಟ್ ಸೋಲ್ಜರ್ ಆಫ್ ದಿ ಕಾನ್ಸ್ಟಿಟ್ಯೂಷನ್' ಕೃತಿಯನ್ನು ಕ್ರಿಯಾ ಮಾಧ್ಯಮ ಕನ್ನಡದಲ್ಲಿ ಹೊರತಂದಿದೆ. ಎಸ್.ಸತ್ಯಾ ರವರ ಭಾಷಾಂತರದಲ್ಲಿ 'ಸಂವಿಧಾನದ ಕಾಲಾಳು' ಮೇ 18 ರಂದು ಬೆಂಗಳೂರಿನಲ್ಲಿ ಬಿಡುಗಡೆಯಾಗಲಿದೆ. ಅದರ ಜೊತೆಯೇ ಪ್ರಜಾಪ್ರಭುತ್ವದ ಫಲಾನುಭವಿಗಳಾದ ನಮ್ಮ ಮೇಲೆ ಇರುವ ಅದನ್ನು ಕಾಪಾಡಿಕೊಳ್ಳುವ ಹೊಣೆಯ ಬಗ್ಗೆ ಚರ್ಚಿಸಲು–'ಪ್ರಜಾಪ್ರಭುತ್ವದ ರಕ್ಷಣೆಯಲ್ಲಿ ನಾವು–ನೀವು' ವಿಷಯದ ಮೇಲೆ ವಿಚಾರ ಸಂಕಿರಣವೂ ನಡೆಯುತ್ತಿದೆ. ವಿಚಾರ ಸಂಕಿರಣದಲ್ಲಿ ತೀಸ್ತಾರವರು ಮತ್ತು ಪ್ರೊ.ಮುಝಫರ್ ಅಸ್ಸಾದಿರವರು ಪಾಲ್ಗೊಳ್ಳಲಿದ್ದಾರೆ. ಪ್ರೊ.ಬಿ.ಕೆ.ಚಂದ್ರಶೇಖರ್ ರವರು ಅಧ್ಯಕ್ಷತೆ ವಹಿಸಿ ಪುಸ್ತಕ ಬಿಡುಗಡೆ ಮಾಡುತ್ತಿದ್ದು ಪುಸ್ತಕವನ್ನು ಕುರಿತು ಶಿವಸುಂದರ್ ರವರು ಮಾತನಾಡಲಿದ್ದಾರೆ.

■

ಬಂಡವಾಳದ ಮಹತ್ವ.... ಪುಟ 5 ರಿಂದ

ಬುದ್ಧಿಪ್ರಸಾದ್ ಭಟ್). 'ಬಂಡವಾಳ' ಸಂಪುಟ 1ರ ಮೊದಲ ಪೂರ್ಣ ಬಂಗಾಳಿ ಅನುವಾದವನ್ನು ಪಿಯೂಶ್ ದಾಸಗುಪ್ತಾ ಅವರು ಮಾಡಿದ್ದು, 1955 ರಲ್ಲಿ ಕಲ್ಕತ್ತಾದ ಬಾನಿ ಪ್ರಕಾಶನದಿಂದ ಪ್ರಕಟವಾಗಿತ್ತು. ಎರಡನೇ ಮುದ್ರಣ 1981 ರಲ್ಲಿ, 3ನೇ ಮುದ್ರಣ 1986 ರಲ್ಲಿ ಮತ್ತು 4ನೇ ಮುದ್ರಣ 2009 ರಲ್ಲಿ ಪ್ರಕಟಿತವಾಗಿತ್ತು. ಮಾಸ್ಕೋದ ಪ್ರಗತಿ ಪ್ರಕಾಶನ ಸಹ ಮೊದಲ ಸಂಪುಟವನ್ನು 1988ರಲ್ಲಿ ಎರಡನೇ ಸಂಪುಟವನ್ನು 1989ರಲ್ಲಿ ಮತ್ತು ಸಂಪುಟ–3ನ್ನು ಆ ಮೇಲೆ ಪ್ರಕಟಿಸಿತು. ಎರಡೂ ಬಂಗಾಳಿ ಅನುವಾದದ ಭಾಗಗಳು ಪಿಡಿಎಫ್ ರೂಪದಲ್ಲಿ ನೆಟ್ ನಲ್ಲಿ ಲಭ್ಯ ಇವೆ. ಉರ್ದುವಿನಲ್ಲಿ ಸೈಯದ್ ಮಹಮ್ಮದ್ ತಾಕಿ ಅವರ ಅನುವಾದವನ್ನು 1961ರಲ್ಲಿ ಲಾಹೋರಿನ ದಾರ್–ಉಲ್ ಶೌರ್ ಪ್ರಕಾಶನ ಪ್ರಕಟಿಸಿದೆ. ಅದರ ಹಲವು ಆವೃತ್ತಿಗಳು ಬಂದಿದ್ದು 2011ರಲ್ಲಿ ಇತ್ತೀಚಿನ ಆವೃತ್ತಿ ಪ್ರಕಟವಾಗಿದೆ. ಪಂಜಾಬಿಯಲ್ಲಿ ಸಹ 'ಬಂಡವಾಳ'ದ ಮೂರು ಸಂಪುಟಗಳು ಪ್ರಕಟವಾಗಿವೆ. ಮೊದಲ ಸಂಪುಟವನ್ನು ದೆಹಲಿಯ ಪ್ರಸಿದ್ಧ ನವಯುಗ ಪ್ರಕಾಶನ 1975ರಲ್ಲಿ ಪ್ರಕಟಿಸಿತು. 'ಬಂಡವಾಳ'ದ ಅನುವಾದವನ್ನು ನಾಲ್ಕು ಪಂಜಾಬಿ ಲೇಖಕರು – ಗುರುಬಚನ್ ಸಿಂಗ್ ಭುಲ್ಲರ್, ಪ್ಯಾರಾ ಸಿಂಗ್ ಸೆಹ್ರಾಯಿ, ಕರಂಜಿತ್ ಸಿಂಗ್, ಪ್ರೇಮ್ ಸಿಂಗ್ – ನಿರ್ವಹಿಸಿದರು.

ಮಾರ್ಕ್ಸ್ ಅವರ 150ನೇ ಹುಟ್ಟುಹಬ್ಬದಂದು (ಮೇ 5, 1968) 'ಬಂಡವಾಳ'ದ ಮಲಯಾಳಂ ಅನುವಾದದ ಬಿಡುಗಡೆ ಆಯಿತು. 'ಬಂಡವಾಳ' ಸಂಪುಟ 1ರ ತೆಲುಗು ಅನುವಾದ ಸೆಪ್ಟೆಂಬರ್ 1996ರಲ್ಲಿ ಪ್ರಕಟವಾಯಿತು. ಇದರಲ್ಲಿ 5 ಅನುವಾದಕರು ಭಾಗವಹಿಸಿದ್ದು, ಇದು ಮೊದಲಿಗೆ ಮಾಸ್ಕೋದ ಪ್ರಗತಿ ಪ್ರಕಾಶನ ಮತ್ತು ವಿಶಾಲಾಂಧ್ರ ವಿಜ್ಞಾನ ಸಮಿತಿಯ ಜಂಟಿ ಯೋಜನೆಯಾಗಿದ್ದು, ಕೊನೆಗೆ ವಿಶಾಲಾಂಧ್ರ ವಿಜ್ಞಾನ ಸಮಿತಿ ಒಂದೇ ಅದನ್ನು ಪ್ರಕಟಿಸಿತು. ನವೆಂಬರ್ 1998 ಮತ್ತು ಅಕ್ಟೋಬರ್ 2000ದಲ್ಲಿ 'ಬಂಡವಾಳ' ಸಂಪುಟ 2 ಮತ್ತು 3 ಅನುಕ್ರಮವಾಗಿ ಪ್ರಕಟವಾದವು. 'ಬಂಡವಾಳ'ದ ಈ ನೇರ ಅನುವಾದವಲ್ಲದೆ, 'ಬಂಡವಾಳ'ವನ್ನು ಸರಳವಾಗಿ ವಿವರಿಸುವ ಅರ್ಥೈಸುವ ಪ್ರಸಿದ್ಧ ತೆಲುಗು ಲೇಖಕಿ ರಂಗನಾಯಕಮ್ಮ ಅವರ ನಾಲ್ಕು ಸಂಪುಟಗಳು ಸಹ 'ಬಂಡವಾಳ'ದ ವಿಶ್ಲೇಷಣೆಗಳನ್ನು ಜನಸಾಮಾನ್ಯರತ್ತ ಒಯ್ಯುವಲ್ಲಿ ದೊಡ್ಡ ಪಾತ್ರ ವಹಿಸಿವೆ. ತಮಿಳು ಅನುವಾದವನ್ನು ಮಾರ್ಕ್ಸ್ ಅವರ 180ನೇ ಹುಟ್ಟುಹಬ್ಬದಂದು (ಮೇ 5, 1998) ಬಿಡುಗಡೆ ಮಾಡಲಾಯಿತು. ತ್ಯಾಗರಾಜನ್ ಎಂಬುವರು ಜೈಲಿನಲ್ಲಿದ್ದಾಗ ಈ ಅನುವಾದವನ್ನು ಮಾಡಿದ್ದು ಆ ಮೇಲೆ ಕೃಷ್ಣಯ್ಯ ಎಂಬುವರು ಅದನ್ನು ಪರಿಷ್ಕರಿಸಿ, ನ್ಯೂ ಸೆಂಚುರಿ ಬುಕ್ ಹೌಸ್ ಅದನ್ನು ಪ್ರಕಟಿಸಿತು.

'ಬಂಡವಾಳ' ಸಂಪುಟ 1ರ ಒಡಿಯಾ ಅನುವಾದವನ್ನು ಸೆಪ್ಟೆಂಬರ್ 2010ರಲ್ಲಿ ಒಡಿಶಾ ಲೋಕಶಿಕ್ಷಣ ಟ್ರಸ್ಟ್ ಪ್ರಕಟಿಸಿತು. ಪ್ರಮುಖ ಭಾರತೀಯ ಭಾಷೆಗಳಲ್ಲಿ ಮರಾಠಿ, ಗುಜರಾತಿ, ಅಸ್ಸಾಮಿ, ಗಳನ್ನು ಬಿಟ್ಟರೆ, (ಆ ಬಗ್ಗೆ ಖಚಿತ ಮಾಹಿತಿ ಸಿಕ್ಕಿಲ್ಲ) ಬಹುಶಃ 'ಬಂಡವಾಳ'ದ ಅನುವಾದ ಪ್ರಕಟವಾಗುತ್ತಿರುವ ಪ್ರಮುಖ ಭಾರತೀಯ ಭಾಷೆಗಳಲ್ಲಿ ಕನ್ನಡವೇ ಕೊನೆಯದು ಇರಬೇಕು.

●

ಇರಾನ್ ತೈಲ: ಅಮೆರಿಕದ ಆರ್ಥಿಕ ಸಮರ

ಇರಾನ್ ಜತೆ ಘನಿಷ್ಟ ಸಂಬಂಧ ಹೊಂದಿರುವ ಮತ್ತು ಇರಾನ್ ನ್ಯೂಕ್ಲಿಯರ್ ಒಪ್ಪಂದ ಮಾತುಕತೆಯಲ್ಲಿ ಭಾಗವಹಿಸಿದ ಪ್ರಮುಖ ರಾಷ್ಟ್ರಗಳಾದ ಯುಕೆ, ಜರ್ಮನಿ, ಫ್ರಾನ್ಸ್, ರಶ್ಯ ಮತ್ತು ಚೀನಾ ಅಮೆರಿಕದ ಬ್ಲಾಕ್ ಮೇಲ್ ಗೆ ಪ್ರತಿರೋಧ ಒಡ್ಡಲಿವೆ. ಅಮೆರಿಕ 'ಸ್ವಿಫ್ಟ್' ಎಂಬ ಹಣಕಾಸು ಜಾಲದ ಮೇಲೆ ಒತ್ತಡ ಹಾಕಿ ಇರಾನಿನ ಅಂತರ್‍ರಾಷ್ಟ್ರೀಯ ಹಣಕಾಸು ವ್ಯವಹಾರಕ್ಕೆ ತಡೆ ಒಡ್ಡುವುದರ ವಿರುದ್ಧ ಪ್ರತಿರೋಧಿಸಲು ಸಿದ್ಧವಾಗಿವೆ. ಇದಕ್ಕಾಗಿ 'ಸ್ವಿಫ್ಟ್' ಗೆ ಪ್ರತಿಯಾಗಿ 'ಇನ್‌ಸ್ಟೆಕ್ಸ್' ಎಂಬ ಜಾಲವನ್ನು ಕಟ್ಟಿವೆ. ಇದನ್ನು ಇರಾನಿಗೆ ಔಷಧಿ ಮತ್ತು ಆಹಾರದ ರಫ್ತಿಗಾಗಿ ಆಗಲೇ ಬಳಸುತ್ತಿದೆ. ತಮ್ಮ ಆರ್ಥಿಕ ನಷ್ಟ ಮಾಡಿಕೊಂಡು ಅಮೆರಿಕದ ರಾಜಕೀಯ ಉದ್ದೇಶಗಳಿಗೆ ತಲೆಬಾಗುವ ಯೋಚನೆ ಈ ದೇಶಗಳಿಗಿಲ್ಲ. ಭಾರತದಿಂದ ಇರಾನಿಗೆ ಔಷಧಿ ರಫ್ತು ಮೌಲ್ಯ 5.2 ಕೋಟಿ ಡಾಲರುಗಳು. ಭಾರತ ಬಂಡವಾಳ ಹೂಡಿ ಇರಾನಿನಲ್ಲಿ ಚಬಹರ್ ಬಂದರನ್ನು ನಿರ್ಮಿಸಿದೆ. ಇರಾನಿನ ಮೇಲೆ ದಿಗ್ಬಂಧನದಲ್ಲಿ ಭಾಗವಹಿಸಿದರೆ ಈ ಬಂದರಿನ ಹೂಡಿಕೆ ವ್ಯರ್ಥವಾಗುತ್ತದೆ. ಆದ್ದರಿಂದ ಅಗ್ಗದ ತೈಲ ಆಮದು ಅಲ್ಲದೆ, ಇತರ ಆರ್ಥಿಕ ಹಿತಾಸಕ್ತಿಗಳನ್ನು ಗಮನದಲ್ಲಿಟ್ಟುಕೊಂಡು ಭಾರತವೂ ಈ ನಿಟ್ಟಿನಲ್ಲಿ ಯೋಚಿಸಬೇಕು.





ನಾಗರಾಜ ನಂಜುಂಡಯ್ಯ

ಟ್ರಂಪ್ ಆಡಳಿತವು ಇರಾನ್ ಮೇಲೆ ಆರ್ಥಿಕ ನಿರ್ಬಂಧಗಳನ್ನು ಹೇರಿ ಸಮರವನ್ನು ಸಾರಿದೆ. ಜಾಗತಿಕವಾಗಿ ಕುಸಿಯುತ್ತಿರುವ ತನ್ನ ಯಜಮಾನಿಕೆಯನ್ನು ಪುನಃ ಪ್ರತಿಷ್ಠಾಪನೆ ಮಾಡುವ ನಿಟ್ಟಿನಲ್ಲಿ ಇರಾನ್‌ನೊಂದಿಗಿನ ಸಮರ ಅಮೆರಿಕಾಕ್ಕೆ ಪ್ರತಿಷ್ಠೆಯಾಗಿದೆ. ಈ ಸಮರದಲ್ಲಿ ಭಾರತ ಪಾಲ್ಗೊಳ್ಳದಿರಲಿ ಎಂದು ಆಗ್ರಹಿಸಬೇಕಾಗಿದೆ. ಏಕೆಂದರೆ, ಅಮೆರಿಕಾದ ವ್ಯೂಹಕ್ಕೆ ಸಿಕ್ಕಿ ಹಾಕಿಕೊಂಡರೆ, ಅದು ನಮ್ಮ ದೇಶದ ಆರ್ಥಿಕ ತೆಗೆ ಅಪಾಯ ತಂದೊಡ್ಡುವ ಸಂಭವ ಹೆಚ್ಚಾಗಿರುತ್ತದೆ.

ಅಮೆರಿಕಾ ನಿರ್ದಯವಾಗಿ ರಾಷ್ಟ್ರಗಳ ಆರ್ಥಿಕತೆಯನ್ನು ಮತ್ತು ಸಾರ್ವಭೌಮತ್ವವನ್ನು ನಾಶ ಮಾಡುವ ಪ್ರಯತ್ನದಲ್ಲಿ ಮುಂದುವರಿದಿದೆ. ಇದು ಸಾಮ್ರಾಜ್ಯಶಾಹಿಯ ಧೋರಣೆಗಳಿಗೆ ಅನುಗುಣವಾದ ಮಾರ್ಗಸೂಚಿಯಾಗಿದೆ ಎಂಬುದು ಜಗತ್ತಿಗೆ ಗೊತ್ತಿರುವ ಸಂಗತಿ. ಇದೀಗ, ಅಮೆರಿಕಾವು ಇರಾನನ್ನು ತನ್ನ "ಗುರಿಯನ್ನಾಗಿ" ಇಟ್ಟು ಕೊಂಡು, ಅದರ ಸಾರ್ವಭೌಮತ್ವವನ್ನು ನಾಶಮಾಡಲು ಹೊರಟಿದೆ ಎಂಬುದು ಜಗಜ್ಜಾಹಿರವಾಗಿರುವ ವಿಚಾರ. ಈ ಹಿನ್ನೆಲೆಯಲ್ಲಿಯೇ, ಇರಾನ್‌ನೊಂದಿಗಿನ 2015ರ ನ್ಯೂಕ್ಲಿಯರ್ ಒಪ್ಪಂದದಿಂದ ಅದು ಎಲ್ಲಾ ನಿಯಮಗಳನ್ನು ಉಲ್ಲಂಘಿಸಿ ಹೊರ ಬಂದಿತು.

ಆದರೀಗ, ಜಾಗತಿಕ ತೈಲ ಸರಬರಾಜು ಮತ್ತು ಅದರ ಬೆಲೆಗಳನ್ನು ತನ್ನ ಕೌಶಲ್ಯದಿಂದ ನಿಯಂತ್ರಿಸಲು ಅಮೆರಿಕಾ ವ್ಯೂಹವನ್ನು ರಚಿಸಿಕೊಂಡಿದೆ. ಈ ವ್ಯೂಹದಲ್ಲಿ ಭಾರತವು ಸಿಕ್ಕಿ ಹಾಕಿಕೊಂಡಿದೆ. ಪ್ರಸ್ತುತ ಜಾಗತಿಕ ತೈಲ ಮಾರುಕಟ್ಟೆಗೆ ಇರಾನಿನ ಕೊಡುಗೆ ಅಪಾರವಾಗಿದೆ. ಇದು, ಮೂರನೆ ಅತಿ ದೊಡ್ಡ ತೈಲ ರಫ್ತು ಮಾಡುವ ರಾಷ್ಟ್ರವಾಗಿದೆ. ಇರಾನ್ ರಫ್ತು ಮಾಡುತ್ತಿರುವ ರಾಷ್ಟ್ರಗಳಲ್ಲಿ ಪ್ರಮುಖವಾಗಿ ಭಾರತ ಮತ್ತು ಚೀನಾವು ಒಳಗೊಂಡಿದೆ.

ಪಶ್ಚಿಮ ಏಷಿಯಾದಲ್ಲಿನ ತನ್ನ ಆತ್ಮೀಯ ಮಿತ್ರ ರಾಷ್ಟ್ರಗಳಾದ, ಸೌದಿ ಮತ್ತು ಯುಎಇ ರಾಷ್ಟ್ರಗಳು ತಮ್ಮ ತೈಲ ಬಾವಿಗಳಿಂದ ಹೆಚ್ಚು ತೈಲವನ್ನು "ಪಂಪ್ ಮಾಡುವ" ಮೂಲಕ, ಸರಬರಾಜು ಮಾಡಿದರೆ, ಇರಾನಿನ ಮೂಲಕ ಆಮದು ಮಾಡಿಕೊಳ್ಳುತ್ತಿದ್ದ ದೇಶಗಳಲ್ಲಿ ಉಂಟಾಗ ಬಹುದಾದ ತೈಲ ಕೊರತೆಯ ಅಂತರವನ್ನು ತುಂಬಲು ಸಾಧ್ಯವಿದೆ ಎಂಬ ಲೆಕ್ಕಾಚಾರ ವನ್ನು ಅಮೆರಿಕಾ ಹಾಕುತ್ತಿದೆ.

ಆದರೆ, ಪಶ್ಚಿಮ ಏಷಿಯಾ ರಾಷ್ಟ್ರಗಳಾದ ಸೌದಿ ಮತ್ತು ಯುಎಇ ತಮ್ಮ ತೈಲ ನಿಕ್ಷೇಪಗಳಿಂದ ಪಂಪ್ ಮಾಡಿ, ತಮ್ಮ ತೈಲ ಬಾವಿಗಳನ್ನು ಖಾಲಿ ಮಾಡಿ ಕೊಳ್ಳಲು ಇಷ್ಟಪಡುತ್ತಿಲ್ಲ. ಏಕೆಂದರೆ, ಇದರಿಂದ, ಈ ರಾಷ್ಟ್ರಗಳ ಆರ್ಥಿಕತೆಗೆ ಏನು ಲಾಭವಾಗುವುದಿಲ್ಲ. ಬದಲಿಗೆ, ಇವುಗಳ ತೈಲ ನಿಕ್ಷೇಪಗಳು ಬರಿದಾಗುತ್ತವೆ ಜೊತೆಗೆ, ತೈಲಗಳ ಬೆಲೆಯು ಕೂಡಾ ಕುಸಿಯುತ್ತದೆ. ಏಕೆಂದರೆ ಇರಾನ್ ಕಡಿಮೆ ಬೆಲೆಗೆ ತೈಲವನ್ನು ರಫ್ತು ಮಾಡುತ್ತಿದೆ ಅದೇ ಬೆಲೆಯಲ್ಲಿ ಅಮೆರಿಕಾ ಹೇಳಿದಂತೆ ರಫ್ತು ಮಾಡಲು ಒಪ್ಪಿಕೊಂಡರೆ, ಸೌದಿ ಅರೇಬಿಯಾ ಮತ್ತು ಯುಎಇಗೆ ತೈಲ ಬೆಲೆಗಳ ನಿಯಂತ್ರಣ ಗಳಿಂದ ಭಾರಿ ನಷ್ಟ ಉಂಟಾಗುತ್ತದೆ. ಅವರ ಆರ್ಥಿಕತೆಯ ಮೇಲೆ ಗಂಭೀರ ಪರಿಣಾಮ ಬೀರುತ್ತದೆ ಎಂಬ ಆತಂಕ. ಜೊತೆಗೆ ಅಮೆರಿಕಾದ ಬ್ಲಾಕ್ ಮೇಲ್ ನೀತಿಯನ್ನು ತಿಳಿದಿರುವ ಈ ಮಿತ್ರ ರಾಷ್ಟ್ರಗಳು, ಅಂತರರಾಷ್ಟ್ರೀಯ ಸಂಬಂಧಗಳನ್ನು ಕೆಡಿಸುವ ಈ ರೀತಿಯ ಮಾರ್ಗಗಳನ್ನು ಒಪ್ಪುತ್ತಿಲ್ಲ. ಇದು ಅಮೆರಿಕಾಕ್ಕೆ ತೀವ್ರ ತಲೆ ನೋವಾಗಿ ಪರಿಣಮಿಸಿದೆ. ಆದರೆ, ಹೆಚ್ಚಿನ ಬೆಲೆಗೆ ರಫ್ತು ಮಾಡಲು ಈ ಎರಡೂ ರಾಷ್ಟ್ರಗಳು ತುದಿಗಾಲಲ್ಲಿ ನಿಂತಿವೆ.

ಇರಾನ್ ಮೇಲೆ ಆರ್ಥಿಕ ನಿರ್ಬಂಧಗಳನ್ನು ಹೇರಿದ ನಂತರ, ಈ ದೇಶದಿಂದ ತೈಲವನ್ನು ಯಥೇಚ್ಛವಾಗಿ ಆಮದು ಮಾಡಿಕೊಳ್ಳುತ್ತಿದ್ದ ದೇಶಗಳಲ್ಲಿ ಪ್ರಮುಖವಾಗಿ, ಭಾರತ, ಚೀನಾ, ಟರ್ಕಿ, ಜಪಾನ್ ಮತ್ತು ದಕ್ಷಿಣ ಕೊರಿಯಾ, ತೈವಾನ್, ಇಟಲಿ ಮತ್ತು ಗ್ರೀಸ್ ನಂತಹ ತನ್ನ ಮಿತ್ರ ದೇಶಗಳಿಗೆ ಇರಾನ್ ನೊಂದಿಗೆ ಇನ್ನು ಆರು ತಿಂಗಳೊಳಗೆ ತೈಲ ಆಮದನ್ನು ತಡೆಗಟ್ಟಲು ಅಮೆರಿಕವು ಆದೇಶ ಹೊರಡಿಸಿತ್ತು. ಇದರಂತೆ ಮೇ 2, 2019 ಕ್ಕೆ ಈ ವಾಯ್ದೆ ಮುಗಿದಿದೆ. ತೈವಾನ್, ಇಟಲಿ ಮತ್ತು ಗ್ರೀಸ್ ರಾಷ್ಟ್ರಗಳು ಮಾತ್ರ ಈ ಆದೇಶವನ್ನು ಇಲ್ಲಿಯವರೆಗೆ ಪರಿಪಾಲಿಸಿದ್ದಾರೆ. ಇರಾನ್ ನೊಂದಿಗೆ, ಎಲ್ಲಾ ರೀತಿಯ ವಹಿವಾಟುಗಳನ್ನು ಈ ಮೂರು ರಾಷ್ಟ್ರಗಳು ಸ್ಥಗಿತಗೊಳಿಸಿದ್ದಾರೆ. ಆದರೆ, ಭಾರತವನ್ನು ಒಳ ಗೊಂಡಂತೆ ಇನ್ನುಳಿದ 5 ರಾಷ್ಟ್ರಗಳು ಇನ್ನೂ ಯಾವುದೇ ಅಂತಿಮ ತೀರ್ಮಾನಕ್ಕೆ ಬಂದಿಲ್ಲ. ಭಾರತದಲ್ಲಿ ಚುನಾವಣೆ ನಡೆದ ನಂತರ, ಮುಂಬರುವ ಹೊಸ ಸರಕಾರ ತೀರ್ಮಾನ ಕೈಗೊಳ್ಳ ಬೇಕಾಗುತ್ತದೆ.

ಜಗತ್ತಿನಾದ್ಯಂತ, ಮಧ್ಯ ಪ್ರಾಚ್ಯ ರಾಷ್ಟ್ರಗಳನ್ನು ಒಳಗೊಂಡಂತೆ, ಯುಎಸ್ ನ ಬ್ಲಾಕ್‌ಮೇಲ್ ತಂತ್ರವನ್ನು ಯಾವುದೇ ಮಿತ್ರ ರಾಷ್ಟ್ರಗಳು ಪಾಲಿಸಲು ಹಿಂಜರಿಯತ್ತಿವೆ. ಏಕೆಂದರೆ, ಯುಎಸ್ ತನ್ನ ಸ್ನೇಹಿತ ರಾಷ್ಟ್ರಗಳನ್ನು ಬಲವಂತ ಮಾಡುತ್ತಿದೆ ಹಾಗೂ ಇದರ, ನಿರುಪಯುಕ್ತ ನೀತಿಗಳನ್ನು ಗೌರವಿಸಲು ಈ ಮಿತ್ರ ದೇಶಗಳು ಕೂಡಾ ಹಿಂಜರಿಯುತ್ತಿವೆ. ಈ ಹಿನ್ನೆಲೆಯಲ್ಲಿ ಭಾರತವು ಇರಾನ್ ನಿಂದ ಆಮದು ಮಾಡಿಕೊಳ್ಳುತ್ತಿರುವ ತೈಲವನ್ನು ನಿಲ್ಲಿಸುವುದು ಬೇಡ. ಏಕೆಂದರೆ, ತುಂಬಾ ಕಡಿಮೆ ಬೆಲೆಗೆ ತೈಲವನ್ನು ಇರಾನ್ ಭಾರತ ಮತ್ತು ಇನ್ನಿತರೆ ರಾಷ್ಟ್ರಗಳಿಗೆ ರಫ್ತು ಮಾಡುತ್ತಿದೆ ಎಂಬ ಅಂಶವನ್ನು ಯಾರು ಮರೆಯಬಾರದು. ಹಾಗೆಯೇ, ಇರಾನ್ ನೊಂದಿಗೆ ಅಮೆರಿಕಾ ಸಾರಿರುವ ಆರ್ಥಿಕ ಸಮರದಲ್ಲಿ ಪಾಲ್ಗೊಳ್ಳುವುದು ಬೇಡವೆಂದು ಆಗ್ರಹಿಸಬೇಕಾಗಿದೆ. ಸೌದಿ ಅರೇಬಿಯಾ ರಫ್ತು ಮಾಡುವ ಉದ್ದೇಶ ಹೊಂದಿದ್ದರೂ, ಅದು ಒಂದು ಬ್ಯಾರಲ್ ಗೆ 80 ರಿಂದ 85 ಯುಎಸ್ ಡಾಲರ್ ಗೆ ರಫ್ತು ಮಾಡುತ್ತದೆ. ಇದರ ವ್ಯತಿರಿಕ್ತ ಪರಿಣಾಮದಿಂದಾಗಿ ತೈಲದ ಬೆಲೆ ಹೆಚ್ಚಳವಾಗುತ್ತದೆ. ಇದು ನಮ್ಮ ಆರ್ಥಿಕತೆಯ ಮೇಲೂ ಗಂಭೀರ ಪರಿಣಾಮ ಬೀರುತ್ತದೆ.

ಇರಾನಿನ ಪರಮಾಣು ಮಹತ್ವಾಕಾಂಕ್ಷೆಗಳನ್ನು ನಿವಾರಿಸಲು ನಿರ್ಬಂಧಗಳನ್ನು ಹೇರಲಾಗಿದೆ ಎಂದು ತನ್ನ ನಿಲುವನ್ನು ಸಮರ್ಥಿಸಿಕೊಳ್ಳಲು ಅಮೆರಿಕವು, ವಿಶ್ವದ ವಿವಿಧ ರಾಜಧಾನಿಗಳಲ್ಲಿ ಇರುವ ತನ್ನ ಸಂಪರ್ಕ ಜಾಲಗಳನ್ನು ಸಕ್ರಿಯ ಗೊಳಿಸಿದೆ. ಮಾಧ್ಯಮ ಕಂಪನಿಗಳ, ಪಿ.ಆರ್ ಮತ್ತು ಎನ್.ಜಿ.ಓ ಏಜೆನ್ಸಿಗಳ ಸಹಕಾರವನ್ನು ಪಡೆದು, ಇರಾನ್ ಬದಲಿಗೆ ಸೌದಿ ಅರೇಬಿಯಾ ದಿಂದ ತೈಲವನ್ನು ಆಮದು ಮಾಡಿಕೊಳ್ಳಲು ಹಾಗೂ ಇರಾನ್ ಒಂದು 'ರಾಕ್ಷಸ ರಾಷ್ಟ್ರ'ವೆಂಬ ಪರಿಕಲ್ಪನೆಯನ್ನು



ಹಬ್ಬಿಸುವಲ್ಲಿ ಯಶಸ್ವಿಯಾಗಿ ಪ್ರಚಾರ ಮಾಡುವ ಸಾಮರ್ಥ್ಯ ಹೊಂದಿದೆ. ಹೀಗೆ ಅಮೆರಿಕಾವು ಜಾಗತಿಕವಾಗಿ ತನ್ನ ಅಜೆಂಡಾವನ್ನು ಮಾರಾಟ ಮಾಡುತ್ತದೆ. ಜೊತೆಗೆ, ಅಂತರರಾಷ್ಟ್ರೀಯ ವಾಣಿಜ್ಯ, ಬ್ಯಾಂಕಿಂಗ್ ಮತ್ತು ಹಣಕಾಸು ಜಾಲಗಳನ್ನು ನಿಯಂತ್ರಣ ಮಾಡಬಲ್ಲದು. ಇರಾನ್ ರಫ್ತು ಮತ್ತು ಆಮದುಗಳನ್ನು ಸಾಗಿಸುವ ವಿಮೆ ಪತ್ರಗಳನ್ನು ನಿಲ್ಲಿಸಲು ಯುಎಸ್ ಜಾಗತಿಕ ಬಂದರುಗಳು ಮತ್ತು ಹಡಗು ಕಂಪನಿಗಳನ್ನು ಪರಿಣಾಮಕಾರಿಯಾಗಿ ಪ್ರಚೋದಿಸುವ ಸಾಮರ್ಥ್ಯವನ್ನು ಬಳಸಿಕೊಳ್ಳುತ್ತದೆ.

ಇರಾನ್ ಜತೆ ಘನಿಷ್ಟ ಸಂಬಂಧ ಹೊಂದಿರುವ ಮತ್ತು ಇರಾನ್ ನ್ಯೂಕ್ಲಿಯರ್ ಒಪ್ಪಂದ ಮಾತುಕತೆಯಲ್ಲಿ ಭಾಗವಹಿಸಿದ ಪ್ರಮುಖ ರಾಷ್ಟ್ರಗಳಾದ ಯುಕೆ, ಜರ್ಮನಿ, ಫ್ರಾನ್ಸ್, ರಶ್ಯ ಮತ್ತು ಚೀನಾ ಅಮೆರಿಕದ ಬ್ಲಾಕ್ ಮೇಲ್ ಗೆ ಪ್ರತಿರೋಧ ಒಡ್ಡಲಿವೆ. ಅಮೆರಿಕ 'ಸ್ವಿಫ್ಟ್' ಎಂಬ ಹಣಕಾಸು ಜಾಲದ ಮೇಲೆ ಒತ್ತಡ ಹಾಕಿ ಇರಾನಿನ ಅಂತರ್‍ರಾಷ್ಟ್ರೀಯ ಹಣಕಾಸು ವ್ಯವಹಾರಕ್ಕೆ ತಡೆ ಒಡ್ಡುವುದರ ವಿರುದ್ಧ ಪ್ರತಿರೋಧಿಸಲು ಸಿದ್ಧವಾಗಿವೆ. ಇದಕ್ಕಾಗಿ 'ಸ್ವಿಫ್ಟ್' ಗೆ ಪ್ರತಿಯಾಗಿ 'ಇನ್‌ಸ್ಟೆಕ್ಸ್' ಎಂಬ ಜಾಲವನ್ನು ಕಟ್ಟಿವೆ. ಇದನ್ನು ಇರಾನಿಗೆ ಔಷಧಿ ಮತ್ತು ಆಹಾರದ ರಫ್ತಿಗಾಗಿ ಆಗಲೇ ಬಳಸುತ್ತಿದೆ. ಅಮೆರಿಕ 'ಸ್ವಿಫ್ಟ್' ಬಳಸಿ ಇರಾನಿನ ಮೇಲೆ ಹಣಕಾಸು ದಿಗ್ಬಂಧನ ಹಾಕಿದರೆ, ಅದನ್ನು ಇತರ ಸರಕುಗಳಿಗೆ ವಿಸ್ತರಿಸುವ ಯೋಜನೆ ಹೊಂದಿವೆ. ಇರಾನಿಗೆ ಔಷಧಿ ರಫ್ತಿನ ಪ್ರಮಾಣ ಯುರೋಪಿನಿಂದ 88.4 ಕೋಟಿ ಡಾಲರುಗಳು, ಚೀನಾದಿಂದ 19.4 ಕೋಟಿ ಇದೆ ಎಂದು ಗಮನಿಸಬೇಕು. ಆದ್ದರಿಂದ ತಮ್ಮ ಆರ್ಥಿಕ ನಷ್ಟ ಮಾಡಿಕೊಂಡು ಅಮೆರಿಕದ ರಾಜಕೀಯ ಉದ್ದೇಶಗಳಿಗೆ ತಲೆಬಾಗುವ ಯೋಚನೆ ಈ ದೇಶಗಳಿಗಿಲ್ಲ. ಭಾರತದಿಂದ ಔಷಧಿ ರಫ್ತು 5.2 ಕೋಟಿ ಡಾಲರುಗಳು. ಭಾರತ ಬಂಡವಾಳ ಹೂಡಿ ಇರಾನಿನಲ್ಲಿ ಚಬಹರ್ ಬಂದರನ್ನು ನಿರ್ಮಿಸಿದೆ. ಇರಾನಿನ ಮೇಲೆ ದಿಗ್ಬಂಧನದಲ್ಲಿ ಭಾಗವಹಿಸಿದರೆ ಈ ಬಂದರಿನ ಹೂಡಿಕೆ ವ್ಯರ್ಥವಾಗುತ್ತದೆ. ಆದ್ದರಿಂದ ಅಗ್ಗದ ತೈಲ ಆಮದು ಅಲ್ಲದೆ, ಇತರ ಆರ್ಥಿಕ ಹಿತಾಸಕ್ತಿಗಳನ್ನು ಗಮನದಲ್ಲಿಟ್ಟುಕೊಂಡು ಭಾರತವೂ ಈ ನಿಟ್ಟಿನಲ್ಲಿ ಯೋಚಿಸಬೇಕು.

ಚೀನಾವು ಅಮೆರಿಕಾದ ನಿರ್ಬಂಧಗಳನ್ನು ಮತ್ತು ಆದೇಶಗಳನ್ನು ಒಪ್ಪುವುದಿಲ್ಲ. ಏಕೆಂದರೆ, ಚೀನಾದ ಬೆಲ್ಟ್ ಮತ್ತು ರೋಡ್ ಫೋರಂ ನಲ್ಲಿ ಇರಾನ್ ಪಾಲುದಾರನಾಗಿ ಪ್ರಮುಖ ಹೂಡಿಕೆದಾರ ರಾಷ್ಟ್ರವಾಗಿದೆ. ಇದಲ್ಲದೆ, ದೃಢವಾದ ಹಣಕಾಸು ಜಾಲಗಳನ್ನು ಹಾಗೂ ಹೊಸ ಭೂಮಿ ಮಾರ್ಗ ಗಳನ್ನು ಚೀನಾ ಮತ್ತು ಇರಾನ್ ನಿರ್ಮಿಸುತ್ತಿವೆ. ಇದರ ಪರಿಣಾಮ 2016 ರಲ್ಲಿ ಮೊದಲ ಸರಕು ರೈಲು ಚೀನಾದಿಂದ ಇರಾನ್ ಗೆ ತೆರಳಿತ್ತು. ಹೀಗಾಗಿ, ಅಮೆರಿಕಾದ ಏಕಪಕ್ಷೀಯ ನಿರ್ಬಂಧಗಳ ಹೇರುವಿಕೆಯನ್ನು ಚೀನಾ ಬಲವಾಗಿ ವಿರೋಧಿಸಿದೆ.

ಆದರೆ, ಈ ಮಧ್ಯೆ ಇರಾನಿನ ವಿದೇಶಾಂಗ ಮಂತ್ರಿ ಭಾರತಕ್ಕೆ ಭೇಟಿ ನೀಡಿ, ವಿದೇಶಾಂಗ ಮಂತ್ರಿ ಸುಷ್ಮ ಸ್ವರಾಜ್ ರನ್ನು ಭೇಟಿ ಮಾಡಿ ಮಾತುಕತೆ ನಡೆಸಿ ಹೋಗಿದ್ದಾರೆ. ಈ ಹಿನ್ನೆಲೆಯಲ್ಲಿ, ಭಾರತವು ಇರಾನ್ ನಿಂದ ತೈಲ ಆಮದು ನಿಲ್ಲಿಸಬಹುದು. ಆದರೆ, ವಿಶ್ವದಾದ್ಯಂತ ಅಮೆರಿಕದ ಯಜಮಾನಿಕೆಯ ಪ್ರಾಬಲ್ಯಕ್ಕೆ ಪ್ರತಿರೋಧ ಹೆಚ್ಚಾಗಿ ಬೆಳೆಯುತ್ತಿದೆ ಎಂಬುದನ್ನು ಅರ್ಥ ಮಾಡಿಕೊಳ್ಳುವುದು ಸೂಕ್ತ. ಅಮೆರಿಕಾದ ಮೆಚ್ಚುಗೆಗೆ ಪಾತ್ರ ವಾಗಲು ಹೊರಟರೆ, ನಮ್ಮ ಆರ್ಥಿಕತೆಗೆ ಅಪಾಯ ಉಂಟಾಗುತ್ತದೆ. ಆದ್ದರಿಂದ, ಅಮೆರಿಕಾದ ಆರ್ಥಿಕ ಸಮರದಲ್ಲಿ ಭಾರತ ಪಾಲ್ಗೊಳ್ಳದೆ, ಇರಾನ್ ನಿಂದ ತೈಲ ಆಮದು ಮಾಡಿಕೊಳ್ಳುವುದನ್ನು ನಿಲ್ಲಿಸುವುದು ಬೇಡವೆಂದು ನಮ್ಮ ಸರಕಾರವನ್ನು ಆಗ್ರಹಿಸಬೇಕಾಗಿದೆ. ●

ಜ್ಞಾನ ವಿಜ್ಞಾನ

ಜೀವದ ಉಗಮ ಮತ್ತು ವಿಕಾಸ

ಆರ್. ರಾಮಕೃಷ್ಣ

'ಜೀವ'ದ ಉಗಮ ಮತ್ತು ವಿಕಾಸದ ಕುರಿತು ಯೋಚಿಸುವ ಮುನ್ನವೇ 'ಜೀವ' ಎಂದರೇನು ಎಂದು ಸ್ಪಷ್ಟಪಡಿಸಿಕೊಳ್ಳುವುದು ಅಗತ್ಯ. 'ಜೀವ' ಎಂದರೇನು ಎಂಬುದನ್ನು ವಿವರಿಸುವುದು ಸರಳವಲ್ಲ. ಆಧುನಿಕ ವಿಜ್ಞಾನದ ಈ ಕಾಲದಲ್ಲೂ ಸಹ 'ಜೀವ' ಎಂಬುದರ ವಿವರಣೆ ಬಹಳ ಸಂಕೀರ್ಣವಾದ ವಿಷಯವಾಗಿದೆ.

ಒಬ್ಬ ಮನುಷ್ಯನೋ ಅಥವಾ ಒಂದು ಪ್ರಾಣಿಯೋ ಸತ್ತಾಗ 'ಪ್ರಾಣ ಪಕ್ಷಿ ಹಾರಿಹೋಯಿತು' ಎಂದು ಜನಸಾಮಾನ್ಯರು ಮಾತನಾಡುವುದನ್ನು ನಾವು ಕೇಳುತ್ತೇವೆ. .. ..ಮನುಷ್ಯ ಅಥವಾ ಪ್ರಾಣಿಯ ದೇಹದೊಳಗೆ 'ಪ್ರಾಣ' ಎಂಬುದು ಮೊದಲಿಗೆ ಹೊರಗಿನಿಂದ ಬಂದು ಸೇರಿಕೊಂಡಿರುತ್ತದೆ.... ಆ ಜೀವಿಯು ಸತ್ತಾಗ ಆ 'ಜೀವ'ವು ಬಿಡುಗಡೆಗೊಂಡು ಹೊರಗೆ ಹೋಗುತ್ತದೆ.. .. ಎಂಬುದು ಈ ಮಾತಿನ ಹಿಂದಿನ ಕಲ್ಪನೆ. ಆದರೆ ಈ ಪರಿಕಲ್ಪನೆಗೆ ವೈಜ್ಞಾನಿಕವಾದ ಆಧಾರವಾಗಲಿ, ಸಮರ್ಥನೆಗಳಾಗಲಿ, ಸಾಕ್ಷ್ಯಗಳಾಗಲೀ ಇಲ್ಲ.

ಈ ಕುರಿತು ವೈಜ್ಞಾನಿಕ ದೃಷ್ಟಿಯಿಂದ ಯೋಚಿಸಿದಾಗ ಸಿಗುವ 'ಜೀವ'ದ ಪರಿಕಲ್ಪನೆಯೇ ಬೇರೆ. ಕೆಲವು ಲಕ್ಷಣಗಳನ್ನು ಗುರುತಿಸುವ ಮೂಲಕ 'ಜೀವ' ಎಂದರೇನು ಎಂಬ ಪರಿಕಲ್ಪನೆಯನ್ನು ಅರ್ಥ ಮಾಡಿಕೊಳ್ಳಲು ಪ್ರಯತ್ನಿಸಬಹುದು.


ನಿರ್ಜೀವ ವಸ್ತುವಿಗಿಂತ ಭಿನ್ನವಾದ ಜೀವಂತ ವಸ್ತುವಿನ ಲಕ್ಷಣಗಳನ್ನು ಹೀಗೆ ನಿರೂಪಿಸಬಹುದು ಅನಿಸುತ್ತದೆ. "ಜೀವಂತ ವಸ್ತುಗಳು ಬೆಳೆಯಬಲ್ಲವು. ಅವು ಪುನರುತ್ಪಾದನೆ ಮಾಡಿಕೊಳ್ಳಬಲ್ಲವು. ತಮ್ಮನ್ನು ತಾವೇ ದುರಸ್ತಿ ಮಾಡಿಕೊಳ್ಳಬಲ್ಲವು."

ಹೀಗೆಂದು ಹೇಳಿದಾಕ್ಷಣ ಜೀವದ ಕುರಿತು ಎಲ್ಲವನ್ನೂ ಹೇಳಿದಂತಾಗುವುದಿಲ್ಲ.

'ಜೀವಕೋಶ'ದೊಳಗಿನ ಲೋಕ

ಮನುಷ್ಯನ ಒಂದು ಜೀವಕೋಶ ಹೇಗಿರುತ್ತದೆ.? ವಿಜ್ಞಾನಿಗಳು ಕಂಡುಕೊಂಡಿರುವಂತೆ ಪ್ರತಿಯೊಂದು ಕೋಶವು ಸ್ವತಂತ್ರ. ಪ್ರತಿಯೊಂದು ಕೋಶಕ್ಕೂ ಬದುಕಿರಲು ಆಹಾರ ಬೇಕು. ಆಹಾರವನ್ನು ಸ್ವೀಕರಿಸುತ್ತದೆ. ಹಾಗೇ ತ್ಯಾಜ್ಯ ಪದಾರ್ಥಗಳನ್ನು ಹೊರಹಾಕುತ್ತದೆ. ಕೋಶಕ್ಕೊಂದು ಕೇಂದ್ರ ಇರುತ್ತದೆ. ಕೋಶದ ಸುತ್ತಲು ಕೋಶಪೊರೆಯ ಆವರಣ ಇರುತ್ತದೆ. ನಡುವೆ ಜೀವದ್ರವ ಇರುತ್ತದೆ. ಕೋಶಕೇಂದ್ರದಲ್ಲಿ ಡಿಎನ್‌ಎ ಇರುತ್ತದೆ. ಮತ್ತು ಆರ್‌ಎನ್‌ಎ ಡಿಎನ್‌ಎ ಇಂದ ಜೀನ್‌ಗಳನ್ನು ನಕಲು ಮಾಡಿಕೊಂಡು ಜೀವರಸದೊಳಕ್ಕೆ ಬರುತ್ತದೆ.

ಜೀವಕೋಶ ಎಂದರೆ ತಮ್ಮನ್ನೆ ತಾವು ನಕಲು ಮಾಡಿಕೊಳ್ಳಬಲ್ಲಂತಹ, ಜೀವಿಯ ಕನಿಷ್ಟ ಘಟಕ. ನಿರ್ಜೀವ ವಸ್ತುಗಳು ಪರಮಾಣುಗಳಿಂದ ಕೂಡಿರುವಂತೆ, ಜೀವಂತ ವಸ್ತುಗಳು ಜೀವಕೋಶಗಳಿಂದ ಕೂಡಿವೆ. ಜೀವಿಯೊಂದನ್ನು ಕಟ್ಟಡ ಎಂದು ಕರೆಯಬಹುದಾದರೆ ಜೀವಕೋಶವನ್ನು ಇಟ್ಟಿಗೆಗಳು ಎಂದು ಕರೆಯಬಹುದೆಂಬ ಜನಪ್ರಿಯ ಹೋಲಿಕೆಯನ್ನು ಜೀವಶಾಸ್ತ್ರದ ಪುಸ್ತಕಗಳಲ್ಲಿ ಕೊಡಲಾಗಿದೆ.



ಮನುಷ್ಯನ ಜೀವಕೋಶದ ಚಿತ್ರ.

ಜೀವ ಹುಟ್ಟಿದ್ದು ಹೇಗೆ?

ವಿಜ್ಞಾನದ ಹಲವು ಅಧ್ಯಯನಗಳು, ಸಂಶೋಧನೆಗಳು ಜೀವೋತ್ಪತ್ತಿಯು ಭೂಮಿಯ ಮೇಲಿನ ಭೌತ-ರಾಸಾಯನಿಕ ಕ್ರಿಯೆಗಳಿಂದ ಜರುಗಿದ ಆಕಸ್ಮಿಕ ಘಟನೆ ಎಂದು ಹೇಳಿವೆ.

'ಜೀವ', 'ನಿರ್ಜೀವ' ಮುಂತಾದ ವಿಷಯಗಳ ಮೇಲೆ ಭಾರತೀಯ ಪರಂಪರೆಯಲ್ಲಿಯೂ ಸಹ ಚರ್ಚೆಯನ್ನು ಕಾಣಬಹುದು. ಸುಮಾರು ಕ್ರಿಸ್ತಪೂರ್ವ ಹತ್ತನೇ ಶತಮಾನದ ಛಾಂದೋಗ್ಯ ಉಪನಿಷತ್ತಿನಲ್ಲಿ ಬರುವ ಉದ್ದಾಲಕ ಆರುಣಿಯು ಪ್ರಕಾರ 'ಮೊದಲಿಗೆ ಈ ವಿಶ್ವವೆಲ್ಲಾ 'ಸತ್' ಮಾತ್ರವಾಗಿತ್ತು' ಹಾಗೂ 'ಸಜೀವ ಮತ್ತು ನಿರ್ಜೀವ ವಸ್ತುಗಳೆಲ್ಲವೂ 'ಸತ್'ನಿಂದ ಉದ್ಭವಿಸಿದವು'

ಕ್ರಿಸ್ತಶಕ 5-6 ಶತಮಾನದ್ದೆಂದು ಅಂದಾಜಿಸಲಾಗಿರುವ ಚರಕ ಸಂಹಿತೆಯು ಒಂದು ವೈದ್ಯಕೀಯ ಶಾಸ್ತ್ರ ಗ್ರಂಥವಾದರೂ ಅದರಲ್ಲಿ ಹೇಳಲಾಗಿರುವ ಈ ಮಾತನ್ನು ವಿಶೇಷವಾಗಿ ಗಮನಿಸಬೇಕು.

"ಲೋಕದಲ್ಲಿರುವುದೆಲ್ಲಾ ಐದು ವಿಧದ ಭೌತದ್ರವ್ಯಗಳು(ಪಂಚಭೂತಗಳು), ಅವುಗಳಲ್ಲಿ ಕೆಲವೊಮ್ಮೆ ಪ್ರಜ್ಞೆ ಮೂಡಿರಬಹುದು. ಕೆಲವೊಮ್ಮೆ ಪ್ರಜ್ಞೆ ಮೂಡಿಲ್ಲದಿರಬಹುದು." (1.26.10: ಸರ್ವಂ ದ್ರವ್ಯಂ ಪಾಂಚಭೌತಿಕಮಸ್ಮಿನ್ನರ್ಥೇ, ತಚ್ಚೇತನಾವದಚೇತನಂಚ) ಈ ಮೇಲಿನ ಎರಡೂ ಮಾತುಗಳನ್ನು ವಿಜ್ಞಾನ ಎಂದು ಭಾವಿಸುವುದಕ್ಕಿಂತಲೂ 'ತತ್ವಶಾಸ್ತ್ರ' ಎಂದು ನೋಡುವುದು ಹೆಚ್ಚು ಒಳ್ಳೆಯದು. ಇಲ್ಲದಿದ್ದಲ್ಲಿ ಪ್ರಾಚೀನ ಕಾಲದಲ್ಲಿಯೇ ಭಾರತೀಯರಿಗೆ ಜೀವ ಹೇಗೆ ಉಗಮವಾಗಿದೆ ಎಂಬ ಬಗ್ಗೆ ತಿಳಿದಿತ್ತು ಎಂಬ ತೀರ್ಮಾನಕ್ಕೆ ಬಂದುಬಿಡುವ ಅಪಾಯವಿದೆ. ಈ ತಿಳುವಳಿಕೆಯನ್ನು ವಿಜ್ಞಾನ ಎನ್ನುವುದಕ್ಕಿಂತಲೂ ಊಹೆ ಎಂದು ಹೇಳಬಹುದು.

ನಿರ್ಜೀವ ವಸ್ತುಗಳಿಂದ 'ಜೀವ'

ಭೂಮಿಯ ಮೇಲೆ ಜೀವದ ಉಗಮ ಹೇಗೆ ಆಗಿದೆ ಎನ್ನುವುದು ಅಗಾಧ ಕುತೂಹಲದ ವಿಷಯ. ನಿರ್ಜೀವ ವಸ್ತುಗಳಿಂದ ಜೀವ ಹೇಗೆ ಹುಟ್ಟಲು ಸಾಧ್ಯ ಎಂಬ ಪ್ರಯೋಗವನ್ನು ಸಹ ವಿಜ್ಞಾನಿಗಳು ಮಾಡಿ ಸಾಕಷ್ಟು ಒಳ್ಳೆಯ ಒಳನೋಟಗಳನ್ನು ಪಡೆದುಕೊಂಡಿದ್ದಾರೆ. ಈ ವಿಷಯದ ಒಳಕ್ಕೆ ಹೋಗುವ ಮೊದಲು ನಾವು ಕೆಲವು ಮುಖ್ಯ ವಿಷಯಗಳನ್ನು ಅರ್ಥ ಮಾಡಿಕೊಳ್ಳಬೇಕು. ನಮ್ಮ ಸುತ್ತ ಮುತ್ತ ನಾವು ನೋಡುತ್ತಿರುವ ವಸ್ತುಗಳೆಲ್ಲವೂ, ಶಕ್ತಿಗಳೆಲ್ಲವೂ ರಾಸಾಯನಿಕ ವಸ್ತುಗಳ ವಿವಿಧ ರೂಪವೇ. ವಸ್ತುವು ಕಲ್ಲು, ಮಣ್ಣು, ಖನಿಜ ಮುಂತಾದ ಘನರೂಪದಲ್ಲೂ, ನೀರು ಮುಂತಾದ ದ್ರವರೂಪದಲ್ಲೂ, ಗಾಳಿ, ಹೊಗೆ ಮುಂತಾದ ಅನಿಲ ರೂಪದಲ್ಲಿಯೂ ಇದೆ. ಬೆಳಕು, ಶಾಖ, ಕಾಂತೀಯ ತರಂಗಗಳು, ವಿಕಿರಣ ಇತ್ಯಾದಿಗಳು ಸಹ 'ವಸ್ತು'ವಿನ ಬೇರೆ ಬೇರೆ ರೂಪಗಳೇ.

'ಮೂಳೆ ಮಾಂಸದ ತಟಿಕೆ' ಎನ್ನಲಾಗುವ ಮನುಷ್ಯನ ದೇಹದಲ್ಲಿ ಸರಿಸುಮಾರು ಮುಕ್ಕಾಲು ಪಾಲು ನೀರೇ ಇದೆ. ಉಳಿದಂತೆ ಇರುವುದು ಕೂಡ ರಾಸಾಯನಿಕ ವಸ್ತುಗಳೇ.

ಮನುಷ್ಯನ ದೇಹದ ರಾಸಾಯನಿಕ ಸಂಯೋಜನೆ

1.	**ಆಮ್ಲಜನಕ-(ಆಕ್ಸಿಜನ್- ಓ-)**	**65.0** %
2.	**ಇಂಗಾಲ- (ಕಾರ್ಬನ್-ಸಿ-)**	**18.5** %
3.	**ಜಲಜನಕ-(ಹೈಡ್ರೋಜನ್-ಎಚ್-)**	**9.5** %
4.	**ನೈಟ್ರೋಜೆನ್ (ಎನ್)**	**3.2** %
5.	**ಕ್ಯಾಲ್ಷಿಯಂ (ಸಿಎ)**	**1.5** %
6.	**ಪ್ರಾಸ್ಪರಸ್ (ಪಿ)**	**1.0** %
7.	**ಸಲ್ಫರ್ (ಎಸ್)**	**0.3** %
8.	**ಸೋಡಿಯಂ (ಎನ್‌ಎ)**	**0.2** %
9.	**ಮ್ಯಾಗ್ನಿಷಿಯಂ (ಎಂ.ಜಿ.)**	**0.1** %

ಇಲ್ಲಿ ಪ್ರಸ್ತಾಪಿಸಲಾಗಿರುವ ರಾಸಾಯನಿಕ ವಸ್ತುಗಳೆಲ್ಲ ಸೇರಿದರೆ ಮನುಷ್ಯನ ದೇಹದ ಶೇ. 99 ರಷ್ಟು ಮೀರಿ ಹೋಗುತ್ತದೆ. ಇನ್ನುಳಿದದ್ದು ಸಹ ಇತರೆ ರಾಸಾಯನಿಕ ಅಂಶಗಳು.

ಒಂದು ಜೀವಿ ಎಂದರೆ ವಿವಿಧ ರಾಸಾಯನಿಕ ವಸ್ತುಗಳ ಒಂದು ನಿರ್ದಿಷ್ಟ ಸ್ವರೂಪದ ಸಂಯೋಜನೆಯಲ್ಲಿ ನಡೆಯುವ ಜೈವಿಕ-ರಾಸಾಯನಿಕ ಪ್ರಕ್ರಿಯೆಗಳ ಸ್ಥಿತಿ. ಜೈವಿಕ-ರಾಸಾಯನಿಕ ವಸ್ತುಗಳ ನಡುವಿನ ಕ್ರಿಯಾ ಸರಣಿ ಆ ನಿರ್ದಿಷ್ಟ ಸ್ವರೂಪದಲ್ಲಿರುವುದು ತಪ್ಪಿದರೆ ಜೈವಿಕ ಕ್ರಿಯೆ ನಿಂತು 'ಜೀವಿ ಸಾಯುತ್ತದೆ'. 'ಸಾವು' ಎಂದರೆ ಹಲವು ನಿರ್ದಿಷ್ಟ ಜೈವಿಕ-ರಾಸಾಯನಿಕ ಕ್ರಿಯಾ ಸರಣಿಗಳು ನಿಲ್ಲುವುದು. ಅಥವಾ ಈ ನಿರ್ದಿಷ್ಟ ಕ್ರಿಯಾ ಸರಣಿಯು ಬೇರೆ ಸ್ವರೂಪವನ್ನು ಪಡೆದುಕೊಳ್ಳುವುದು ಎನ್ನಬಹುದು.

ಜಗತ್ತಿನ ಅಸ್ತಿತ್ವಕ್ಕೆ ಆಧಾರವಾಗಿರುವ ಮೂಲ ವಸ್ತುಗಳು

ಜಗತ್ತಿನಲ್ಲಿ ನಾವು ನೋಡುವ ಎಲ್ಲ ವಸ್ತುಗಳು 'ಕಣ'ಗಳಿಂದ ಮಾಡಲ್ಪಟ್ಟಿವೆ. ಪ್ರಾಚೀನ ಭಾರತದ ವಿಜ್ಞಾನಿ 'ಕಣಾದ' ಈ ವಿಷಯವನ್ನು 2000 ವರ್ಷಗಳಿಗೂ ತುಂಬಾ ಹಿಂದೆಯೇ ಹೇಳಿದ್ದಾನೆ.


ನಮ್ಮ ಮನೆಗಳಲ್ಲಿ ಅಡುಗೆಗೆ ಬಳಸುವ ಉಪ್ಪು ಇರುತ್ತದೆ. ಈ 'ಉಪ್ಪು' ಎಂಬುದು ಸೋಡಿಯಂ ಮತ್ತು ಕ್ಲೋರೈಡ್ ಎಂಬ ಎರಡು ರಾಸಾಯನಿಕ ಮೂಲಧಾತುಗಳಿಂದ ರಚನೆಯಾಗಿದೆ. ಒಂದು ಚಮಚೆ ಪುಡಿ ಉಪ್ಪಿನಲ್ಲಿ ಟ್ರಿಲಿಯನ್‌ಗಟ್ಟಲೇ ಪರಮಾಣುಗಳು ಇರಬಹುದು. ಪರಮಾಣು ಕಣ ಎಂದರೆ ಅಷ್ಟು ಸುಲಭವಾಗಿ ಮತ್ತೆ ವಿಭಜಿಸಲು ಸಾಧ್ಯವಿಲ್ಲದ ಅತಿ ಸಣ್ಣ ಅಣು. ಇದೇ ರೀತಿ ನೀರು. ಆಮ್ಲಜನಕದ ಒಂದು ಅಣು, ಜನಜನಕದ ಎರಡು ಅಣುಗಳು ಸೇರಿದರೆ ಒಂದು ನೀರಿನ ಪರಮಾಣು ರಚನೆಯಾಗುತ್ತದೆ. ಇಂಗ್ಲೀಷ್ ವರ್ಣಮಾಲೆಯಲ್ಲಿ ABCD...ಯಿಂದ ಆರಂಭಿಸಿ..XYZ ರವರೆಗೆ 26 ಅಕ್ಷರಗಳು ಮಾತ್ರ ಇವೆ. ಆದರೆ ಈ ಅಕ್ಷರಗಳನ್ನು ಬೇರೆ ಬೇರೆ ರೀತಿಯಲ್ಲಿ ಜೋಡಿಸಿದಾಗ ಲಕ್ಷಾಂತರ ಪದಗಳು ಉಂಟಾಗುತ್ತವೆ. ಲಕ್ಷಾಂತರ ಅರ್ಥಗಳನ್ನು ಕೊಡುತ್ತವೆ. ಹಾಗೆಯೇ ಈ ಜಗತ್ತಿನಲ್ಲಿ ಇಂಗಾಲ, ಆಮ್ಲಜನಕ, ಜಲಜನಕ ಮುಂತಾದ ಒಟ್ಟು 118 ಮೂಲ ವಸ್ತುಗಳಿವೆ. (ಈ 118 ಮೂಲ ವಸ್ತುಗಳಲ್ಲಿ 82 ಮೂಲವಸ್ತುಗಳು ಸ್ಥಿರವಾದವು. ಉಳಿದವು ಸ್ಥಿರವಲ್ಲ(Unstable).) ಈ ಮೂಲವಸ್ತುಗಳು ಬೇರೆ ಬೇರೆ ಮೂಲವಸ್ತುಗಳೊಂದಿಗೆ ಬೆರೆಯುವುದರಿಂದ ಬೇರೆ ಬೇರೆ ಸಂಯುಕ್ತ ವಸ್ತುಗಳು ಉಂಟಾಗುತ್ತವೆ.

ಸಸ್ಯಗಳಿಗೂ ಜೀವ ಇದೆ ಎಂಬುದು ಗೊತ್ತಲ್ಲವೇ. ಸಸ್ಯಗಳಲ್ಲಿ, ಸಸ್ಯಗಳು ಬಿಡುವ ಹೂ, ಹಣ್ಣು, ಕಾಯಿ ಎಲ್ಲದರಲ್ಲೂ ಜೀವಕೋಶಗಳು ಇರುತ್ತವೆ. ಪ್ರಾಣಿಗಳಲ್ಲೂ ಅಷ್ಟೆ.

ಈ ಜಗತ್ತಿನಲ್ಲಿ ಕೋಟಿ-ಕೋಟಿ ಸಂಖ್ಯೆಯಲ್ಲಿರುವ ಎಲ್ಲ ಜೀವಂತ ಮತ್ತು ನಿರ್ಜೀವ ವಸ್ತುಗಳನ್ನು ಅಕ್ಕಿಹಿಟ್ಟು ರುಬ್ಬುವಂತೆ ಮಹಾ ದೈತ್ಯ 'ಮಿಕ್ಸಿ'ಯೊಂದರಲ್ಲಿ ರುಬ್ಬಿ ನುಣ್ಣನೆಯ ರಸ ಮಾಡಿಬಿಟ್ಟು ಆಮೇಲೆ ರಾಸಾಯನಿಕವಾಗಿ ರಸವನ್ನು ಸಂಪೂರ್ಣವಾಗಿ ವಿಭಜಿಸಿ ವಿಭಜಿಸಿ ಶೋಧಿಸಿ ನೋಡಿದರೆ ಅದರಲ್ಲಿ ಒಟ್ಟಾರೆ 118 ಬಗೆಯ ಮೂಲವಸ್ತುಗಳು ಮಾತ್ರ ದೊರೆಯುತ್ತವೆ. ಈ ಜಗತ್ತಿನಲ್ಲಿ ಈ 118 ಮೂಲವಸ್ತುಗಳು ಮತ್ತು ಅವುಗಳ ನಾನಾ ಬಗೆಯ ನಾನಾ ಪ್ರಮಾಣದ ಸಂಯೋಜನೆಯಿಂದ ಉಂಟಾದ ಸಂಯುಕ್ತವಸ್ತುಗಳನ್ನು ಬಿಟ್ಟು ಬೇರೇನೂ ಇಲ್ಲ.

ರಾಸಾಯನಿಕ ವಸ್ತುಗಳ ಸಂಯೋಜನೆಯಿಂದ ಜೀವಕೋಶದಲ್ಲಿರುವ 'ಅಮಿನೋ ಆಸಿಡ್' ಸೃಷ್ಟಿ

ನಿರ್ಜೀವ ವಸ್ತುಗಳಿಂದ ಜೀವ ಹೇಗೆ ಹುಟ್ಟಲು ಸಾಧ್ಯ ಎಂಬ ಪ್ರಯೋಗವನ್ನು ಸಹ ವಿಜ್ಞಾನಿಗಳು ಮಾಡಿ ಸಾಕಷ್ಟು ಒಳ್ಳೆಯ ಒಳನೋಟವನ್ನು ಪಡೆದುಕೊಂಡಿದ್ದಾರೆ.



ಮಾನವ ದೇಹದ ರಾಸಾಯನಿಕ ಸಂಯೋಜನೆ

ವಿಜ್ಞಾನಿಗಳ ಪ್ರಯೋಗ-ಪ್ರಯತ್ನದಲ್ಲಿ ಏಕಕೋಶ ಜೀವಿಯಾದ ಬ್ಯಾಕ್ಟೀರಿಯಾ ಅಥವ ಬಹುಕೋಶ ಜೀವಗಳನ್ನು ಸೃಷ್ಟಿ ಮಾಡಲು ಸಾಧ್ಯವಾಗಿಲ್ಲ. ಆದರೆ ಸೂಕ್ಷ್ಮಜೀವಿಗಳು ಹೇಗೆ ಸೃಷ್ಟಿಯಾಗಿರಬಹುದು ಎಂಬುದನ್ನು ಕಂಡುಕೊಳ್ಳುವುದಕ್ಕೆ ಪೂರಕವಾದ, ಅತಿಸೂಕ್ಷ್ಮವಾದ ಜೈವಿಕ ಘಟಕವನ್ನು ಪಡೆದುಕೊಳ್ಳುವಂತಹ, ಜೀವಸೃಷ್ಟಿಗೆ ಹತ್ತಿರವಾದ ಪ್ರಯೋಗವನ್ನು ಮಾಡುವಲ್ಲಿ ಮಾನವನು ಯಶಸ್ಸು ಸಾಧಿಸಿದ್ದಾನೆ. ಆದಿಮ ಕಾಲದಲ್ಲಿ ಭೂಮಿಯ ಮೇಲೆ ಇದ್ದಂತಹ ವಾತಾವರಣವನ್ನು ಸೃಷ್ಟಿಮಾಡುವ ಪ್ರಯತ್ನದೊಂದಿಗೆ ಈ ಪ್ರಯೋಗ ನಡೆದಿದೆ. ಪ್ರಯೋಗ ಪಾತ್ರೆಯಲ್ಲಿ ರಾಸಾಯನಿಕಗಳಾದ ಅಮೋನಿಯಾ, ಹೈಡ್ರೋಜನ್, ಮಿಥೇನ್ ಮತ್ತು ನೀರನ್ನು ಸೇರಿಸಿ ಶಕ್ತಿಶಾಲಿ ವಿದ್ಯುತ್ತನ್ನು ಹಾಯಿಸಿದಾಗ ಫಲಿತಾಂಶದಲ್ಲಿ 'ಅಮಿನೋ ಆಸಿಡ್'ಗಳನ್ನು ಪಡೆದುಕೊಳ್ಳಲಾಗಿದೆ. ಈ 'ಅಮಿನೋ ಆಸಿಡ್' ಜೀವದ ಸೃಷ್ಟಿಗೆ ಅನುಕೂಲವಾಗುವ

ಪುಟ 10 ಕ್ಕೆ

JANASHAKTHI KANNADA VARA PATRIKE: Printed, Published by **G.N.NAGARAJ**, No. 12, 18th Cross, Sampangirama Nagar, Bangalore 560027, Karnataka on behalf of **COMMUNIST PARTY OF INDIA (MARXIST)** and **Printed at : Kriya Prakashana,** No. 12, 18th Cross, Sampangirama Nagar, Bangalore 560027
Editor : **G.V.SRIRAMA REDDY**